ಅಪರಂಜಿ

ತಿಳಿನಗೆಯ ಕಾರಂಜಿ



ಬೆಳ್ಳಿ ಹಬ್ಬದ ವರ್ಷ

ಅಕ್ಟೋಬರ್ - 2008





ಹಾಗಾದ್ರೆ ನಿಮ್ಗೆ ಯಾವುದೂ ಅನುಭವ ಇಲ್ಲ ಅಂದ ಹಾಗಾಯ್ತು. ನೀವೇ ಯಾಕೆ ಒಂದು ಕನ್ಸಲ್ಟೆನ್ಸಿ ಶುರು ಮಾಡ್ಬಾರ್ದು?

ಬಿಡಿ ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 26
ಸಂಚಿಕೆ - 1
ಅಕ್ಟೋಬರ್ - 2008

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ.....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



● ಪ್ರಕಾಶ್

ಲಿಫ್ಟ್‌ನಲ್ಲಿ ಸಿಕ್ಕಿಕೊಂಡ ನ್ಯಾಯಮೂರ್ತಿಗಳು - ಚೆನ್ನೈ ಸುದ್ದಿ

● ತೀರ ಅನ್ಯಾಯ

★★★

ಚರ್ಚ್ ಮೇಲೆ ಧಾಳಿ - ಮಂಗಳೂರು ಸುದ್ದಿ

● ಇದರ ಬಗ್ಗೆ ಚರ್ಚೆ ಖಂಡಿತ

★★★

ಚುನಾವಣೆಗಳಲ್ಲಿ ಸ್ಪರ್ಧಿಸುವುದಿಲ್ಲ - ದೇವೇಗೌಡರು

● ಆಶ್ವಾಸನೆಗಾಗಿ ವಂದನೆಗಳು

★★★

ಕನಸು ಕಾಣಲೇನಡ್ಡಿ - ಅಂಕಣದ ಶೀರ್ಷಿಕೆ

● ನಿದ್ರಾಹೀನತೆ

★★★

20,000 ಸಾವಿರ ನೋಟಿನ ಮೇಲೆ ಗಣೇಶ - ಮಲೇಶಿಯಾದಲ್ಲಿ

● ಈ ತೆರನ ಸಹಿಷ್ಣುತೆ ಎಲ್ಲೆಲ್ಲೂ ಹರಡಲಿ

★★★

ಡಿಸೆಂಬರ್‌ನಲ್ಲಿ ಖಾಸಗೀ ಪತ್ತೇದಾರರ ಸಮಾವೇಶ - ಪತ್ರಿಕೆ

● ಎಲ್ಲಿ ಎಂಬುದನ್ನು ತಿಳಿಸುತ್ತಾರೋ

★★★

ಕಾರು ತಯಾರಿಕೆ ಕ್ಷೇತ್ರಕ್ಕೆ ಹಿಂದುಜಾ

● ಇದಕ್ಕೆ ಅವರು ಮುಂದಾಗುವುದು ಒಳ್ಳೆಯದು

★★★

ನಕಲಿ ವೀಸಾ ಸೃಷ್ಟಿಕರ್ತನ ಬಂಧನ - ಪತ್ರಿಕೆ

● **Very Interesting Social Activity**

★★★

ನಿರ್ಭೀತರಾಗಿ ಕೆಲಸ ಮಾಡಲು ಪತ್ರಕರ್ತರಿಗೆ ಸಲಹೆ - ಶೀರ್ಷಿಕೆ

● ಯಾರಿಂದ ಭೀತಿ

★★★

ಕಡಲೀಚೆಯ ಕುಡಿನೋಟ

- ಶಿವು

ಮೊನ್ನೆ ನನ್ನ ಗೆಳೆಯ ಅಲನ್‌ನನ್ನು ಭೇಟಿಮಾಡಲು ಕಾನ್ವೇಗೆ ಹೋಗಿದ್ದೆ. ಕಾನ್ವೇ, ವೇಲ್ಸ್‌ನಲ್ಲಿರುವ ಒಂದು ಪುಟ್ಟ ಹಳ್ಳಿ. ನಾನು ಈಚಿನ ದಿನಗಳಲ್ಲಿ ಅನೇಕ ಬಾರಿ ಈ ಊರಿಗೆ ಬಂದಿದ್ದೇನೆ. ಹಾಯಿಪಟದ ದೋಣಿಗಳಿಂದ ತುಂಬಿರುವ ಮೆರೀನಾ, ಊರಿನ ಒಂದು ಬದಿಯಲ್ಲಿ ಮೈಚಾಚಿ ಮಲಗಿರುವ, ಚಾಮುಂಡಿ ಬೆಟ್ಟವನ್ನು ನೆನಪಿಸುವ ಕಾನ್ವೇ ಬೆಟ್ಟ, ಮರೀನಾದ ಆಸುಪಾಸಿನಲ್ಲಿ ಹಾರಾಡುತ್ತಿರುವ ಬಿಳಿಯ ಗಲ್ ಹಕ್ಕಿಗಳು ಇವೆಲ್ಲಾ ಪ್ರತಿಸಾರಿ ಬಂದಾಗಲೂ ಒಂದು ಹೊಸನೋಟವನ್ನು ನೀಡುತ್ತವೆ.

ಕ್ಲಾಂಡುಡ್ನೋ ಜಂಕ್ಷನ್ ರೇಲ್ವೇ ನಿಲ್ದಾಣದಲ್ಲಿ ನಾನು ಇಳಿದಾಗ ಅಲನ್ ನನಗಾಗಿ ಕಾದು ನಿಂತಿದ್ದ.

"ಹಲೋ ಕೂಮರ್, ಕಾನ್ವೇಗೆ ಸ್ವಾಗತ. ಇನ್ನೊಂದು ಎರಡು ಮೂರು ದಿನ ನಿನಗೆ ಬಿಡುವಿಲ್ಲದ ಕಾರ್ಯಕ್ರಮ ಅರೇಂಜ್ ಮಾಡಿದ್ದೇನೆ. ನಾಳೆ ಬೆಳಗ್ಗೇನೇ ಟ್ರೆವರ್‌ಗೆ ಹೋಗಬೇಕು. ಜಿಮ್ ಕೂಡ ಬರಲು ಒಪ್ಪಿದ್ದಾನೆ. ಅಲ್ಲಿಂದ ಒಂದು ಕಾಲುವೆ ದೋಣಿ ಬಾಡಿಗೆಗೆ ತೆಗೆದುಕೊಂಡು ದಿನವೆಲ್ಲಾ ದೋಣಿವಿಹಾರ ಮಾಡಿಬರೋಣ" ಎನ್ನುತ್ತಾ ಅಲನ್ ಬಹು ಆತ್ಮೀಯತೆಯಿಂದ ನನ್ನನ್ನು ಬರಮಾಡಿಕೊಂಡ.

ಮಾರನೆಯ ದಿನ ನಾವು ಮೂವರೂ ಜಿಮ್‌ನ ಕಾರಿನಲ್ಲಿ ಟ್ರೆವರ್‌ಗೆ ಹೊರಟೆವು.

ಬ್ರಿಟನ್ನಿನಲ್ಲಿರುವ ಕಾಲುವೆ ಜಾಲಕ್ಕೆ ಒಂದು ಅತಿ ಪುರಾತನ ಐತಿಹ್ಯವಿದೆ. ಕಾರುಬಸ್ಸುಗಳ ಬಳಕೆಗಿಂತಲೂ ಬಹು ಮುಂಚೆಯೇ ದೇಶಾದ್ಯಂತ ಸರಕು ಸಾಗಣೆಯನ್ನು ಈ ಕಾಲುವೆಗಳ ಮೂಲಕವೇ ಮಾಡುತ್ತಿದ್ದರಂತೆ. ಹಾಗಾಗಿ ಬಹು ವ್ಯಾಪಕವಾಗಿ ಹರಡಿರುವ ಈ ಕಾಲುವೆ ಜಾಲವನ್ನು ಬಳಸಿ ಎಲ್ಲಿಂದೆಲ್ಲಿಗೆ ಬೇಕಾದರೂ ಪ್ರಯಾಣ ಮಾಡಬಹುದಾಗಿತ್ತು. ಹೆಚ್ಚು ವೇಗದ ವಾಹನಗಳ ಬಳಕೆ ಶುರುವಾದ ನಂತರವೂ ಈ ಕಾಲುವೆ ಜಾಲವನ್ನು ಹಿಂದಿನಂತೆಯೇ ಕಾಪಾಡಿಕೊಂಡು ಬಂದಿದ್ದಾರೆ ಇಲ್ಲಿನ ಜನ. ಅವುಗಳ ಬಳಕೆ ಮಾತ್ರ ಈಗಿನ ದಿನಗಳಲ್ಲಿ ಪ್ರವಾಸಿಗರ ದೋಣಿವಿಹಾರಕ್ಕೆ ಮಾತ್ರ ಸೀಮಿತವಾಗಿದೆ. ಹದಿನೆಂಟನೆಯ ಶತಮಾನದಲ್ಲಿ ನಿರ್ಮಿತವಾದ ಈ ಕಾಲುವೆಗಳು ಒಂದು ವಿಧದಲ್ಲಿ ಇಂಜಿನಿಯರಿಂಗ್ ಅದ್ಭುತಗಳೆನ್ನಬಹುದು. ಗುಡ್ಡಗಳನ್ನು ದಾಟಬೇಕಾದರೆ ಲಾಕ್‌ಗಳೆಂಬ ಬಾಗಿಲುಗಳನ್ನು ಬಳಸಿ ಹಂತ ಹಂತವಾಗಿ ದೋಣಿಗಳನ್ನು ಎತ್ತರಕ್ಕೆ ಏರಿಸಿ, ಅನಂತರ ಇಳಿಸುವ ವ್ಯವಸ್ಥೆ ನಿಜಕ್ಕೂ ವಿಸ್ಮಯ ಮೂಡಿಸುವ ಸಂಗತಿ.

ನಾವು ಟ್ರೆವರ್ ಸೇರಿದಾಗ ಬೆಳಗ್ಗೆ ಹತ್ತು ಗಂಟೆ. ಅಲನ್ ನಮಗಾಗಿ ಕಾದಿರಿಸಿದ್ದ ದೋಣಿಯ ಹೆಸರು ಪಟ್ರೀಷಿಯಾ. ಹತ್ತು ಜನಗಳನ್ನು ಕೂರಿಸಿ ಯಾನ ಮಾಡಬಹುದಾಗಿದ್ದ ಆ ದೋಣಿಯಲ್ಲಿ ಒಂದು ದಿನದ ಪ್ರಯಾಣಕ್ಕೆ ಬೇಕಾಗುವ ಎಲ್ಲ ಅನುಕೂಲಗಳೂ ಇದ್ದವು. ಕಾಫಿ ಟೀ ಮಾಡಿಕೊಳ್ಳಲು ಕಿಚನೆಟ್, ಬಾತ್‌ರೂಮ್, ಇವೆಲ್ಲಾ ಅಳವಡಿಸಿದ್ದ ಆ ದೋಣಿಯನ್ನು ನಮಗೆ ವಹಿಸಿಕೊಡಲು ಮ್ಯಾನೇಜರ್ ಒಬ್ಬ ಬಂದ. ಅವನ ಕೈಯಲ್ಲಿ ಒಂದು

ಫಾರಂ. ನಮ್ಮೆಲ್ಲರ ಹೆಸರು, ವಿಳಾಸ, ನಮ್ಮ ಹತ್ತಿರದ ಸಂಬಂಧಿಗಳ ಹೆಸರು, ವಿಳಾಸ ಹಾಗೂ ಅವರ ದೂರವಾಣಿ ಸಂಖ್ಯೆ ಎಲ್ಲವನ್ನು ಫಾರಂನಲ್ಲಿ ತುಂಬುತ್ತಿದ್ದಂತೆ, ಆತಂಕದಿಂದ ನನಗಿದ್ದ ಉತ್ಸಾಹ ಅರ್ಧ ಇಳಿದುಹೋಯಿತು.

''ಈ ದೋಣಿಯಾನದಲ್ಲಿ ಅಪಾಯ ಏನೂ ಇಲ್ಲ ತಾನೆ?'' ಆದಷ್ಟು ಲೋಕಾಭಿರಾಮದ ದನಿಯಲ್ಲಿ ಕೇಳಿದೆ.

''ಛೇ, ಛೇ, ಅಪಾಯ ಏನು ಬಂತು. ಗಂಟೆಗೆ ನಾಲ್ಕು ಮೈಲಿ ವೇಗದಲ್ಲಿ ಹೋಗೋದು ನಾವು. ಅಂದ ಹಾಗೆ ನೀನೇ ದೋಣಿ ನಡೆಸಬೇಕು. ನೀನು ತಾನೆ ನಮ್ಮಲ್ಲಿ ಇಂಜಿನಿಯರ್.'' ಅಂದ ಜಿಮ್.

''ಕೂಮರ್, ದೋಣಿ ಹೊರಡುಕ್ಕೆ ಇನ್ನೂ ಸ್ವಲ್ಪ ಹೊತ್ತು ಆಗಬಹುದು. ಮುಂದಿನಿಂದ ಹಲವು ದೋಣಿಗಳು ಬರುತ್ತಿವೆಯಂತೆ. ನೀನು ಬೇಕಾದರೆ ಕಾಲುವೆ ಬದಿಯಲ್ಲಿ ಮುಂದೆ ನಡೆದು ಪಾಂಟ್ಸಿಸಿಲ್ಟ್ ಆಕ್ವಡಕ್ಟ್ ನೋಡಿಕೊಂಡು ಬರಬಹುದು.'' ಅಂದ ಅಲನ್.

ನಾನು ಕಾಲುವೆ ಬದಿಯಲ್ಲಿದ್ದ ಕಾಲುಹಾದಿಯಲ್ಲಿ ನಡೆದು ಹೊರಟೆ. ಸ್ವಲ್ಪ ದೂರ ಕೂಡ ನಡೆದಿಲ್ಲ, ನನ್ನ ಮುಂದೆ ಒಂದು ಆಳವಾದ ಕಣಿವೆ ಕಣ್ಣಿಗೆ ಬಿತ್ತು. ಕಣಿವೆಯ ತಳಭಾಗದಲ್ಲಿ ಒಂದು ನದಿ ಹರಿಯುತ್ತಿತ್ತು. ನಾನು ನಿಂತಿದ್ದ ಜಾಗದಿಂದ ಕಣಿವೆಯ ಆಚಿನ ಬೆಟ್ಟಕ್ಕೆ ಒಂದು ಅತಿ ಎತ್ತರದ ಸೇತುವೆ. ಈ ಸೇತುವೆಯ ಮೇಲೆ ನಮ್ಮ ಕಾಲುವೆ ಹಾದು ಹೋಗಿತ್ತು. ಇದನ್ನೇ ಅಲನ್ ಪಾಂಟ್ಸಿಸಿಲ್ಟ್ ಆಕ್ವಡಕ್ಟ್ ಎಂದು ಹೇಳಿದ್ದು. ಕಣಿವೆಯ ತಳಭಾಗದಿಂದ ನೂರ ಇಪ್ಪತ್ತು ಅಡಿ ಎತ್ತರದಲ್ಲಿ ಹರಿದು ಹೋಗುತ್ತಿದ್ದ ಈ ಕಾಲುವೆಯನ್ನು 1805ನೇ ಇಸವಿಯಲ್ಲಿ ಕಟ್ಟಿದ್ದಂತೆ. ನಮ್ಮ ದೋಣಿ ಇದರ ಮೇಲೆ ಹೋಗಬೇಕಾಗಿತ್ತು. ಕಾಲುವೆಯ ಅಗಲ ಕಿರಿದಾಗಿದ್ದುದರಿಂದ ಒಂದು ಬಾರಿ ಒಂದೇ ದೋಣಿ ಹಾದುಹೋಗಬಹುದಾಗಿತ್ತು. ಹಾಗಾಗಿ ಮುಂದಿನಿಂದ ಬರುತ್ತಿದ್ದ ಎಲ್ಲ ದೋಣಿಗಳೂ ನಮ್ಮ ತುದಿಗೆ ಬಂದು ಸೇರುವವರೆಗೂ ನಾವು ಹೊರಡುವಂತಿರಲಿಲ್ಲ. ನಮ್ಮ ತುದಿಯಲ್ಲಿ ಆಗಲೇ ಸುಮಾರು ದೋಣಿಗಳು ಹೊರಡಲೂ ಕ್ಯೂ ನಿಂತಿದ್ದವು. ನಾನು ದೋಣಿಗೆ ಹಿಂತಿರುಗಿದೆ. ಜಿಮ್ ದೋಣಿಯನ್ನು ಚಾಲನೆ ಮಾಡಿ ಕ್ಯೂನ ಹಿಂದಕ್ಕೆ ತಂದು ನಿಲ್ಲಿಸಿದ.

ನಮ್ಮ ಮುಂದೆ ನಿಂತಿದ್ದ ದೋಣಿಯಲ್ಲಿ ಒಬ್ಬ ಧಡೂತಿ ಆಸಾಮಿ ನಿಂತಿದ್ದ. ಆತನಿಗೆ ಹೊರವಾದ ಕೆಂಪು ಗಡ್ಡ. ನನ್ನನ್ನು ನೋಡಿ

"hello" ಅಂದ.

"How long have you been waiting here?" ಅಂತ ನಾನು ಕೇಳಿದೆ.

"Let me put it this way. When I climbed into the boat I was clean shaven" ಅಂದ ಅವ.

ಅಂತೂ ಸ್ವಲ್ಪ ಹೊತ್ತು ಕಾದ ಮೇಲೆ ನಮ್ಮ ದೋಣಿಗಳ ಮೆರವಣಿಗೆ ಹೊರಟಿತು. ನಮ್ಮ ದೋಣಿಯ ಅಗಲಕ್ಕಿಂತ ಕೆಲವೇ ಅಡಿಗಳಷ್ಟು ಅಗಲವಿದ್ದ ಆ ಕಾಲುವೆಯಲ್ಲಿ ಎರಡೂ ದಡಗಳಿಗೆ ಢಿಕ್ಕಿ ಹೊಡೆಯದೇ ಮುಂದೆ ಸಾಗುವುದೇ ಸಾಧ್ಯವಿರಲಿಲ್ಲ. ಆ ನೂರಿಪ್ಪತ್ತು

ಅಡಿಗಳಷ್ಟು ಆಳದ ಪ್ರಪಾತದ ಮೇಲೆ ದೋಣಿ ಹಾದು ಆಚೆ ದಡ ಸೇರುವ ಹೊತ್ತಿಗೆ ನಾನು ಐವತ್ತು ಗಾಯತ್ರಿ ಜಪ ಮುಗಿಸಿದ್ದೆ.

ಸ್ವಲ್ಪ ದೂರದಲ್ಲಿ ಒಂದು ಸುರಂಗ. ಇಲ್ಲೂ ಅಷ್ಟೆ ಒನ್ ವೇ ಟ್ರಾಫಿಕ್. ಮುಂದಿನ ದೋಣಿಗಳು ಬಂದ ನಂತರವೇ ನಮ್ಮ ಪಯಣ. ನಾವು ಹೋಗುತ್ತಿದ್ದಾಗ ಆಚೆ ಬದಿಯಿಂದ ಬರುವವರು ಕಾಯಬೇಕು. ಸುರಂಗದ ಆಚೆ ತುದಿಯಲ್ಲಿನ ದೋಣಿಯ ಹೆಡ್ ಲೈಟ್ ಉರಿಯುತ್ತಿದ್ದರೆ ಅವರು ಬರುತ್ತಿದ್ದಾರೆಂದು ಅರ್ಥ. ನಾವು ಹೊರಡುವಾಗ ನಾವೂ ನಮ್ಮ ಹೆಡ್ ಲೈಟ್ ಹಚ್ಚಿಕೊಂಡೇ ಹೊರಡಬೇಕಾಗಿತ್ತು. ಇವೆಲ್ಲ ನಮ್ಮ ಸ್ವಯಂ ನಿಯಂತ್ರಣಕ್ಕೇ ಬಿಟ್ಟಿದ್ದರು. ಒಂದು ಟ್ರಾಫಿಕ್ ಲೈಟ್ ಇಲ್ಲ, ಒಂದು ಟ್ರಾಫಿಕ್ ಪೋಲೀಸ್ ಇಲ್ಲ. ಬೆಂಗಳೂರಿನ ಆಟೋ ಚಾಲಕರಿಗೆ ಇಲ್ಲಿ ಒಂದು ತರಬೇತಿ ಶಿಬಿರ ಏರ್ಪಡಿಸಿದರೆ... ಎಂಬ ಭಾವನೆ ಮನದಲ್ಲಿ ಹಾದುಹೋಯಿತು.

ಸುತ್ತಲಿನ ಗಿಡ ಮರಗಳು, ಕಾಲುವೆ ಬದಿಯಲ್ಲಿನ ಹಳ್ಳಿಗಳಲ್ಲಿನ ಪುಟ್ಟ ಮನೆಗಳು ಇವುಗಳ ದೃಶ್ಯವನ್ನು ಸವಿಯುತ್ತಾ ಗಂಟೆಗೆ ನಾಲ್ಕು ಮೈಲಿ ವೇಗದಲ್ಲಿ ಪಯಣಿಸುವುದು ನಿಜಕ್ಕೂ ಒಂದು ಅಪೂರ್ವ ಅನುಭವ. ಮಧ್ಯಾಹ್ನ ಒಂದೂವರೆ ಗಂಟೆಯ ಹೊತ್ತಿಗೆ ನಾವು ಎಡಬದಿಯ ದಡದಲ್ಲಿದ್ದ ಕಬ್ಬಿಣದ ಬಳೆಗಳಿಗೆ ನಮ್ಮ ದೋಣಿಯನ್ನು ಕಟ್ಟಿ ಭದ್ರಪಡಿಸಿ, ಮಧ್ಯಾಹ್ನದ ಊಟಕ್ಕೆ ಡಕ್ಸ್ ಎಂಡ್ ಡ್ರೇಕ್ಸ್ ಎಂಬ ಅತಿಥಿಗೃಹಕ್ಕೆ ಹೋದೆವು. ಒಳಗೆ ಕೂತು ಮೆನು ಕಾರ್ಡ್ ನೋಡಿದರೆ ನನಗೊಂದು ವಿಸ್ಮಯ ಕಾದಿತ್ತು.

ಕಳೆದ ಅರ್ಧ ಶತಮಾನದಿಂದ ಇಲ್ಲಿ ನೆಲಸಿರುವ ಏಷ್ಯನ್ನರ ಪ್ರಭಾವದಿಂದಲೇ ಏನೋ ಕರಿ ಮತ್ತು ರೈಸ್ ಹಾಗೂ ಚಿಕನ್ ಟಿಕ್ಕಾ ಮಸಾಲ ಇವುಗಳನ್ನು ಇಂಗ್ಲೆಂಡಿನ ಯಾವ ಮೂಲೆಯಲ್ಲಿರುವ ಹೋಟೆಲ್ಲು ರೆಸ್ಟುರಾ ಅಥವಾ ಅತಿಥಿಗೃಹದಲ್ಲೂ ಪಡೆಯಬಹುದು. ಇಲ್ಲಿಯೂ ಅಷ್ಟೆ ನನ್ನ ಊಟಕ್ಕೆ ಕರಿ ಮತ್ತು ರೈಸ್ ಬಿಸಿಬಿಸಿಯಾಗಿ ಸಿದ್ಧವಾಗಿತ್ತು. ಹಲವು ವರ್ಷಗಳಿಂದ ಬೆಂಗಳೂರಿಗೆ ಭೇಟಿನೀಡುತ್ತಿರುವ ಅಲನ್ ಸಹಾ ಈ ಭಾರತೀಯ ತಿನಿಸುಗಳಿಗೆ ಮಾರುಹೋಗಿದ್ದಾನೆ. ಜಿಮ್ ಮಾತ್ರ ಸಾಸೇಜ್ ಮತ್ತು ಬೇಯಿಸಿದ ಆಲೂ ಆರ್ಡರ್ ಮಾಡಿದ.

ಊಟ ಮುಗಿದ ನಂತರ ದೋಣಿಗೆ ಹಿಂತಿರುಗಿದೆವು. ಮಧ್ಯಾಹ್ನದ ಬಿಸಿಲು ಬಹಳ ಹಿತವಾಗಿತ್ತು. ಮರುಪಯಣದ ಉದ್ದಕ್ಕೂ ನಾನೇ ದೋಣಿಯನ್ನು ನಡೆಸಿದೆ. ದೋಣಿಯನ್ನು ಎಡಕ್ಕೆ ಅಥವಾ ಬಲಕ್ಕೆ ತಿರುಗಿಸಬೇಕಾದರೆ ಅದರ ಚುಕ್ಕಾಣಿಯನ್ನು ಬೇಕಾದ ದಿಕ್ಕಿನ ವಿರುದ್ಧ ದಿಕ್ಕಿಗೆ ತಿರುಗಿಸಬೇಕೆಂಬುದನ್ನು ಕಲಿತೆ. ಚುಕ್ಕಾಣಿ ಒತ್ತಿದ ತಕ್ಷಣ ದೋಣಿ ದಿಕ್ಕು ಬದಲಿಸುವುದಿಲ್ಲ. ಹಾಗಾಗಿ ಮುಂದೆ ಸ್ವಲ್ಪ ದೂರದಲ್ಲಿ ದಿಕ್ಕು ಬದಲಿಸಬೇಕಾದರೆ ಈಗಿನಿಂದಲೇ ಆ ಪ್ರಯತ್ನ ಪ್ರಾರಂಭಿಸಬೇಕಾಗುತ್ತದೆ. ಒಮ್ಮೆ ಅಭ್ಯಾಸವಾದ ನಂತರ ಚಾಲನೆಯೇನೂ ಕಷ್ಟವಾಗಲಿಲ್ಲ. ನಮ್ಮ ಯಾನ ಮುಗಿಸಿ ಟ್ರೆವರ್ ಸೇರಿದಾಗ ಸಂಜೆ ನಾಲ್ಕಾಗಿತ್ತು. ಬಹು ವರ್ಷಗಳಿಂದ ನನಗಿದ್ದ ಕಾಲುವೆ ದೋಣಿ ಪಯಣದ ಆಶೆ ಇಂದು ಈಡೇರಿತ್ತು.

❖

ಕಲ್ಲೇಶಿಯ ಇಂಟ್ರೊ!

- ಡಿ.ಎ. ನಳಿನ ಕುಮಾರಿ

ದೇವಸ್ಥಾನದಿಂದ ಹೊರಬಂದು ಚಪ್ಪಲಿ ಮೆಟ್ಟಿಕೊಳ್ಳುತ್ತಿದ್ದೆ 'ನಮುಸ್ಕಾರ ಸಾಽಽ' ಧ್ವನಿಯ ದೇಹ, ಎದುರಿಗೆ ಕಂಡಿತು! ದೊಗಲೆ ಪಾಯಿಜಾಮ, - ಜುಬ್ಬಾ ತೊಟ್ಟು ಬಗಲಿಗೆ ಉದ್ದನೆಯ ಬ್ಯಾಗ್‌ವೊಂದನ್ನು ನೇತು ಹಾಕಿ ಕೊಂಡಿದ್ದ, ಚದುರಿದ ತಲೆಗೂದಲ, ಆ ವ್ಯಕ್ತಿ.... ಹಾಂ.... ಕಲ್ಲೇಶಿ! ಹೌದು ಅವನೇ ಸಂದೇಹವೇ ಇಲ್ಲ - ನನ್ನ ಮಾಸ್ತರ್ ಕರುಳು, ಅವನನ್ನು ನಿಧಾನವಾಗಿಯಾದರೂ ಗುರುತಿಸಿತ್ತು! ಎಷ್ಟೇ ಆಗಲಿ ಮಾಜಿ ಶಿಷ್ಯನಲ್ಲವೇ.... ಮುಖ ಅರಳಿಸಿದೆ. "ಮನೆತಾವ ಓಗಿದ್ದೆ. ಗುಡೀಗೋಗವ್ರೆ ಅಂದ್ರು... ಸೀದಾ ಬಂದ್ಬುಟ್ಟೆ ಸಾಽಽ" ಕೊಲಂಬಸ್‌ನ ಗೆಲುವಿನ ನಗೆ ಮುಖದಲ್ಲಿ ತುಳುಕಿಸುತ್ತಾ ಹೇಳಿದ! "ಏನಂತಾ ಅವಸರದ ಕೆಲಸವಿತ್ತೋ ಕಲ್ಲೇಶಿ? ಒಳ್ಳೆ ಪತ್ರಿಕಾ ವರದಿಗಾರನ ತರಹ ಕಾಣ್ತಿದ್ದಿ ಇವತ್ತು" ಎಂದೆ ನಗುತ್ತಾ. "ಔದಾಽ ಸಾಽ ನಾನಂಗೆ ಕಾಣ್ತಿವ್ನಾ ಸಾಽ? ನೀವು ಶಾನೇ ಜಾಣ್ರು ಸಾಽ ಎಂಗೆ ಗುರ್ತು ಇಡುದ್ಬುಟ್ರಲ್ಲ ಸಾಽಽ? ನಿಮ್ಮಾಸೀರ್ವಾದ ಸಾಽ 'ಆಶೀರ್ವಾದ ತಿದ್ದಿದೆ.' ಊಂ ಅದೇ ಅನ್ಕಳಿ - ನಾನೀಗ ವರ್ದಿಗಾರನಾಗೇ ಬಂದಿವ್ನಿ ಸಾಽಽ ಎಂಗೆ ಗುರ್ತು ಇಡುದ್ ಬುಟ್ರಲ್ಲ ಸಾಽಽ" "ಇರ್ಲಿ ಅಂತೂ ಒಂದು ಕೆಲಸ ಅಂತ ಹುಡುಕ್ಕೊಂಡ್ರಲ್ಲ, ಒಳ್ಳೇದು. ಶ್ರದ್ಧೆಯಿಂದ ಮಾಡು. ಓದಿದ್ರೆ ಮುಂದೆ? ಎಷ್ಟು ಚೆನ್ನಾಗಿರ್ತಿತ್ತು" ಕೆದಕಿದೆ. ಸಾಽಽ - ಇಂದಿಂದೆಲ್ಲ ಈಗ್ಯಾಕ್ ಬುಡಿ ಸಾಽ ನಿಮ್ಮಾತ್ ಕೇಳ್ಬೇಕಿತ್ತು ಅಮ್ತ ಅನಿಸ್ತಿರ್ತದೆ - ಸಾಽಽ ಓಗ್ಲಿಬುಡಿ ಇನ್ನೊಂದ್ ಕಿತ ಕಂಡಾಗ ಮಾತಾಡಾನ ಈಗ ನಾ ಬಂದ್ ಇಸ್ಯ - 'ವಿಷಯ' ತಿದ್ದಿದೆ. "ಊಂ ಅದೇ ಅನ್ಕಳಿ ಸಾಽ ಏನಂದ್ರೆ ಸ್ವಾಸಂತ್ರ - 'ಸ್ವಾತಂತ್ರ್ಯ' ಊಂ ಅದೇಬುಡಿ ಸಾಽ ಸುಮ್ಕೆ ಕೇಳಿ-ಸಾಽಽ ಅದು ಬಂದು ಅರ್ವತ್‌ವರ್ಸ ಆಯ್ತುದಲ್ಲ, ಅದ್ಕೆ ನಿಮ್ದೊಂದು ಇಂಟ್ರೊ ಮಾಡಮಾಂತ'.... ಎಂದ!

ಇಂಟರ್‌ವ್ಯೂ! ನನ್ನದು! ಮನಸ್ಸು ಆನಂದದಿಂದ ಮುಗಿಲಲ್ಲಿ ತೇಲಾಡಿತು! ಅತ್ಯಂತ ಪ್ರೀತಿಯ ವೃತ್ತಿ ಜೀವನದಲ್ಲಿದ್ದಾಗ, ಪ್ರಶಸ್ತಿ ಪುರಸ್ಕಾಗಳು (ಅಪರೂಪಕ್ಕೆ) ಸಿಕ್ಕಾಗಲೂ, ಇಷ್ಟು ಸಂತಸವಾಗಿರಲಿಲ್ಲ, ಕಾರಣ, ಅಲ್ಲಿ ಮಾತನಾಡಲೂ, ಹೀಗಿದ್ದಿದ್ರೆ ಚೆನ್ನಾಗಿರ್ತಿತ್ತು ಎನ್ನುವ ಅಭಿಪ್ರಾಯ ಸೂಚಿಸಲೂ, ಸ್ವಾತಂತ್ರ್ಯವಿರಲಿಲ್ಲವಲ್ಲ! ಅದಕ್ಕೆ ಇರಬೇಕು. ಕಲ್ಲೇಶಿಯ ಬಗ್ಗೆ ಅಕ್ಕರೆ ತುಂಬಿ ಬಂತು. ದಡ್ಡಶಿಖಾಮಣಿಯಾದರೂ, ಗುರುವಿನ ಬಗ್ಗೆ ಅವನಿಗಿರುವ ಗೌರವಾದರಗಳೆಷ್ಟು? "ನಿನ್ನನ್ನು ತಿದ್ದಲು, (ಇಂಗ್ಲೀಷ್ ಭಾಷೆ ಕಲಿಸಲು!) ಯಾರಿಂದಲೂ ಸಾಧ್ಯವಿಲ್ಲ" ಎಂದು ಕಟ್ಟಕಡೆಯ ತೀರ್ಮಾನ ಕೊಟ್ಟಾಗಲೂ ನನ್ನ ಮೇಲೆ ಬೇಸರ ಗೊಂಡಿರದ ಸ್ಥಿತಪ್ರಜ್ಞ! - ಸಮಾಜದ ಓರೆ ಕೋರೆಗಳನ್ನು ತಿದ್ದಲು, ತನ್ನದೇ ಆದ ಧಾಟಿಯಲ್ಲಿ

'ಓರಾಡು'ತ್ತಿದ್ದ 'ಉಟ್ಟು ಓರಾಟಗಾರ' ಈ ನನ್ನ ಮಾಜಿ ಶಿಷ್ಯ – ಎಂಥ ಗುರುದಕ್ಷಿಣೆ ಸಲ್ಲಿಸುತ್ತಿದ್ದಾನೆ! ಭಲೇ ಶಿಷ್ಯಭಲೇ – ಈ ಬಡ ಮೇಷ್ಟ್ರಿಗೆ ಇದಕ್ಕಿಂತ ದೊಡ್ಡ ಬಹುಮಾನ ಬೇಕೆ? ಸಿಹಿ ನೆನಪುಗಳಲ್ಲಿ ಮುಳುಗಿದ್ದ ನನಗೆ 'ಸಾಽ – ಸಾಽ' ಕರೆ ಮತ್ತೆ ವಾಸ್ತವಕ್ಕೆ ಮರಳುವಂತೆ ಮಾಡಿತು. 'ಏನ್–ಸಾಽ ಸುಮ್ಕೆ ಆಗ್ಬುಟ್ರಿ' – 'ಆಂ – ಆ – ಅದು – ನಾನ್ಯಾವದೊಡ್ಡಮನುಷ್ಯಾಂತ' – ''ಐ – ಅಂಗ್ಯಾಕ್ – ಅಂತಿರಿ ಸಾ – ಗುರುಗುಳ್ಗಿನ್ನ ದೊಡ್ಡೋರು ಯಾರಿದ್ದಾರು – ನಿಮ್ಮಿಂದ್ಲೇ ಸುರುಮಾಡ್ಬೇಕಂತ ಮನ್ಸು – ಸುವರ್ಣ ಸ್ವಾಸಂತ್ರ ಬಂದು ಇಷ್ಟ್ ವರ್ಸ ಆಗದೆ – ತಿಳುವಳಿಕಸ್ತ್ರ ಅನ್ನವ ಕೇಳಿ, ಅಂಚ್ಕಳಾದು ಅಸ್ಟೆ' 'ಹಾಗಾದ್ರೆ ನಡಿ ಮನೆಗೆ ಹೋಗೋಣ' – ಉತ್ಸುಕತೆ ತೋರಿಸಿದೆ. ''ಐ – ಬರ್‍ರೀ ಸಾಽ ಇಲ್ಲೇ ಪಾರ್ಕ್‌ನಾಗೆ ಆರಾಮಾಗಿ ಕುತ್ಕಂಡ್ ಬರ್ಕಮಾಣ'' ಎಂದ. ''ಊಂ ಸರಿ ನಡೆಯಪ್ಪ – ಅದೇನ್ ಕೇಳ್ತಿಯೋ – ಕೇಳಪ್ಪ' ಮನದಲ್ಲಿಯೇ ಬೀಗುತ್ತಾ ಪಾರ್ಕಿನತ್ತ ಹೆಜ್ಜೆ ಹಾಕಿದೆ. ಅಲ್ಲೊಂದು ಪ್ರಶಸ್ತ ಸ್ಥಳ ಹುಡುಕಿ ಕುಳಿತಿದ್ದೂ ಆಯ್ತು.

''ಈಗ ನಾನು ನಿಮ್ಗೆ ಪ್ರಸ್ನೆಗಳ್ನ ಕೇಳ್ಕಂಡ್ ಓಯ್ತಿನಿ – ನೀವು ಉತ್ರ ಏಳ್ಕಂಡ್ ಓಗ್ರಿ'' ಎಂದ ಕಲ್ಲೇಶಿಯ ಮಾತಿಗೆ ಪುಳಕಗೊಂಡ ಮೈ ಝುಂ ಅಂತು! ನನ್ನ ಮನಸ್ಸಿನಲ್ಲಿ ತುಂಬಿದ್ದ ಭಾವನೆಗಳನ್ನೆಲ್ಲ ಕಾರಿಕೊಳ್ಳಬಹುದಲ್ಲ – ಈಗ ಯಾರಭಯ'' – ಎಂದೆಲ್ಲ ಏನೇನೋ ಯೋಚಿಸುತ್ತಾ ಕುಳಿತಿದ್ದೆ 'ಸಾಽ' ಎಚ್ಚರಿಸಿದ ಶಿಷ್ಯ 'ಹೂಂ – ರೆಡಿ' ಎಂದೆ ನಗುತ್ತಾ.

ಪ್ರಶ್ನೆ: ಸ್ವಾಸಂತ್ರ ಬಂದು ಅರ್‍ವತ್‌ವರ್ಸ ಆಗೈತಿ – ನಿಮ್ಗೆ ಏನನಿಸ್ತದೆ?

''ತುಂಬಾ – ತುಂಬಾ ಸಂತೋಷ ಆಗಿದೆ'

ಪ್ರಶ್ನೆ: ''ಕೆಂಪ್ ಮುಸುಡಿಯೋರ್ ಓದ್ ಮ್ಯಾಗಿನ ನಮ್ಮ ರಾಜ್ಕೀಯ ಯವಸ್ತೆ, (ಶಿವಶಿವಾ!) ಸರ್ಕಾರ್‍ದ ಮ್ಯಾಗಿನ ನಿಮ್ ಅಭಿಪ್ರಾಯ?''

ಆಹಾ! ಒಳ್ಳೆ ಪ್ರಶ್ನೆ – ಉತ್ತರಗಳನ್ನ ಮನದಲ್ಲೇ ಹೊಸೆಯುತ್ತಾ, ಹೇಳತೊಡಗಿದೆ – ''ನಂಗನ್ನೋದಂದ್ರೆ – ಇಂಗ್ಲೀಷ್‌ನೋರಿದ್ದಾಗಿನ ಆಡಳಿತ ಕ್ರಮವೇ ಶಿಸ್ತಾಗಿತ್ತು – ಈ ಜನ ಸಂಖ್ಯೆ – ಜನರಿಂದ ಹೇಗೆ ಕೆಲಸ ತೆಗೆಯ – ಬಹುದೆನ್ನೋನ್ಯಾಕು....''

''ಐ ಬುಡೀಸಾ – ನಂಗೆಲ್ಲ ಗೊತ್ತಾತು. ನಿಮ್ಗೆ ಈ ಪ್ರಜಾಪ್ರಭುತ್ವ ಮಾದ್ರಿ ಸರ್ಕಾರ ಇಸ್ಟ ಇಲ್ಲ ಅಲ್ಲೇನ್ಸಾ''?

''ನಿಂಗೆ ಹೇಗೆ ಗೊತ್ತಾಯ್ತು ನಾನಿನ್ನೂ ಪೂರ್ತಿ ಮಾಡೇ ಇಲ್ಲ ಉತ್ರಾನ?''

ಅಸಮಾಧಾನಿಸಿದೆ. ''ನಂಗೇನ್ ಅಸ್ಟ್ ತಲೆ ಇಲ್ಲೇನ್ಸಾ...? ನಿಮ್ ಸಿಸ್ಯ ಸಾ – ನಾನು – ಎಂಗನ್ರಿ ಕ್ಲಾಸಿನಾಗೆ ಉಡ್ರು ಗಲಾಟೆ ಮಾಡ್ತಿದ್ರೆ ಮೇಸ್ಟ್ರು ಒಂದ್ ಸರ್ತಿ ಗದ್ರಿಸಿದ್ರೆ, ಎಲ್ರೂ ಗಪ್‌ಚಿಪ್! ಅಂಗೆ ದೇಸಕ್ಕೊಬ್ರು 'ಗುಟ್ರು' ಆಕೋರಿರ್‍ಬೇಕು – ಇಲ್ದಿದ್ರೆ ಈ ಜಗ್ಳ – ಕಿತ್ತಾಟ – ದೊಂಬಿ ನಿಲ್ಲಲ್ಲ ಅಂತ ನಿಮ್ಮಾತಿನರ್ತ – ನಾವೇ ಸೇವುಕ್ರಾಗಿ ಯಾರ್‍ಮಾತ್ ಯಾರ್ ಕೇಳ್ಬೇಕು ಸೈಬುಡೀಸಾ ಮುಂದಿನ್ ಪ್ರಸ್ನೆಗೋಗಮು. ಸ್ವಾಸಂತ್ರ – (ಕಿವಿಯ ಮೇಲೆ ಕಾದ ಸೀಸ ಬಿದ್ದಂತಾಗುತ್ತಿತ್ತು – ಸಹಿಸಿಕೊಂಡು ಕೇಳಿಸ್ಕೊಂಡೆ.) ಕ್ಕಿಂತ ಮುಂಚೆ ಇದ್ದ ಜನ ಜೀವ್ನಕ್ಕೂ –

ಸ್ವಾಸಂತ್ರ ಬಂದ್ ಮ್ಯಾಕಿನ ಜೀವನಕ್ಕೂ ಯತ್ವಾಸ ಯೋಳಿಸಾ?" ಇದಕ್ಕಾದ್ರೂ ನನ್ನಿಷ್ಟದಂತೆ ಉತ್ತರ (ಪೂರ್ಣ!) ಹೇಳೋಣವೆಂದುಕೊಂಡು "ಬಹಳಾ ವ್ಯತ್ಯಾಸ ಇದೆ - ಇಷ್ಟೆಲ್ಲಾ ಅನುಕೂಲ ಆಗಲಿಲ್ಲಿತ್ತು? ಆದ್ರೂ ಜನ ಕಷ್ಟಪಟ್ಟು ಕೆಲಸ ಮಾಡ್ತಾ ಚಟುವಟಿಕೆಯ ಬುಗ್ಗೆಗಳಂತೆ - ಇದ್ರು - ಮನೆಯಲ್ಲಿನ ಹೆಣ್ಣು ಮಕ್ಕಳೂ ಅಷ್ಟೆ - ಈಮಿಕ್ಸರ್, ಗ್ರೈಂಡರ್,"

ಐ...ಗೊತ್ತಾತು ಬುಡೀಸಾ.. ಆಕಾಲ್ದಾಗಿದ್ದಂತೆ ಕುಟ್ಟೋದು - ಬೀನಾದ ರುಬ್ಬೋದು ಇರ್ಬೇಕಿತ್ತು. ಅನ್ಕೂಲ ಎಚ್ಚಾದಂಗೆ ಜನ ಸೋಮಾರಿಗಳಾಗವ್ರೆ ಐಕ್ಳು ಟಿ.ವಿ. ನೋಡ್ತಾ ಕೆಟ್ಹೋಗವೆ. ಎಣ್ ಐಕ್ಳು - ಗಂಡ್ ಐಕ್ಳು ಒಂದೇತರಾ ಡ್ರೆಸ್ ಆಕ್ಕಮದು - ದೊಡ್ಡವ್ರಿಗೆ ಮರ್‍ವಾದೆ ಕೊಡಲ್ಲ - ಸಂಪ್ರದಾಯ ಸಾಸ್ತ್ರ ಎಲ್ಲ ಬುಟ್‌ಕುಂತವ್ರೆ ಜನ ಅಮ್ತ ಅಲ್ಲೇನ್ಸಾ ನೀವು ಯೋಳಾದು?"

ಎಲಾ ಇವ್ನ! ನನ್ನ ಮಾತನ್ನ ಅರ್ಥ ಅಲ್ಲ ಕಾಲುಭಾಗಕ್ಕೆ ತಡೆದು ತಾನೇ ಎಲ್ಲ ಹೇಳ್ಬಿಟ್ಟಿದಾನಲ್ಲ - ಇದೆಂತ ಇಂಟರ್‌ವ್ಯೂ? "ಹುಂ-ಹೌದು-ಆದ್ರೆ"

"ಇರ್ಲಿ ಬುಡೀಸಾ - ಮುಂದಿನ್ ಪ್ರಶ್ನೆ ಕೇಳಿಸ್ತಳಿ - ಈ ಪ್ರಶ್ನೆ ನಿಮ್ಗಿಸ್ಟ ಆಗ್ತೈತೆ - ಸ್ವಾಸಂತ್ರ ಬಂದ್ ಮ್ಯಾಕೆ ಸಿಕ್ಷಣ (ದೇವ್ರೇSS) ಕ್ರಮದಲ್ಲಾಗಿರೋ ಬದ್ಲಾವಣೆ ಬಗ್ಗೆ ಯೋಳೀಸಾ"?

ವ್ಹಾ-ವ್ಹಾ- ಎಂತ ಪ್ರಶ್ನೆ ಈ ದಡ್ ಮುಂಡೇದರ ತಲೇಗೆ ಹೇಗೆ ಹೊಳೆಯಿತಪ್ಪ ಇಂಥಾ ಪ್ರಶ್ನೆ? ಮನಸ್ಸು ತೃಪ್ತಿಯಾಗಿ ಉತ್ತರಿಸಬೇಕೆಂದು ಕೊಂಡು ಅಜಗಜಾಂತರ ವ್ಯತ್ಯಾಸ - ಬದ್ಲಾವಣೆಗಳಾಗಿವೆ. ಆಗ ಗುರುಗಳೆಂದ್ರೆ ಏನ್ ಭಯ, ಭಕ್ತಿ, ಗೌರವ! ಗುಲಾಮರಾಗಿ ಕಲಿತು, ಒಳ್ಳೆ ನಡೆ, ನುಡಿ ಮೈಗೂಡಿಸಿಕೊಂಡು ಕೃತಾರ್ಥರಾಗಿ - ಸಾರ್ಥಕ ಜೀವನ ನಡೆಸಲು ಸಮರ್ಥ ರಾಗುತ್ತಿದ್ದರು. ಈಗ ಇದಕ್ಕೆ ತದ್ವಿರು......

"ಓಹೋಹೊ - ನಂಗೊತ್ತಾತು ಬುಡೀಸಾ... ಈ ಕಾಲ್ದ ಸಿಕ್ಷಣಾಯವಸ್ತೆ ಸಂದಾಕಿಲ್ಲ - ಮೇಸ್ಟ್ರುಗಳಿಗೆ ಇಪ್ಪತ್ತೆಂಟ್ ಕೆಲ್ಸಗಳ್ನ ಗಂಟಾಕಿರ್ತಾರೆ - ಟಿ.ವಿ. ಸಿನ್ಮಾಂತ ಸಾಲಿಗೆ ಚಕ್ಕರ್ ಒಡ್ದು ಮನೇಲಿ ಅವುಸ್ಕೊಂಡಿರೋ ಹೈಕ್ಳನ್ನ ಉಡುಕ್ಕಂಡೋಗಿ - ಅದು ಕೊಡ್ತಿವಿ - ಇದು ಕೊಡ್ತಿವಿ ಅಮ್ತ ಮುದ್ದಿಸಿ ಕರ್ಕಂಬರ್ಬೇಕು. ಗದ್ದಿಮ್ಯಾಲೆ ಕುಂದ್ರಂಗಿಲ್ಲ - ಬೆತ್ತ ಇಡಿಯಂಗಿಲ್ಲ - ಬೈಯ್ಯಂಗಿಲ್ಲ - ಗದ್ರಂಗಿಲ್ಲ - ಅದೇನೆ ಮಾಡ್ಲಿ ನಿತ್ಕಂಡ್ ಸುಮ್ಕೆ ನಗಾಮಕಾ ಮಾಡ್ಕಂಡು ನೋಡ್ತಿರ್‌ಬೇಕು - ಸಿಕ್ಷಕ (ಶಿವಶಿವಾ) ರೆಂದ್ರೆ ಮುದುಕ್ರು - ಮೋಟ್ರುರೋಗ್ದವ್ರು ಆಗಿರಬಾರ್ದು - ಆದ್ರೆ ರಾಜಿನಾಮೆ ಕೊಟ್ಟು ಮನೀಗ್ ಓಯ್ರಿ ಅಮ್ತ ಕಾನೂನು. ಅಲ್ಲೇನ್ಸಾ - ನೀವೇಳಾದು"?

ಮೈ ಎಲ್ಲ ಉರಿ! ಏನಾದ್ರೂ ಹೇಳಕ್ ಬಿಟ್ರಾ ಇವ್ನ ತಲೆ ಹರಟೆ - ಛೆ - ಸ್ವಲ್ಪ ಹೊತ್ತಿನ ಮುಂಚೆ ಅದೆಷ್ಟು ಖುಷಿಯಿಂದಿದ್ದೆ - ಹಾಳು ಮಾಡಿ ಬಿಟ್ಟ - ಸಿಟ್ಟಿನಿಂದ ಮಾತನಾಡದೆ ಸುಮ್ಮನೆ ಕುಳಿತೆ. "ಸಾ - ಈಗೊಂದು ಕಡೇದು - ಬೋ ಪಸಂದಾದ ಒಂದು ಪ್ರಶ್ನೆ - ನೀವು ಸಂದಾಕೆ ಉತ್ರ ಕೊಡ್ತೀರಮ್ತ - ಕೇಳಿಸಾ - ಈಗಿನ ಪರಿಸ್ತಿತಿ ನೋಡ್ತಿವ್ರಲ್ಲ ದೇಸದ ಮುಂದಿನ ಬವಿಸ್ಯ ಎಂಗಾಯ್ತದೆ ಯೋಳೀಸಾ"?

ಕೋಪದಲ್ಲೂ ಉತ್ಸಾಹ ಉಕ್ಕಿಬಂತು. ಕಣ್ಣ ಮುಂದೆ ಅಸ್ತವ್ಯಸ್ತ ಸಮಾಜದ ಛಿದ್ರಚಿತ್ರಗಳು ಮೂಡಿಬಂದು ಹೇಳತೊಡಗಿದೆ - 'ಏನಿದೆ ಮಣ್ಣು ಒಂದಾದರೂ ಸ್ವಚ್ಛ ನಿರ್ಮಲ ಕ್ಷೇತ್ರಗಳಿವೆಯೇ? ಸರ್ಕಾರ, ಶಿಕ್ಷಣ, ಸಂಸ್ಕಾರ, ಸಂಸ್ಕೃತಿ - ಯುವಜನತೆ - ಉದ್ಯೋಗ ಯಾವರಂಗ.... "ಐ-ಐ-ಬುಡಿ-ಬುಡಿ ಸಾsss ತಿಳೀತು ಸಾ - ನಮ್ಮತ್ರ ಓಟು ಆಕಿಸ್ಕಂಡು ನಮ್ಮಕಸ್ಟ ಸುಕ ಕೇಳಾಕು ಕಾಸು ಕೀಳೊ ರಾಜ್ಕಾರ್ಣಿಗ್ಳು, ತಕ್ಡಿಯಂತ ಸರ್ಕಾರ - ಮಾತ್ರಬಾಸೆ ಕಲ್ಕಮ ವಯಸ್ನಾಗೆ ಪರಬಾಸೆ ಒರೆ ಆಕೆ ತಲೆ ಕೆಡ್ಸೋಸಿಕ್ಸಣಾ - ನಮ್ಮಬ್ಬ ಅರ್ದಿನ ಬುಟ್ಟು ಒಸಾವರ್ಸ - ಪ್ರೇಮಿಗಳ ದಿನ ಮೂರುಕ್ರದಿನ ಅಂತ ಅಬ್ಬ ಮಾಡೋ ಐಕ್ಳು - ಎಣ್ಣುಗಂಡು ಯತ್ಯಾಸ ತಿಳೀದಂಗೆ ದಿರಿಸಾಕೋ ಐಕ್ಳು - ಓದು - ಇದ್ಯಾವುದರ ಕಡೆ ಗಮನ ಇಲ್ದೆ ಕೆಟ್ಟು ಕೆರ ಇಡ್ಡೋಗಿದಾವೆ - (ಕಳ್ರಿಗೂ ಪೋಲೀಸರಿಗೂ ಯತ್ಯಾಸಗೊತ್ತಾಗಲ್ಲಲ್ಲ ಅಂಗೆ!) ರಾಮ - ರಾಮಾಣ್ಯಾ ಎಲ್ಲಾ ಸುಳ್ಳೇ ಅಮ್ತ ಅಂತಿರದಕ್ಕೆ ಈ ದೇಸಕ್ಕೆ - ಬವಿಸ್ಯಕ್ಕೆ ಬಾಳಾ ಕಸ್ಟ ಅಮ್ತ ಅಲ್ಲೇನ್ಸಾ ನಿಮ್ಮಾತು"? ಇನ್ನು ನನಗೆ ತಡೆಯಲಾಗಲಿಲ್ಲ - "ಸಾಕು ನಿಲ್ಸು ನಿನ್ನ ಇಂಟ್ರ್ಯೂ"... ಎಂದು ಅರಚಿದಂತೆ ಹೇಳಿದೆ! "ಯಾಕ್ ಸಾs...ಕ್ಸಾಪ... ನಿಮ್ ಮನಸ್ಸಿನಾಗ್ಳ ಮಾತು ನಾನೇಳಿವ್ನಿ ಅಸ್ಟೆ ಬುಡೀಸಾ - ಅದ್ರಾಗೇನು... ಒಟ್ಟು ಸ್ವಾಸಂತ್ರ ಬಂದು ಅರ್ವತ್‌ವರ್ಸ ಆಗಿದ್ರು ಅರ್ದಕುಸಿ, ಅರ್ದದುಕ್ಕ ಅಲ್ಲೇನ್ಸಾ?"

ತಾಂಕೂ - ಸಾsss "ಪೇಪರಿಗೆ ಕೊಡ್ತಿನ್ ಸಾ ಮತ್ತೆ ಬಂದ್ ಕಾಣ್ತಿನೇಳಿ" ಎಂದು ಹೇಳಿ, ತಿರುಗಿ ಕೂಡ ನೋಡದೆ ಹೋಗುತ್ತಿದ್ದ ಕಲ್ಲೇಶಿಯನ್ನು ನೋಡಿ, "ಇವನು ನನ್ನ ಇಂಟ್ರ್ಯೂ ಮಾಡಿದ್ನೋ ಇಲ್ಲ ಇವನ ಇಂಟ್ರ್ಯೂ ನಾನು ಮಾಡಿದೆನೋ?" ಎಂಬ ದ್ವಂದದಲ್ಲಿ ಮುಳುಗಿದೆ!

ಒಂದು ನರ್ಸಿಂಗ್ ಹೋಂನಲ್ಲಿ ಮೂವರು ವಯಸ್ಸಾದ ರೋಗಿಗಳಿದ್ದರು. ಅವರು ನಮಗೆ ಇನ್ನೇನು ವಯಸ್ಸಾಯಿತು ನಾವು ಹೋಗೋ ಕಾಲ ಬಂದಿದೆ ಅಂತ ಮಾತಾಡ್ಕೊತಾ, ಯಾರು ಸ್ವರ್ಗಕ್ಕೆ ಹೋಗಬಹುದು, ಯಾರು ನರಕಕ್ಕೆ ಹೋಗಬಹುದು ಅಂತ ತಮ್ಮ ತಮ್ಮಲ್ಲೇ ಮಾತಾಡ್ಕೊತಾ ಇದ್ದರು. ಆಗ ಅಲ್ಲಿಗೆ ಬಂದ ಡಾಕ್ಟರು ಏನು ನೀವು ನೀವೇ ನಿರ್ಧಾರ ಮಾಡ್ತಾ ಇದೀರ. ನೀವು ಸ್ವರ್ಗಕ್ಕಾಗಲೀ ನರಕಕ್ಕಾಗಲೀ ಹೇಗೆ ಹೋಗ್ತೀರ, ನಾನು ಕಳಿಸಿದರೆ ತಾನೇ ಅಂದರು.

DOOR ಡೆಲಿವರಿ!

- ಡಾ|| ಎಸ್. ಜಗದೀಶ್

ಗುಂಡಮ್ಮಾ... ಗುಂಡಮ್ಮನವರೇ... ಏನು ಮಾಡ್ತಾ ಇದ್ದೀರಾ?

ಓ ನೀವಾ ಪಾರ್ವತಮ್ಮ - ಬೆಳಗ್ಗೆ ಬೆಳಗ್ಗೇನೆ ಏನು ಸಮಾಚಾರ?

ಏನು ಇಲ್ಲಾರೀ, ನಮ್ಮೆಜಮಾನ್ರು ಪೂಜೆಗೆ Ready ಆಗ್ತಾ ಇದ್ದಾರೆ... ಪರಕೆ ಸಿಕ್ತಾ ಇಲ್ಲ! ಈ ಕೆಲಸದವಳು ಆ ನಿಂಗಿ ಅದೆಲ್ಲಿ ಇಟ್ಟಿದ್ದಾಳೋ ಹುಡ್ಕಿ ಹುಡ್ಕಿ ಸಾಕಾಗಿ ಹೋಯ್ತು... ಇವತ್ತು ಬರಲ್ಲಾ ಅಂತ ಬೇರೆ ಹೇಳಿಹೋಗಿದ್ದಾಳೆ... ಅದಿರ್ಲಿ ಗುಂಡಮ್ಮಾ... ಏನು ಅಡಿಗೆ ಇವತ್ತು ನಿಮ್ಮನೇಲಿ?

ಏನಿಲ್ಲಾರಿ Simple ಆಗಿ ದೊಡ್ಡಪತ್ರೆ ತಂಬುಳ್ಳಿ ಮಾಡ್ತಾ ಇದ್ದೀನಿ. ತರಕಾರಿ ಬೆಲೆ ಎಷ್ಟು ಜಾಸ್ತಿಯಾಗಿದೆ ನಿಮಗೆ ಗೊತ್ತಲ್ಲಾ. ಅದಕ್ಕೆ Palak ಸೊಪ್ಪು ಹುಳಿ ಮತ್ತೆ Tomato/ಬೇಳೆ ಸಾರು ಮಾಡ್ತಾ ಇದ್ದೀನಿ. ಇವರಿಗಂತೂ ಏನು ಇಲ್ದಿದ್ರೂ ಸಾರು ಮಾತ್ರ ಇರ್ಲೇ ಇರಬೇಕು ಹಠ. ಯಾವಾಗ್ಲೂ "ಸಾರೆ Jahanಸೆ ಅಚ್ಚಾ" ಅಂತ Joke ಮಾಡ್ತಾ ಹಾಡ್ತಾ ಇರ್ತಾರೆ. ಇವ್ರು ತುಂಬ ನಾಟಿರೀ!

ನಿಮ್ಮವರು ಹೇಗೆ ಪಾರ್ವತಮ್ಮನವರೆ?

ಅಯ್ಯೋ ಏನು ಹೇಳಿ - ಇವ್ರು ನಾಟಿ ಅಲ್ಲಾ ತುಂಬ ಸಾದು - Farm ಹುರುಳಿ ಕಾಯಿತರ. ಏಕೆ ಅಂದ್ರೆ ಇವ್ರು Farm horse ನಲ್ಲಿ ಹುಟ್ಟಿದವರು. ಅದಕ್ಕೆ Farm Beans ತಂದು ಪಲ್ಯ, ಚಪಾತಿ ಮತ್ತೆ ಕಾಯಿಸಾಸುವೆ ರಾಯ್ತಾ ಮಾಡ್ತಿದ್ದೀನಿ. ಅಯ್ಯಯ್ಯೋ ಗುಂಡಮ್ಮನವರೇ ಒಂದು Important ವಿಷಯ ಹೇಳೋದೆ ಮರೆತು ಹೋಯ್ತು. ನಾನು ಬಂದಿದ್ದೇ ಅದನ್ನು ಹೇಳಬೇಕೂಂತ. ಗುಂಡಮ್ಮನವರೇ ಈಗಿನ ಕಾಲದಲ್ಲಿ ಏನೇನು ಮೋಸ ಮಾಡ್ತಾರೆ ಗೊತ್ತೇನ್ರಿ?

ಯಾಕೆ? ಯಾರಾದ್ರು ನಿಮ್ಮ ಒಡವೆ Polish ಮಾಡ್ತೀವಿ ಅಂತ ಮೋಸ ಮಾಡಿದ್ರೆ?

ಇಲ್ಲಾರೀ...

ಮತ್ತೆ ಯಾವದಾದ್ರು Chit Fundನಲ್ಲಿ ಮೋಸ ಹೋದ್ರಾ?

ಇಲ್ಲಾರೀ....

ಯಾವುದಾದ್ರೂ ಸೀರೆ ಅಂಗಡಿನಲ್ಲಿ ಕಂಚಿ ಸೀರೆ ಅಂತ ತಂದು ಅದು Fake ಆಗಿ ಮೋಸ ಹೋದ್ರಾ?

ಇಲ್ಲಾರೀ...

ಯಾವುದಾದ್ರು Siteಗೆ Advance ಕೊಟ್ಟು Blade Company ಇಂದ ಮೋಸ ಹೋದ್ರಾ?

ಇಲ್ಲಾರೀ....

ಯಾರಾದರೂ Modern ಸ್ವಾಮಿ ಮನೆಗೆ ಬಂದು ಪೂಜೆ ಮಾಡ್ತಿನೀ ಅಂತ ಮೋಸ ಮಾಡಿದ್ರಾ?

ಇಲ್ಲಾರೀ...

ಮತ್ತೆ ಏನಾಯ್ತು ಪಾರ್ವತಮ್ಮನವರೇ ಬೇಗ ಹೇಳಿ ನನಗೆ ಈಗ Suspense ತಡಕೊಳ್ಳೋಕೆ ಇನ್ನು ಆಗಲ್ಲ!

ನೋಡ್ರಿ ಗುಂಡಮ್ಮ.. ನಾನು, ನಮ್ಮೆಜಮಾನ್ರು ಅಕ್ಕಿ ಮಂಡಿಗೆ ಹೋಗಿ ಒಂದು ಮೂಟೆ (25kg) - Sona-masuri-premium quality ದುಡ್ಡುಕೊಟ್ಟು ಅಕ್ಕಿ order ಮಾಡಿದ್ವಿ. ಅಂಗಡಿ ಮುಂದೆ "Free Door Delivery" ಅಂತ Board ಹಾಕ್ಕೊಂಡಿದ್ದ. ನಮ್ಮ Address ತಗೊಂಡು ನಿಮಗೆ ಸಾಯಂಕಾಲದ ಒಳಗಾಗಿ Delivery ಆಗುತ್ತೆ ಅಂತ ಭರವಸೆ ಕೊಟ್ಟ. ನಾವು ಮನೆಗೆ ಬಂದ್ವು.

ಸರೀ ಪಾರ್ವತಮ್ಮಾ - ಏನು Problem? ಅವನು ಅಕ್ಕಿ ಕಳಿಸಲಿಲ್ವೇ?

ಕಳಿಸಿದಾ ಕಣ್ರೀ

ಮತ್ತೆ ಏನು Problem ಪಾರ್ವತಮ್ಮಾ?

ಕಳಿಸಿದ್ದು ಬರೀ ಅಕ್ಕಿಮಾತ್ರ.

ಇನ್ನೇನಾದ್ರು ಅಂದ್ರೆ - ಬೇಳೆ, ಸಕ್ಕರೆಗೆ ದುಡ್ಡು ಕೊಟ್ಟಿದ್ರಾ?

ಇಲ್ಲಪ್ಪಾ ಅಕ್ಕಿಗೆ ಮಾತ್ರಾ ಕೊಟ್ಟಿದ್ದು.

ಮತ್ತೆ ಸರಿಹೋಯ್ತಲ್ಲ, ಏಕೆ ಬೇಜಾರು ಮಾಡ್ಕೊಂಡು ಇದ್ದೀರಿ?

ಆದ್ರೆ ಅವನು ಅಂಗಡಿಮುಂದೆ "Free Door Delivery" ಅಂತ Board ಇಟ್ಟಿಲ್ಲಾ ನಾನು ಅಂಗಡಿಗೆ ಹೋಗಿ ಗಲಾಟೆ ಮಾಡ್ದೆ ಯಾಕೆ Door ಕಳಿಸಲಿಲ್ಲಾ ಅಂತ!

ಗುಂಡಮ್ಮನವರು ಒಂದೇ ಸಮ ಜೋರಾಗಿ ನಗಕ್ಕೆ ಶುರುಮಾಡಿದ್ರು

ಅಲ್ರೀ, ಗುಂಡಮ್ಮಾ ಯಾಕೆ ಮೈಮೇಲೆ ದೇವ್ರು ಬಂದ್ ಹಾಗೆ ನಗ್ತಾ ಇದ್ದೀರಲ್ಲಾ? ನಾನು ಈಗ ನಮ್ಮೆಜಮಾನ್ರು ಕರಕೊಂಡು ಅಂಗಡಿಯವನ ಮೇಲೆ Police Complaint ಕೊಡೋಣಾ ಅಂತ ಹೋಗಕ್ಕೆ Plan ಮಾಡ್ತಿದ್ದೀನಿ.

ಗುಂಡಮ್ಮನವರು ಮತ್ತೆ ಜೋರಾಗಿ ನಕ್ಕಿ ನಕ್ಕಿ ಸ್ವಲ್ಪ ಹೊತ್ತಾದ ಮೇಲೆ ಸುಧಾರಿಸಿಕೊಂಡು ಹೇಳಿದರು. ಅಯ್ಯೋ ಪಾರ್ವತಮ್ಮನವರೇ Free Door Delivery ಅಂದ್ರೆ ನಿಮ್ಮನೇ ಬಾಗಿಲಿಗೆ ನಾವು ಅಕ್ಕಿ ತಲಪಿಸುತ್ತೇವೆ ಎಂದರ್ಥ.

Free Door ಅಲ್ಲಾ! ಅಂತ ಹೇಳಿ ಮತ್ತೆ ನಗೊಕ್ಕೆ ಶುರುಮಾಡಿದ್ರು

ಅಯ್ಯಯ್ಯೋ... ಹೀಗೆ ಅಂತ ಗೊತ್ತಿದ್ರೆ ಅಕ್ಕಿ ತೊಗೊಳ್ತಾ ಇರ್ಲಿಲ್ಲಾ Infact ನಮ್ಮನೇಲಿ ಬೇಜಾನ ಅಕ್ಕಿ Stock ಇದೆ. ಆದ್ರೆ ನಮ್ಮ Outhouse Construction ಮಾಡ್ತಾ ಇದ್ದೀವಲ್ಲ ಅಲ್ಲಿಗೆ ಒಂದು Door ಇಟ್ಟಿರ್ಲಿಲ್ಲಾ ಬೇಕಾಗಿತ್ತು. ಹ್ಯಾಗೂ ಅಕ್ಕಿ ತೊಗೊಂಡ್ರೆ ಒಂದು Free Door Delivary ಆಗುತ್ತೆ ಅಂತ ಅಕ್ಕಿ ತೊಗೊಂಡೇ ರೀ... ಮೋಸ ಹೋದೆ ಗುಂಡಮ್ಮನವರೆ ಈ ವಿಷಯ ಸಮಾಜದ meeting ನಲ್ಲಿ ಯಾರೂ ಹೇಳಬೇಡಿ. ಆ ಮೇಲೆ ನನ್ನನ್ನು ಎಲ್ರೂ ಚುಡಾಯಿಸಲಿಕ್ಕೆ ಶುರುಮಾಡ್ತಾರೆ! ಅಯ್ಯಯ್ಯೋ... ಮರ್ತೆ ಹೋಯ್ತು ನಮ್ಮೆಜಮಾನ್ರು ಪೂಜೆಗೆ ಕಾಯ್ತಾ ಇರ್ತಾರೆ. ಇವತ್ತು ಸ್ವಲ್ಪ ನಿಮ್ಮನೆ ಪರಕೆ ಕೊಟ್ಟಿರಿ... ಪೂಜೆಗೆ ಹೊತ್ತಾಗುತ್ತೆ!

ಪೊಲೀಸರು ಹಾಗೂ ಹಾಸ್ಯ ಪ್ರವೃತ್ತಿ

- ಡಾ.ಡಿ.ವಿ. ಗುರುಪ್ರಸಾದ್

ಪೊಲೀಸರಿಗೂ ನಗೆಗೂ ಅವಿನಾಭಾವ ಸಂಬಂಧ ಇರುವುದು ನಮಗೆಲ್ಲಾ ಗೊತ್ತೇ ಇದೆ. ಇದಕ್ಕೆ ಮುಖ್ಯ ಕಾರಣ ಸಿನಿಮಾ. ಗುಡಾಣದಂತಹ ಹೊಟ್ಟೆ, ಗಿರಿಜಾ ಮೀಸೆ ಹೊತ್ತು, ಎದುಸಿರು ಬಿಡುತ್ತಾ ಲಾಠಿ ಝಳಪಿಸುತ್ತಾ ಓಡಿ ಹೋಗುವ ಕಳ್ಳನನ್ನು ಹಿಡಿಯಲು ಹೊರಟಾಗ ಬಾಳೆಹಣ್ಣಿನ ಸಿಪ್ಪೆ ಜಾರಿ ಧಡಕ್ಕೆಂದು ಕೆಳಗೆ ಬಿದ್ದ ಪೊಲೀಸಪ್ಪನನ್ನು ಕಳೆದ ಐದಾರು ದಶಕಗಳ ಹಿಂದೆಯೇ ನಗೆಪಾಟಲು ವ್ಯಕ್ತಿಯನ್ನಾಗಿ ಸಿನಿಮಾದಲ್ಲಿ ಮಾಡಿ ಅದೇ ರೀತಿಯ ಭಾವನೆಯನ್ನು ಇನ್ನೂ ಮುಂದುವರೆಯುವಂತೆಯೇ ನೋಡಿಕೊಳ್ಳಲಾಗಿದೆ ಅಲ್ಲವೇ?

ತದನಂತರ ಬಂದ ಸಿನಿಮಾಗಳಲ್ಲಿ ವಿಲನ್ ಹಾಗೂ ಅವನ ಚಮಚಾಗಳು ಹಿರೋಯಿನ್‌ಳನ್ನು ಹಾಗೂ ಹೀರೋನ ತಾಯಿಯನ್ನು ಕಿಡ್‌ನ್ಯಾಪ್ ಮಾಡಿಕೊಂಡು ಹಳೆಯ ಡ್ರಮ್ಮುಗಳು, ಟೈರುಗಳು, ಹಗ್ಗಗಳು, ಪೈಪುಗಳು ಇರುವಂತಹ ದೊಡ್ಡ ಗೋಡೌನ್‌ನ ಕಂಬಗಳಿಗೆ ಕಟ್ಟಿ ಹಿರೋಯಿನ್‌ಳ ಮಾನಭಂಗಕ್ಕೆ ಪ್ರಯತ್ನಿಸಿದಾಗ ಶ್ರೀಕೃಷ್ಣನಂತೆ ಎರಗಿ ಬಂದ ಹೀರೋ ಡಿಷುಂ-ಡಿಷುಂ ಎಂದು ಒಬ್ಬಂಟಿಗನಾಗಿಯೇ ವಿಲನ್ ಹಾಗೂ ಅವನ ಸಹಚರರನ್ನೆಲ್ಲಾ ಸದೆಬಡಿದು ಬೆವರೊರೆಸಿಕೊಳ್ಳುತ್ತಿರುವ ಸಮಯದಲ್ಲಿ ಪೀಪೀ ಊದುತ್ತಾ ಬರುವ ಪೊಲೀಸರು ಯೂ ಆರ್ ಅಂಡರ್ ಅರೆಸ್ಟ್ ಎಂದು ಹೀರೋನಿಗೇ ಹೇಳಲು ಹೊರಟಾಗ ನಾನಲ್ಲಾ ಸಾರ್, ವಿಲನ್ ಇವನು ಎಂದು ಹೀರೋ ಕೈತೋರಿಸಿ, ಹಿರೋಯಿನ್ ಕಣ್ಣು ಮಿಟುಕಿಸಿ ತನ್ನ ನೋಟವನ್ನು ವಿಲನ್‌ನತ್ತ ಬೀರಿದಾಗ ಹ್ಹೆ ಹ್ಹೆ ಹ್ಹೆ ಎಂದು ದೇಶಾವರಿ ನಗೆ ಬೀರುವ ಹೆಡ್‌ಕಾನ್‌ಸ್ಟೇಬಲ್ ವಿಲನ್‌ನ ಕೈಗೆ ಬೇಡಿ ಹಾಕಿದಾಗ ನಿಜಕ್ಕೂ ಪೊಲೀಸಪ್ಪ ಹಾಸ್ಯಾಸ್ಪದ ವ್ಯಕ್ತಿಯೇ ಎಂದು ಪ್ರೇಕ್ಷಕರು ಗೊಳ್ಳನೆ ನಗುತ್ತಾರೆ.

ಪೊಲೀಸರ ವೈವಾಹಿಕ ಜೀವನ ಕೂಡ ಆ ನಂತರ ಬಂದ ಸಿನಿಮಾಗಳಲ್ಲಿ ಹಾಗೂ ಟಿವಿ ಸೀರಿಯಲ್‌ಗಳಲ್ಲಿ ಮೂಡಿ ಬಂದು ನಗೆಯ ತರಂಗಗಳನ್ನು ಎಬ್ಬಿಸಿದವು. ಒಂದು ಸಿನಿಮಾದಲ್ಲಂತೂ ಪೊಲೀಸ್ ಕಾನ್‌ಸ್ಟೇಬಲ್ ಒಬ್ಬ ಇಬ್ಬರು ಹೆಂಡಿರನ್ನು ಲಗ್ನವಾಗಿ ಇರುಳು ತಿಗಣೆಯ ಕಾಟ ಅನುಭವಿಸುವುದನ್ನು ನೋಡಿ ನಕ್ಕವರಾರಿಲ್ಲ ನೀವೇ ಹೇಳಿ. ಇನ್ನೊಂದು ಸಿನಿಮಾದಲ್ಲಿ ಪೊಲೀಸ್ ಕಾನ್‌ಸ್ಟೇಬಲ್‌ನೊಬ್ಬ ಜಿಲ್ಲಾಧಿಕಾರಿಣಿಯ ಗಂಡನೇ ಆಗಿಬಿಟ್ಟಿರುತ್ತಾನೆ. ಮನೆಯಲ್ಲಿ ಗಂಡನಾಗಿ ಹೆಂಡತಿಯ ಮೇಲೇ ರೋಫ್ ಹಾಕಿದರೆ ಕಚೇರಿಯಲ್ಲಿ ಬಾಸ್‌ನ ಕೈ ಕೆಳಗಿನ ಅಧಿಕಾರಿಯಾಗಿ ಬೆವರು ಸುರಿಸೋ ಪ್ರಸಂಗಗಳನ್ನು ಅನುಭವಿಸುವಾಗ ಡಿ.ಸಿ.ಯ ಪತಿಯಾದ ಪಿ.ಸಿ.ಯ ಬಗ್ಗೆ ಅಯ್ಯೋ ಪಾಪ ಅನ್ನುವುದಕ್ಕಿಂತ ನಗುವೇ ಬರುತ್ತದೆ ಅಲ್ಲವೇ? ಹೀಗೆ ಸಿನಿಮಾದ ಮೂಲಕ ಪೊಲೀಸ್ ಎಂದರೆ ನಗೆಪಾಟಲಿನ ವ್ಯಕ್ತಿ ಎಂದು ಸಾರ್ವಜನಿಕ ಭಾವನೆ ಮೂಡಿಬಂದಿದೆ.

ಇಂತಹ ಪೊಲೀಸ್ ಇಲಾಖೆಗೆ ನಾನು ಸೇರಲೋ ಬೇಡವೋ ಎಂದುಕೊಂಡೇ ಐಪಿಎಸ್

ಅಧಿಕಾರಿಯಾಗಿ ಸೇರಿದೆ. ಆದರೆ ಇಲಾಖೆಗೆ ಸೇರಿದ ನಂತರ ನನಗೆ ವೇದ್ಯವಾದ ವಿಷಯವೇನೆಂದರೆ ಕೇವಲ ಸಿನಿಮಾದಲ್ಲಿ ಮಾತ್ರ ಪೊಲೀಸಪ್ಪ ಮಾಮಾ ಎಂದು ಬಿಂಬಿತವಾಗುತ್ತಾನೆಯೇ ಹೊರತು ನಿಜ ಜೀವನದಲ್ಲಿ ಯಾರೂ ಪೊಲೀಸರನ್ನು ಲೈಟಾಗಿ ತೆಗೆದುಕೊಳ್ಳುವುದೇ ಇಲ್ಲ ಎನ್ನುವುದು. ಒಂದು ವೇಳೆ ಏನಾದರೂ ಪೊಲೀಸರನ್ನು ಚುಚ್ಚಿದರೆ ನಮ್ಮ ಲೈಫೇ ಲೆಫ್ಟ್‌ರೈಟ್ ಆಗಿಬಿಡುತ್ತದೆ ಎನ್ನುವುದು ಸಾರ್ವಜನಿಕರೆಲ್ಲರಿಗೂ ತಿಳಿದಿರುವುದರಿಂದ ನಿಜ ಜೀವನದಲ್ಲಿನ ಪೊಲೀಸ್ ಚಿತ್ರ ಅವರೆಲ್ಲರೂ ತುಂಬಾ ಸಿಡುಕರು-ಗಂಭೀರ ವದನದವರು ಎನ್ನುವುದು. ಹೀಗೆ ಪೊಲೀಸರ ಬಗ್ಗೆ ಹೆದರಿಕೆ ಇರುವುದರಿಂದಲೇ ಸಿನಿಮಾದಲ್ಲಿ ಪೊಲೀಸರು ಬೇಸ್ತು ಬಿದ್ದಾಗ ಜನ ಹೊಟ್ಟೆ ತುಂಬಾ ನಕ್ಕುಬಿಡುವುದು ಎಂದೇ ನನ್ನ ಭಾವನೆ.

ಇಲಾಖೆ ಸೇರಿದ ಎರಡು ತಿಂಗಳ ನಂತರ ಹೇಗಿದ್ದರೂ ನೀನು ಹಾಸ್ಯಪ್ರವೃತ್ತಿ ಉಳ್ಳವನು. ನಿನ್ನಿಂದ ಇಲಾಖೆಯ ಇಮೇಜ್ ಖಂಡಿತಾ ಬದಲಾಗುತ್ತದೆ ಎಂದಳು ನನ್ನ ಸೋದರಿ ಒಂದು ದಿನ. ಅದು ಹೇಗೆ ಎಂದು ಕೇಳಿದೆ. ಅಣ್ಣ ನೋಡು ಪೊಲೀಸರೆಂದರೆ ಜನರ ಮನಸ್ಸಿನಲ್ಲಿ ಯಾವ ಭಾವನೆ ಇದೆ ಹೇಳು ಅವರು ಹುಬ್ಬು ಗಂಟರು, ಸಿಡುಕು ಮೂತಿಯವರು, ಎಣ್ಣೆ ಮುಖದವರು, ಪಾಪದವರು ಎನ್ನುವ ಭಾವನೆ ತಾನೇ ಎಂದಳು. ಹೌದು ಎಂದೆ. ನೋಡು ನೀನಂತೂ ಧಡೂತಿ ಪೊಲೀಸನಲ್ಲ ಸಣಕಲ ಕಡ್ಡಿಯಂತಿದ್ದೀಯ, ಐಪಿಎಸ್ ಪಾಸಾಗಿರುವುದರಿಂದ ಬುದ್ಧಿ ಇದೆ ಎಂದು ನಿಮ್ಮ ಠಾಣೆಗೆ ಬರುವವರು ಭಾವಿಸಬಹುದು. ಯಾವಾಗಲೂ ನಗುನಗುತ್ತಾ ಇರು. ಪೊಲೀಸ್ ಜೀವನದಲ್ಲಿ ಬರುವ ಘಟನೆಗಳನ್ನು ಸಕ್ಕರೆ ಜತೆ ಆಸ್ವಾದಿಸಿ ನೀನೂ ನಕ್ಕು ಇತರರನ್ನೂ ನಗಿಸು ಎಂದಳು.

ಸೋದರಿಯ ಮಾತುಗಳನ್ನೇ ವೇದ ವಾಕ್ಯ ಮಾಡಿಕೊಂಡ ನಾನು ಹಾಸ್ಯಾಸ್ಪದ ವ್ಯಕ್ತಿ ಆಗದಿದ್ದರೂ ಜನರಲ್ಲಿ ಸಂತಸ ಉಂಟುಮಾಡುವ ಪೊಲೀಸನಾಗಬೇಕು ಎಂದು ಅಂದೇ ಮನಸ್ಸು ಮಾಡಿಕೊಂಡೆ. ಅದೇ ಸಂಜೆ ಸೋದರಿಯ ಗೆಳತಿ ಶೋಭಾ ಮನೆಗೆ ಬಂದಳು. ಪಿ.ಎಸ್.ಐ. ಆಗಿದ್ದಕ್ಕೆ ಕಂಗ್ರಾಟ್ಸ್ ಅಂತ ಕೈಕುಲಕಿದಳು. ನಾನು ಪಿಎಸ್‌ಐ ಅಲ್ಲ ಕಣಮ್ಮಾ, ಆ ಮೂರು ಅಕ್ಷರ ತಿರುಗು ಮುರುಗು ಮಾಡಿದರೆ ಬರುವ ಐಪಿಎಸ್ ಎಂದೆ. ಅವಳ ಮುಖ ಸಣ್ಣದಾಯಿತು. ಹಾಗಾದರೆ ನೀನು ಪೊಲೀಸ್ ಠಾಣೆಯ ಬಾಸ್ ಆಗುವುದಿಲ್ಲವಾ ಅಂದಳು. ಇಲ್ಲ ನಾನು ಅವನಿಗಿಂತಾ ಹಿರಿಯ ಎಂದೆ. ಓಹ್ ಸಿನಿಮಾಗಳಲ್ಲಿ ಖಾಕಿ ಸೂಟ್ ಧರಿಸಿ ಅಡ್ಡ ಬೆಲ್ಟ್ ಹಾಕಿ ರಾಜಕೀಯ ವ್ಯಕ್ತಿಗಳ ಜತೆ ಶಾಮೀಲಾಗುವಂತಹ ಪೊಲೀಸ್ ಕಮೀಷನರ್ ತರಹದ ವ್ಯಕ್ತಿಯಾ ಎಂದಳು. ತಲೆದೂಗಿದೆ. ಥೂ ಬಿಡಪ್ಪಾ, ನೀವೆಲ್ಲ ವಿಲನ್‌ಗಳು ಎಂದು ಬಿಟ್ಟಳು.

ಅಯ್ಯಯ್ಯೋ, ನಗೆ ಪಾಟಲಿನ ವ್ಯಕ್ತಿಯಲ್ಲದಿದ್ದರೂ ಇನ್ನೊಬ್ಬರಲ್ಲಿ ಮುಗುಳ್ನಗೆ ಮೂಡಿಸುವ ನಗು ಮುಖದ ಪೊಲೀಸ್‌ನಾಗಬೇಕೆಂದಿದ್ದ ನನಗೆ ಇವಳು ವಿಲನ್ ಮಾಡಿಬಿಟ್ಟಳಲ್ಲಾ ಎಂದು ಬೇಜಾರಾಯಿತು. ನನ್ನ ಹಾಸ್ಯ ಪ್ರವೃತ್ತಿಯಿಂದ ಬೇರೆಲ್ಲರಿಗಿಂತಾ ಭಿನ್ನವಾಗಿರಲೇಬೇಕು ವಿಲನ್ ಅಂತೂ ಖಂಡಿತಾ ಆಗಬಾರದು ಎಂದು ಅಂದೇ ತೀರ್ಮಾನಿಸಿದೆ. ನಗುಮುಖವನ್ನೇ ನನ್ನ ಟ್ರೇಡ್ ಮಾರ್ಕ್ ಮಾಡಿಕೊಂಡೆ.

ಪೊಲೀಸ್ ತರಬೇತಿ ಶಾಲೆಯಲ್ಲಿ ಸಣ್ಣ ಸಣ್ಣ ವಿಷಯಗಳನ್ನು ಗಮನಿಸಿ ಗಹಗಹಿಸಿ ನಕ್ಕು ಬೀ ಸೀರಿಯಸ್- ಯೂ ಆರ್ ಎ ಐಪಿಎಸ್ ಆಫೀಸರ್ ಎಂದು ಹಲವು ಬಾರಿ ನಮ್ಮ ಹಿರಿಯರಿಂದ ಬೈಸಿಕೊಂಡರೂ ನಾನು ಬದಲಾಗಲಿಲ್ಲ. ವೃತ್ತಿ ಏನಾದರಂತೆ, ಪ್ರವೃತ್ತಿ ಅದೇ ತಾನೇ ಎಂದು ನನ್ನನ್ನು ಬಲ್ಲವರು ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ.

ಮುಂದೆ ಜಿಲ್ಲಾ ತರಬೇತಿಗೆಂದು ಜಿಲ್ಲೆಯೊಂದಕ್ಕೆ ಬಂದೆ. ಅದೇ ಜಿಲ್ಲೆಗೆ ತರಬೇತಿಗೆ ಬಂದಿದ್ದ ಇನ್ನೊಬ್ಬ ಐಪಿಎಸ್ ಅಧಿಕಾರಿ. ನನ್ನ ಹಾಗೆಯೇ ಅವನಿಗೂ ಹಾಸ್ಯ ಇಷ್ಟ. ಆದರೆ ಅವನ ಮುಖ ಮಾತ್ರ ಬೇರೆ ಪೊಲೀಸರಂತೆ ತೀರಾ ಸಿಡುಕು. ಯಾವಾಗಲೂ ಹುಬ್ಬುಗಂಟು ಇಟ್ಟುಕೊಂಡಿರುತ್ತಿದ್ದ. ಯಾರೇ ನಗಿಸಿದರೂ ನಗುತ್ತಿರಲಿಲ್ಲ. ನಮ್ಮ ಸಹೋದ್ಯೋಗಿ ಮಿತ್ರರು ನಮ್ಮಿಬ್ಬರಿಗೆ ಪೂರಬ್-ಪಶ್ಚಿಮ್ ಎಂದು ಹೆಸರಿಟ್ಟಿದ್ದರು. ಒಂದು ದಿನ ನಾವಿಬ್ಬರೂ ಸಿವಿಲ್ ಡ್ರೆಸ್ಸಿನಲ್ಲಿ ಹೋಟೆಲೊಂದಕ್ಕೆ ಊಟ ಮಾಡಲು ಹೋಗಿ ಊಟ ಮುಗಿಸಿ ಹೊರಬಂದೆವು. ಬಾಗಿಲ ಬಳಿ ವಿಶ್ವದ ಅತಿ ಪುರಾತನ ದಂಧೆಯ ಇಬ್ಬರು ಯುವತಿಯರು ನಿಂತಿದ್ದರು. ಅವರಲ್ಲಿ ಒಬ್ಬಳು ನನ್ನ ಸಹೋದ್ಯೋಗಿಯತ್ತ ಕೈ ಮಾಡಿ 'ಟೈಂಪಾಸ್ ಮಾಡೋಣ ಬರ್ತೀಯಾ?' ಎಂದಳು. ಆತ ನನ್ನತ್ತ ಕಣ್ಣು ಮಿಟುಕಿಸಿ 'ಆಗಲಿ, ಇಬ್ಬರೂ ಬನ್ನಿ' ಎಂದು ಹೇಳಿ ಸ್ವಲ್ಪ ದೂರ ಹೋಗಿ ತನ್ನ ವೈರ್‌ಲೆಸ್ ಸೆಟ್ ಮೂಲಕ ಪೊಲೀಸ್ ಜೀಪ್ ತರಿಸಿ ಅದರಲ್ಲಿ ಅವರಿಬ್ಬರನ್ನೂ ದಬ್ಬಿ ಠಾಣೆಗೆ ಕರೆದೊಯ್ದು ಲಾಕಪ್‌ಗೆ ನೂಕಿ 'ನೀವು ಇಲ್ಲಿ ಟೈಂ ಪಾಸ್ ಮಾಡಿ' ಎಂದು ಹೇಳಿದಾಗ, 'ನಿಮ್ಮ ಸಿಡುಕು ಮೂತಿ ದೋಸ್ತ್‌ಗೆ ಸ್ವಲ್ಪವೂ ರಸಿಕತೆ ಇಲ್ಲವೇ' ಎಂದು ಅವರಲ್ಲೊಬ್ಬಳು ನನಗೆ ಕೇಳಿದಳು. 'ಆತನ ಹಾಸ್ಯ ಪ್ರವೃತ್ತಿಯಿಂದಲೇ ನೀವು ಈಗ ಕಂಬಿ ಎಣಿಸುತ್ತಿರುವುದು' ಎಂದು ನಾನು ಉತ್ತರಿಸಿದಾಗ ಅವಳು ಮುಖ ಸಿಂಡರಿಸಿದಳು. ನನ್ನ ಸಹೋದ್ಯೋಗಿ ಗಹಗಹಿಸಿ ನಕ್ಕು ಪೊಲೀಸ್ ಠಾಣೆಯಲ್ಲಿದ್ದವರನ್ನೆಲ್ಲಾ ಆಶ್ಚರ್ಯಚಕಿತರನ್ನಾಗಿ ಮಾಡಿದ್ದ.

ಒಂದು ಬಾರಿ ಠಾಣೆಯೊಂದರ ತಪಾಸಣೆಗೆಂದು ನಾನು ತಾಲ್ಲೂಕು ಕೇಂದ್ರವೊಂದಕ್ಕೆ ಹೋಗಿದ್ದೆ. ರಾತ್ರಿ ಸುಮಾರು ಒಂಭತ್ತು ಗಂಟೆಗೆ ಯೂನಿಫಾರಂ ಧರಿಸಿದ್ದ ಪಿಸಿ ಒಬ್ಬ ನನ್ನ ರೂಮಿಗೆ ಬಂದು ವೈರ್‌ಲೆಸ್ ಸಂದೇಶವೊಂದನ್ನಿತ್ತ. ಆತನ ಬಾಯಿಂದ ಘಂ ಎಂದು ವಾಸನೆ ಹೊಡೆಯುತ್ತಿತ್ತು. ಸರಾಯಿ ಕುಡಿದು ಎಸ್‌ಪಿ ಬಳಿ ಬರೋ ಧೈರ್ಯ ಹೇಗೆ ಬಂತು, ನಿಲ್ಲು ನಿನ್ನ ಹೆಸರೇನು ಎಂದೆ. ಆತ ಹೆದರಿ ಕಾಲಿಗೆ ಬುದ್ಧಿ ಹೇಳಿದ. ನನಗೆ ಏನಾಯಿತೋ ಏನೋ ಗೊತ್ತಿಲ್ಲ, ನಾನು ಅವನನ್ನು ಅಟ್ಟಿಸಿಕೊಂಡು ಹೋದೆ. ಲುಂಗಿ ಬನಿಯನ್ ಧರಿಸಿದ್ದ ನಾನು ರಾತ್ರಿ ವೇಳೆ ಯೂನಿಫಾರಂ ಧರಿಸಿದ ಪಿಸಿ ಒಬ್ಬನನ್ನು ಬೆನ್ನತ್ತಿ ಹೋಗುವುದನ್ನು ನೋಡಿ ಹಾದಿ ಹೋಕರೆಲ್ಲ ರಸ್ತೆ ಬದಿ ನಿಂತು ನನ್ನನ್ನೇ ನೋಡತೊಡಗಿದರು. ಅವರಲ್ಲಿ ಯಾರೋ ಒಬ್ಬರು ಪೊಲೀಸ್ ಠಾಣೆಗೆ ಫೋನು ಮಾಡಿರಬೇಕು. ಎರಡೇ ನಿಮಿಷದಲ್ಲಿ ಸ್ಥಳಕ್ಕೆ ಪೊಲೀಸ್ ಜೀಪೊಂದು ಬಂದು ಅದರಲ್ಲಿದ್ದವರು ನನ್ನನ್ನು ಅನಾಮತ್ತಾಗಿ ಜೀಪಿನಲ್ಲಿ ಕೂರಿಸಿ ಠಾಣೆಗೆ ಎಳೆದೊಯ್ದರು. ನಾನು ಎಷ್ಟು ಕೂಗಿದರೂ ಅವರಂತೂ ಕ್ಯಾರೇ ಎನ್ನಲಿಲ್ಲ. ಜೀಪಲಿದ್ದವರೂ ಗುಂಡಿನ ಪ್ರಭಾವದಲ್ಲಿದ್ದರು. ಠಾಣೆಯ ಆವರಣದಲ್ಲಿ ಜೀಪು ನಿಂತಾಗ ನನ್ನನ್ನು ನೋಡಿದ ಠಾಣಾಧಿಕಾರಿ ಗಾಭರಿಯಿಂದ ಸಲ್ಯೂಟ್ ಹೊಡೆದಾಗ ಜೀಪಿನಲ್ಲಿದ್ದ ಗುಂಡಿನ ವೀರರು

ಕಾಲಿಗೆ ಬುದ್ಧಿ ಹೇಳಿದರು. ನಾನು ಅವರನ್ನೂ ಅಟ್ಟಿಸಿಕೊಂಡು ಹೋಗುವ ಧೈರ್ಯ ಮಾಡಲೇ ಇಲ್ಲ. ಅಯ್ಯೋ ಇವತ್ತು ನಾನು ಸಾರ್ವಜನಿಕರ ಮುಂದೆ ಕಾಮಿಕ್ ಕ್ಯಾರೆಕ್ಟರ್ ಆದನಲ್ಲಾ ಎಂದು ಪರಿತಪಿಸಿದೆ.

ಮುಂದಿನ ವೃತ್ತಿ ಜೀವನದಲ್ಲಿ ನಮ್ಮ ಇಲಾಖೆಯಲ್ಲಿ ನಡೆದ ಹಲವಾರು ಘಟನೆಗಳನ್ನು ಹಾಸ್ಯದ ಆ್ಯಂಗಲ್‌ನಿಂದ ನೋಡಿದ ನಾನು ಅಂತಹ ಘಟನೆಗಳ ಬಗ್ಗೆ ಪುಸ್ತಕವೊಂದನ್ನು ಬರೆದೆ. ಅದರ ಬಿಡುಗಡೆಗೆ ನನ್ನ ಹಿರಿಯ ಅಧಿಕಾರಿಯೊಬ್ಬರನ್ನು ಆಹ್ವಾನಿಸಿದ್ದೆ. ಅವರ ಮಾತೃಭಾಷೆ ಕನ್ನಡವಲ್ಲದಿದ್ದರೂ ನನ್ನ ಮೇಲಿನ ವಿಶ್ವಾಸಕ್ಕೆ ಸಮಾರಂಭಕ್ಕೆ ಬಂದರು. ನಾನು ಈಗ ಬಿಡುಗಡೆ ಮಾಡುತ್ತಿರುವ ಪುಸ್ತಕವನ್ನು ಓದಿಲ್ಲ - ಏಕೆಂದರೆ ನನಕೆ ಕನ್ನಡ ಬರುವುದಿಲ್ಲ. ಆದರೂ ನಮ್ಮ ಇಲಾಖೆಯ ಇತರರು ಲೇಖಕರು ನಗು ಬರಿಸುವ ವ್ಯಕ್ತಿ ಎಂದು ನನಗೆ ಹೇಳಿದ್ದಾರೆ. ಹೀಗಾಗಿ ಅವರು ತುಂಬಾ ಒಳ್ಳೆಯ ಜೋಕರ್ ಎಂದು ಮಾತು ಮುಗಿಸಿದರು. ಎಲ್ಲರೂ ನನ್ನತ್ತ ನೋಡಿ ಗೊಳ್ಳನೆ ನಕ್ಕರು.

ಈ ಘಟನೆಯ ನಂತರ ನಾನು ಸ್ವಲ್ಪ ಸೀರಿಯಸ್ ಆಗಲು ಪ್ರಯತ್ನಿಸುತ್ತಿದ್ದೇವೆ.

❖

ಶೌಚಾಲಯದಲ್ಲಿ ಸ್ವರ್ಗ

ಅವರು ವಿದೇಶದಿಂದ ಹಿಂದಿರುಗುತ್ತಿದ್ದಾಗ ವಿಮಾನದಲ್ಲಿದ್ದ ಎರಡು ಶೌಚಾಲಯಗಳಿಗೂ ನಾ ಮುಂದು ತಾ ಮುಂದು ಅಂತ ನುಗ್ಗುತ್ತಿದ್ದ ಮಹಿಳೆಯರು ಸಾಕಷ್ಟು ಸಮಯವನ್ನು ಒಳಗೇ ಕಳೆಯುತ್ತಿದ್ದರು. ಹೊರ ಬರುವಾಗ ಬೇರೆ ಸೀರೆ ಉಟ್ಟು ಬರುತ್ತಿದ್ದರು. ಅಂದರೆ ಸ್ನಾನ ಮಾಡಿ ಬರುತ್ತಿದ್ದರೋ ಏನೋ. ಹೀಗಾಗಿ ಅವರಿಗೆ ಶೌಚಾಲಯಕ್ಕೆ ಹೋಗೋಕೆ ಅವಕಾಶವೇ ಸಿಗಲಿಲ್ಲ. ವಿಮಾನ ಬೊಂಬಾಯಿಗೆ ಬಂದಿಳಿದಾಗ, ಅವರು ಸರತಿಯ ಸಾಲಿನಲ್ಲಿ ನಿಂತು ಸುಂಕದವನ ಬಳಿ ಹೋದಾಗ ಅವನು ಎನಿಥಿಂಗ್ ಟು ಡಿಕ್ಲೇರ್ ಅಂತ ಕೇಳಿದಾಗ ಅಲ್ಲಿಯವರೆಗೆ ಹೇಗೋ ತಡೆದುಕೊಂಡಿದ್ದ ಅವರು ಗಟ್ಟಿಯಾಗಿ, ಈಗ ನನ್ನನ್ನು ಶೌಚಾಲಯಕ್ಕೆ ಕಳುಹಿಸದಿದ್ದರೆ ಮುಂದಿನ ಪರಿಣಾಮಕ್ಕೆ ನೀನೇ ಹೊಣೆ ಅಂದರು. ಹಾಗೆ ಅವರು ಶೌಚಾಲಯಕ್ಕೆ ಹೋಗಿ ಕೆಲಸ ಮುಗಿಸಿಕೊಳ್ಳುವಾಗ ನಿಜವಾದ ಸ್ವರ್ಗ ಅಂದರೆ ಇದೇ ಅನಿಸಿತಂತೆ. ಆದರೆ ಸ್ವರ್ಗವಾಸಿಗಳಿಗೆ ಹಸಿವು ಆಗುವುದಿಲ್ಲ, ಅಂದರೆ ಅವರು ತಿನ್ನುವುದಿಲ್ಲ ಅಂದ ಮೇಲೆ ಅವರಿಗೆ ಶೌಚ ಗೃಹದ ಅವಶ್ಯಕತೆಯೇ ಇಲ್ಲ. ಅದಕ್ಕೇ ಅದನ್ನು ಸ್ವರ್ಗ ಅಂತ ಕರೆಯುತ್ತಾರೆ. ಆದರೂ ಸ್ವರ್ಗವಾಸಿಗಳಿಗೆ ನಿಜವಾದ ಸ್ವರ್ಗದ ಸುಖ ಏನು ಅಂತ ಗೊತ್ತಿರುವುದೇ ಇಲ್ಲ ಅಂದುಕೊಂಡರು.

(ರಾ.ಶಿ.ಯವರ ಪಡವಣ ಯಾತ್ರೆಯಿಂದ)

ಸಾಲಾಂದ್ರೆ ಸುಮ್ನೆನಾ.....?

- ವೈ.ಎನ್. ಗುಂಡೂರಾವ್

ನೆನೆದವರ ಮನದಲ್ಲಿ ಎನ್ನುವಂತೆ ದೂರದಲ್ಲಿ ಪರಮೇಶಿ ಬರುತ್ತಿದ್ದುದು ನೋಡಿ ಒಂದು ರೀತಿಯ ಸಂತೋಷವೇ ಆಯಿತು. ಮಗನ ಸ್ಪೋರ್ಟ್ಸ್ ಕಮಿಟ್‌ಮೆಂಟ್‌ಗೋಸ್ಕರ ಐದು ಸಾವಿರ ಸಾಲ ಬೇಕಿತ್ತು. ಪರಮೇಶಿ ಸಿಕ್ಕಿದ್ದರಿಂದ ಸಾಲ ಗ್ಯಾರಂಟಿ ಸಿಗುತ್ತೆ ಅನಿಸ್ತು. ಹತ್ತಿರ ಬಂದಾಗ ಅವನ ತಲೆ ತಗ್ಗಿಸಿದ ಮುಖ ನೋಡಿದರೆ, ನಾನೇ ಮಾತನಾಡಿಸದಿದ್ದರೆ ತಗ್ಗಿಸಿದ ತಲೆ ಎತ್ತದೆ ಹಾಗೇ ಹೊರಟುಬಿಡುತ್ತಿದ್ದನೇನೋ ಎಂಬ ಸಂಶಯದಿಂದ 'ಪರಮೇಶಿ' ಎಂದೆ. ನಿಂತ. ಬೇಯಿಸಿ ಕಿವುಚಿದ ಆಲೂಗೆಡ್ಡೆಯ ರೀತಿ ಮುಖ ಮಾಡಿಕೊಂಡಿದ್ದು ನೋಡಿ ಏನೋ ಅನಾಹುತವಾಗಿರಬಹುದೆನ್ನಿಸಿ ಏನ್ ಸಮಾಚಾರ? ಎಂದೆ. ಮಾತೇ ಇಲ್ಲ, ಈ ರೀತಿ ಮುಖ ಮಾಡ್ಕೊಂಡು ನಿಂತ ಪರಮೇಶಿಯನ್ನು ಹೇಗೆ ಸಾಲ ಕೇಳುವುದು, ಹೇಗಾದರೂ ಹಣ ಹೊಂದಿಸಲೇ ಬೇಕಿತ್ತು. ಪರಮೇಶಿಯನ್ನು ಕೊಂಚ ಖುಷಿ ಪಡಿಸಲು ದರ್ಶಿನಿಗೆ ಕರೆದೊಯ್ದೆ. ಮುಖದಲ್ಲಿ ಕಳೆ ಮಾಯವಾಗಿದ್ದರೂ ಹೊಟ್ಟೆಗೆ ಮೋಸ ಮಾಡಿಕೊಳ್ಳದೆ, ಸಂಕೋಚವಿಲ್ಲದೆ ಬೇರರ್ ಹೇಳಿದ ಬಹುಪಾಲು ಐಟಂ ತರಿಸಿ ತಿಂದ. ಸದ್ಯ ಇನ್ನು ಪರವಾಗಿಲ್ಲ, ಮುಲಾಜಕ್ಕೆ ಸಿಕ್ಕಿದವನಿಂದ ಐದುಸಾವಿರ ಕಕ್ಕಿಸಬಹುದು ಎನಿಸಿತು. ಬಿಲ್ ಹಣ ಇನ್ನೂರು ಕೈಬಿಟ್ಟಿತ್ತು. ಈಗ ಐದು ಸಾವಿರ ಹುಟ್ಟಲಿಲ್ಲಾಂದ್ರೆ ಖರ್ಚು ಮಾಡಿದ್ದಕ್ಕೂ ಸಾರ್ಥಕನಾದ್ರೂ ಏನು?

ಸರಿ ಅದೇನಯ್ಯ ನಿನ್ನ ಸಮಸ್ಯೆ. ಪ್ರಪಂಚ ತಲೆಮೇಲೆ ಬಿದ್ದವರಂತೆ ಮುಖ ಕೆಳಗೆ ಹಾಕಿ, ಹಿಂದಿನ ರಾತ್ರಿ ಕೈಲಿದ್ದ ಉಂಗುರಾನೋ, ಕುತ್ತಿಗೇಲಿದ್ದ ಸರನೋ ಕಳಕೊಂಡು, ಹುಡುಕಿಕೊಂಡು ಹೊರಟ ರೀತಿ ಇತ್ತು ಎಂದೆ.

ಸದ್ಯ ಚಿನ್ನದ ವಿಷ್ಯಕ್ಕೆ ಹೋದೆ. ಕಳಕೊಳ್ಳೋಕ್ಕೆ ಕೊಂಡದ್ದಾದರೂ ಎಂದು? ಹೆಂಡ್ತಿ ಕುತ್ಗೇಲಿ ಕರಿಮಣಿ ಸರದ ಜೊತೆಗೆ ಮೂರು ಸವರನ್ನಿನ ಸರ ಬಿಟ್ರೆ ಇಲ್ಲ, ಇನ್ನು ನನ್ನ ಕೈಲಿ ಮಾವ ಕೊಟ್ಟ ಉಂಗುರ. ಈ ಎಡಗೈ ಬೆರಳಲ್ಲಿ ರಾಮಾಧ್ಯಾನಿಗಳು ಒಳ್ಳೇಯದಾಗುತ್ತೆ ಅಂತಾ ಟೋಪಿ ಹಾಕಿದ ತಾಮ್ರದ ಉಂಗುರ. ಇದರಿಂದ ಏನೂ ಪ್ರಯೋಜನವಿಲ್ಲಾಂತ ಗೊತ್ತು. ಆದ್ರೆ ಹೆಂಡ್ತಿಗೆ ಸಮಾಧಾನ, ರಾಮಾಧ್ಯಾನಿಗಳಿಗೆ ಕೊಟ್ಟು ಕಳ್ಕೊಂಡ ಗೌರವಕ್ಕೆ ತಾಮ್ರದ ಉಂಗುರು ಹೊಳೀತಾ ಇದೆ.

ಇವನನ್ನು ಹೇಗೆ ಐದು ಸಾವಿರದ ಖೆಡ್ಡಕ್ಕೆ ಕೆಡಹುವುದೆಂದು ಯೋಚಿಸತೊಡಗಿದೆ. ಆದರೆ ಮಾತು ಎಲ್ಲೋ ಸುತ್ತಿಕೊಂಡು ಬಂದು ಎಲ್ಲೋ ನಿಲ್ಲುತ್ತಿತ್ತು. ಹೋಟೇಲಿನ ಹೊರಗಡೆ ಬಂದು ಯಾರೂ ಇಲ್ಲದ ಮೂಲೆ ಸ್ಥಳ ಆರಿಸಿ ನಿಂತೆ. ಹೇಗೆ ಪೀಠಿಕೆ ಹಾಕುವುದು ಎಂದು ಯೋಚಿಸುವಷ್ಟರಲ್ಲಿ ಮುರುಗೇಶ ಬಂದವನೇ ಪರಮೇಶಿಯನ್ನು ದುರು ದುರು ನೋಡಿದ. ನನಗೆ ಒಂದು ರೀತಿಯ ಭಯವಾಯಿತು.

"ರೀ, ಪರಮೇಶಿ ಅನ್ನೋರೆ, ಮೂರು ತಿಂಗಳ ಮುಂಚೆ ನೀವು ನಮ್ಮ ಮನೆಗೆ ಬಂದಿದ್ದು ಜ್ಞಾಪಕ ಇದ್ಯಾ?"

"...."

"ಇವತ್ತು ಎಷ್ಟು ತಾರೀಕು ಅಂತಾಸಾರು ಗೊತ್ತಾ?"

"....."

"ನೀವು ಹೇಳಿದ ಮಾತಿನ ಮೇಲೆ ಜ್ಞಾಪಕ ಇದ್ಯಾ?"

"..."

"ತೆಗೀರಿ ನನ್ನ ಹತ್ತು ಸಾವಿರಾನಾ. ನಾನು ಕೊಡೋಕೆ ಮುಂಚೇನೆ ಹೇಳ್ದೆ. ನೀವು ಸರಿಯಾದ ವೇಳೆಗೆ ಹಿಂದಿರುಗಿಸದಿದ್ದರೆ ನನ್ನ ಮಾನ ಹರಾಜಾಗುತ್ತೆ ಅಂತಾ. ಆಗ, ಹಾಗೇನು ಮಾಡೋಲ್ಲ. ಅಂತ ಹೇಳಿ ತಗೊಂಡ್ಹೋದವ್ರು, ಕೊಡೋದು ಹಾಗಿರಲಿ, ಹೀಗಲ್ಲ ಹೀಗೆ ಅಂತಾ ತಿಳ್ಸೋ ಸೌಜನ್ಯ ಕೂಡಾ ಇಲ್ವಲ್ರೀ... ತಲೆ ತಗ್ಗಿಸಿಕೊಂಡು ನನ್ನ ಮನೆ ಮುಂದೇನೆ ಹೊರಟು ಹೋದ್ರೆ ಬಿಟ್ಟು ಬಿಡ್ತೀನಾ, ಏನಂತ ತಿಳ್ಕೊಂಡಿದ್ದೀರಿ? ನಿಮ್ದೂ ಒಂದು ಜೀವನಾನೇನ್ರೀ... ಥತ್..."

ಈಗ ನನಗೆ ಅರ್ಥವಾಗಿತ್ತು. ಇವನೇ ಹತ್ತುಸಾವಿರ ತೆರಬೇಕಿರುವಾಗ ಇನ್ನು ಪರಮೇಶಿಯಿಂದ ಐದುಸಾವಿರ ಸಾಲ ಪಡೆದ ಹಾಗೆ ಎನ್ನಿಸಿತು.

ಮುರುಗೇಶ ಪುನಃ ಪ್ರಾರಂಭಿಸಿದ. ಅಲ್ಲಾ ನಾನು ಕೊಡೋವಾಗ್ಲೆ ಹೇಳಿದ್ದೀನಿ. ಹೇಳಿದ ಟೈಂಗೆ ಸರಿಯಾಗಿ ಕೊಡ್ತೇನೆ ಅಂತಾ ಇಸ್ಕೊಂಡು ಹೋದವ್ರಿಗೆ... ಅದೇನೋ ಹೇಳ್ತಾರಲ್ಲ ಹಾಗೆ.. "ಸಾಲವನು ತರುವಾಗ ಹಾಲುಜೇನುಂಡಂತೆ, ಸಾಲಿಗನು ಬಂದು ಕೇಳಿದರೆ ಕುಂಡೆಗೆ ಚೇಳು ಕಡಿದಂತೆ ಸರ್ವಜ್ಞ" ಅಂತಾ ಕೇಳಿದ್ದೀರಿ ತಾನೇ! ಅಲ್ಲಿ ನನ್ನ ಭಾವಮೈದುನನ ಹೆಂಡ್ತಿ ಆಸ್ಪತ್ರೇಲಿ ಮಲಗಿದ್ದಾಳೆ. ನಮ್ಮತ್ತೆ ಮಾವಂದಿರಿಗೆ ಹುಷಾರಿಲ್ಲ, ನನ್ನ ತಂದೆ ತಾಯಿ ಜೊತೆಗೆ ನನ್ನ ಹೆಂಡ್ತಿ ತಂದೆ ತಾಯಿ ಜವಾಬ್ದಾರಿನೂ ಬಿದ್ದಿದೆ. ಅವರ ಮೆಡಿಕಲ್ ಬಿಲ್ಲು ಅದೂ ಇದೂ ಅಂತಾ ಪ್ರತಿ ತಿಂಗಳೂ ನಾನೇ ಹಣ ಹೊಂದಿಸ್ಬೇಕು. ಇದಲ್ಲದೆ ಇನ್ನು ಮುಂದಿನ ತಿಂಗಳು ಮದುವೆ ಸೀಸನ್ನು, ನಮ್ಮ ವಂಶಾನೋ ಅದೇನೋ ಹೇಳ್ತಾರಲ್ಲ... ದೊಡ್ಡ ಆಲದ ಮರದ ರೀತಿ. ಸಾಕಪ್ಪ ಸಾಕು ಅನ್ನಿಸಿಬಿಟ್ಟಿದೆ. ನೋಡಿ ಇವತ್ತು ತಾರೀಕು 28, ಒಂದನೇ ತಾರೀಕಿನ ಹೊತ್ತಿಗೆ ಹೊಂದಿಸಿಡಿ. ಬೇರೆ ಸಬೂಬೇ ಬೇಡ, ಬರ್ತೀನಿ ಎಂದು ಧಮಕಿ ಹಾಕಿ ಹೊರಟೇ ಹೋದ.

ಅಲ್ಲಯ್ಯಾ ಪರಮೇಶಿ, ನೀನು ಇಸ್ಕೊಂಡಿರೋದೇನೋ ಸರಿ. ಆದ್ರೆ ಅವನು ಅಷ್ಟು ಉಗೀತಾ ಇದ್ರೂ ನೀನು ತುಟಿ ಪಿಟಿಕ್ಕೆನ್ನದೆ ಇದ್ದೆಲ್ಲಾ ಯಾಕೆ?

"ಬಿಡಪ್ಪ ನಿಂಗೆ ಇದೆಲ್ಲ ಅರ್ಥವಾಗೋಲ್ಲ. ಅವನಿಗೆ ಯಾರೂ ಸಿಕ್ದೆ ಪಾಪ, ಅವನ ಸಂಸಾರ ತಾಪತ್ರಯಾನ ಹೇಳ್ಕೋತಿರುವಾಗ ನಾನ್ಯಾಗೆ ಮಧ್ಯೆ ಮಾತಾಡ್ಲಿ....?

❖

ಕಿರಿ ನಟಿ-ಹಿರಿ ನಟಿ......!

- ಎಚ್.ಗೋಪಾಲಕೃಷ್ಣ

ನಾಟಕ ಸ್ಪರ್ಧೆಯೊಂದಕ್ಕೆ ತೀರ್ಪುಗಾರರಾಗಿ ಹೋಗಿದ್ದ ನನ್ನ ಸ್ನೇಹಿತರು ಈ ಕಥೆಯನ್ನ ನನಗೆ ಹೇಳಿದರು.

ಹದಿನೈದು ಇಪ್ಪತ್ತು ವರ್ಷದ ಹಿಂದೆ ಬೆಂಗಳೂರಿನ ನಾಟಕ ರಂಗ ಅತ್ಯಂತ ಕ್ರಿಯಾಶೀಲವಾಗಿದ್ದ ಕಾಲ ಅದು. ಹದಿನಾಲ್ಕೋ ಹದಿನೈದೋ ಫ್ಯಾಕ್ಟರಿಗಳು ಸಾಂಸ್ಕೃತಿಕ ಚಟುವಟಿಕೆಗಳನ್ನ ಹಮ್ಮಿಕೊಂಡು ನಿರಂತರವಾಗಿ ಒಂದಲ್ಲ ಒಂದು ಚಟುವಟಿಕೆಯಲ್ಲಿ ನಿರತರಾಗಿರುತ್ತಿದ್ದವು. ಅಂತಹ ಒಂದು ನಾಟಕ ಸ್ಪರ್ಧೆ. ಆಗಸ್ಟ್ ತಿಂಗಳ ಕೊನೇದಿನಗಳು. ಹೇರಳವಾಗಿ ನಾಟಕಗಳು ನಡೆಯುತ್ತಿದ್ದರಿಂದ ಸರಿ ಸುಮಾರು ಹೆಸರು ಮಾಡಿರುವ ಎಲ್ಲರೂ ಒಂದಲ್ಲಾ ಒಂದು ನಾಟಕದಲ್ಲಿ ತಮ್ಮನ್ನೇ ನಟನಾಗಿಯೋ ನಿರ್ದೇಶಕನಾಗಿಯೋ ಸ್ಟೇಜ್ ಮೇನೇಜರ್ ಆಗಿಯೋ ತೊಡಗಿಸಿಕೊಂಡಿರುತ್ತಿದ್ದರು. ನಾಟಕ ಸ್ಪರ್ಧೆಗಳಿಗೆ ಜಡ್ಜಸ್ಸು ಸಿಗೋದು ಹುಲ್ಲಿನ ಮೆದೆಯಲ್ಲಿ ಸೂಜಿ ಹುಡುಕಿದಷ್ಟು ಕಷ್ಟದ ಕೆಲಸ. ಈ ಜಡ್ಜ್‌ಮೆಂಟು ಅಂದರೆ ನೋಡಿ-ಥ್ಯಾಂಕ್ ಲೆಸ್ ಜಾಬು. ಪ್ರೈಜುಗಳು ಬಂದವರು ಜಡ್ಜು ಅದೇನು ಮಾಡಿದ, ಚೆನ್ನಾಗಿ ಮಾಡಿದ್ದೆ ಕೊಟ್ಟ ಅಂತಾರೆ. ಪ್ರೈಜು ಬರದೇ ಇದ್ದವರು ಜಡ್ಜು ನಾಮ ಹಾಕಿದ ಅಂತಾರೆ. ಎರಡನೇ ಪ್ರೈಜು ಬಂದವನು ನನಗೇ ಮೊದಲನೇ ಪ್ರೈಜು ಬರಬೇಕಿತ್ತು ಅಂತಾನೆ. ಮೊದಲನೇ ಬಹುಮಾನ ತಗೊಂಡವನು ಮಿಕ್ಕ ಯಾರಿಗೂ ಬಹುಮಾನವೇ ಬರಬಾರದಾಗಿತ್ತು ಅಂತಾನೆ. ಒಟ್ಟಿನಲ್ಲಿ ಜಡ್ಜುಗಳಿಗೆ ಕೆಟ್ಟ ಹೆಸರು ಕೊಡೋಕ್ಕೆ ಎಲ್ಲರೂ ತುದಿಗಾಲ ಮೇಲೇನೇ ನಿಂತಿರ್ತಾರೆ. ಈ ಸತ್ಯ ಮೊದ ಮೊದಲು ನಿಮಗೆ ಗೊತ್ತಾಗುಲ್ಲ. ಕಾರ್ಯಕ್ರಮ ನಡೆಸೋನು ನಿಮ್ಮನ್ನ ಉಬ್ಬಿಸಿಬಿಡ್ತಾನೆ. ಕಳೆದ ಹತ್ತು ವರ್ಷದಿಂದ ಈಯಪ್ಪ ಮಾಡಿಸೋ ನಾಟಕಗಳಿಗೆ ಬಂದಿರೋ ಜಡ್ಜುಗಳ ಲಿಸ್ಟನ್ನ ನಿಮ್ಮೆದುರು ಬಿಚ್ಚಿಡ್ತಾನೆ. ಅದರಲ್ಲಿ ಯಾರೂ ಎರಡನೇ ಸಲ ಬಂದಿರೋಲ್ಲ ಅನ್ನೋದನ್ನ ನೀವು ಗಮನಿಸೋದಿಲ್ಲ. ಇಂಥಹ ಖ್ಯಾತನಾಮರು ಜಡ್ಜುಗಳಾಗಿ ಹೋಗಿದ್ದರು ಈ ಸ್ಪರ್ಧೆಗಳಿಗೆ, ನಾನೂ ಒಬ್ಬ ಖ್ಯಾತನಾಮನೇ (ಒಳ ಮನಸ್ಸು ನಿಮಗೆ ಛೇಡಿಸುತ್ತೆ-ನೀನು ಯಾವ ಮಹಾ ಕ್ಯಾತನೋ? -ಅಂತ ಆದರೂ ನೀವು ಅದನ್ನ ಇಗ್ನೋರಿಸುತ್ತೀರಿ) ಯಾಕೆ ಹೋಗಬಾರದೂ? ಅಂತ ನಿಮ್ಮ ಯೋಚನೆ. ಒಪ್ಪಿಕೊಳ್ಳುತ್ತೀರಿ, ಜಡ್ಜೂ ಆಗ್ತೀರಿ.

ಅಲ್ಲೀಗೆ ಹೋಗಿ ನಾಟಕ ನೋಡುಕ್ಕೆ ಕೂರ್ತೀರಲ್ಲಾ ಆಗ ನಿಮಗೆ ಆಗುವ ಅನುಭವವೇ ಬೇರೆ. ನೀವು ಯಾರಿಗೂ ಅಲ್ಲಿ ಸ್ನೇಹಿತರಲ್ಲ, ನಿಮ್ಮನ್ನ ಎಲ್ಲರೂ ದುಶ್ಯಾಸನನನ್ನ ನೋಡಿದ ಹಾಗೆ ನೋಡುತ್ತಾರೆ, ನಿಮ್ಮ ಚಲನವಲನಗಳನ್ನು ಕಣ್ಣಿನಲ್ಲಿ ಕಣ್ಣಿಟ್ಟು ಗಮನಿಸುತ್ತಾರೆ. ಅದೆಲ್ಲಕ್ಕಿಂತಲೂ ಮುಜುಗರ ತಮಾಶೆ ಅಂದರೆ ನಾಟಕ ಚೆನ್ನಾಗಿಲ್ಲ ಅಂದರೆ ಎಲ್ಲರೂ ಆರಾಮವಾಗಿ ಎದ್ದು ಹೋಗಿಬಿಡುತ್ತಾರೆ! ಆದರೆ ನೀವು ಕೂತ ಕುರ್ಚಿ ಬಿಟ್ಟು ಅಲ್ಲಾಡುವಂತಿಲ್ಲ - ಒಂದು ನರಕ ಸೃಷ್ಟಿಯಾಗಿರುತ್ತೆ ನಿಮ್ಮ ಸುತ್ತ !ಸ್ನೇಹಿತರು ಇಷ್ಟು ಹೇಳಿ ನಂತರ ಮುಖ್ಯ ಅಂಶಕ್ಕೆ ಬಂದರು.

ಕಾರ್ಖಾನೆಯಿಂದ ರಿಟೈರ್ ಆಗ್ತಿರೋ ಒಂದು ನಾಯಕಿ ಪಾತ್ರಧಾರಿಣಿ ಒಂದು ನಾಟಕದಲ್ಲಿ ಮಾಡಿದ್ದಳು. ಬೇರೆ ಕಾರ್ಖಾನೆಯಿಂದ ಮತ್ತೊಂದು ಆಗತಾನೇ ಕೆಲಸಕ್ಕೆ ಸೇರಿರೋ ಹುಡಿಗೀನೂ ಪಾತ್ರವಹಿಸಿದ್ದಳು. ಇಬ್ಬರಿಗೂ ಟಫ್ ಕಾಂಪಿಟಿಷನ್ನು. ಮೊದಲ ನಾಟಕದಲ್ಲಿ ಈ ವಯಸ್ಸಾಗಿರುವ ನಟಿ. ಅನುಭವ ಪಾತ್ರ ಚೆನ್ನಾಗಿಯೇ ಮಾಡಿದ್ದಳು. ಅದಾದ ನಾಲ್ಕನೇ ನಾಟಕವೋ ಐದನೇದೋ ಈ ಚಿಕ್ಕ ಹುಡುಗಿ ಪಾತ್ರ ಮಾಡಿದ್ದು. ಅಮೋಘವಾದ ಅಭಿನಯವನ್ನ ನೀಡಿಬಿಟ್ಟಳು. ಇಡೀ ನಾಟಕದ ಪೂರ್ತಿ ಅವಳದ್ದೇ ವಿಜೃಂಭಣೆ. ಒಂದು ತಾರೆ ಹುಟ್ಟಿತು ಅಂತ ಸಂತೋಷವಾಯಿತು ನಮಗೆ - ಅಂದರೆ ಜಡ್ಜುಗಳಿಗೆ. ನಾಟಕ ನೋಡ್ತಿರಬೇಕಾದರೆ ಕೆಲವರು ಕೆಲವು ಇಂಡೈರೆಕ್ಟ್ ಇನ್ಫ್ಲುಯೆನ್ಸ್ ತರ್ತಾರೆ. ಇಲ್ಲೂ ಹಾಗೇ ಆಯಿತು. ಹಿರಿ ನಟಿಯ ಕಡೆಯವರು ನಮ್ಮ ಹಿಂದೇನೇ ಕೂತು ಬೇರೆ ಪಾತ್ರಧಾರಿಗಳ ನಟನೆಯನ್ನ ಹೀಯಾಳಿಸೋದೂ ಈಕೆಯನ್ನ ಹೇಗೋ ಮಾತಿನ ನಡುವೆ ತಂದು ಪ್ರಭಾವ ಬೀರೋದೂ ನಡೀತು. ಚಿಕ್ಕ ಹುಡುಗೀದು ನಂಬರ್ ಒನ್ ಅಭಿನಯ ಅಂದೆನಲ್ಲಾ ನಾಟಕಗಳು ಮುಗಿದ ನಂತರ ಜಡ್ಜುಗಳು ಕೂತೆವು. ಪ್ರತೀ ನಾಟಕವನ್ನೂ ವಿಮರ್ಶಿಸಿ ಅಂಕ ನೀಡಿದೆವು. ಬಹುಮಾನ ವಿತರಣೆ ಮಾರನೇ ದಿವಸ.

ವೇದಿಕೆ ಮೇಲೆ ನಾವೆಲ್ಲರೂ ನಾಟಕ ನಡೆಸಿದ ಸಂಸ್ಥೆಯ ಮುಖ್ಯರು, ಜಡ್ಜುಗಳು ಅತಿಥಿಗಳು... ಹೀಗೆ ಎಲ್ಲರೂ ಕೂತಿದೇವೆ. ಬಹುಮಾನ ಘೋಷಣೆಗೆ ನಿರೂಪಕರೂ ವೇದಿಕೆ ಏರಿದರು. ಮೊದಲನೇ ಬಹುಮಾನ ಹೊಸಾ ನಟೀಗೆ ಘೋಷಣೆ ಆಯಿತು. ಹೊಸಾ ನಟಿ ಎದುರಿಗೇ ಕೂತಿದ್ದರೂ ಬಹುಮಾನ ಸ್ವೀಕರಿಸಲು ಬರಲಿಲ್ಲ. ಎರಡು ಮೂರು ಬಾರಿ ಒತ್ತಾಯ ಮಾಡಿದ ಮೇಲೆ ನಾಚುತ್ತಾ ನಾಚುತ್ತಾ ವೇದಿಕೆಗೆ ಬಂದಳು.

ಸಾರ್, ಅವರು (ಅಂತ ಹಿರಿಯ ನಟಿ ಕೂತಿದ್ದ ಜಾಗ ತೋರಿಸಿದಳು) ನನಗಿಂತ ದೊಡ್ಡ ನಟಿ-ಗ್ರೇಟ್ ಆರ್ಟಿಸ್ಟು. ಮೊದಲನೇ ಬಹುಮಾನ ನನಗೆ ಬೇಡ... ಅವರಿಗೆ ಕೊಡಿ ಅಂತ ಕೋರಿಕೊಳ್ಳುತ್ತೇನೆ.... ವೇದಿಕೆಯಿಂದ ಸರಸರ ಕೆಳಗಿಳಿದು ಬಿಟ್ಟಳು.

ಕಿವಿ ಗಡಚಿಕ್ಕುವ ಚಪ್ಪಾಳೆ ನಡುವೆ ಹಿರೀ ನಟಿ ಆ ಬಹುಮಾನ ಸ್ವೀಕರಿಸಿದರು ರೀ.....

ಹಿರೀ ನಟಿ ಪ್ರೀತಿಯಿಂದ ಕಿರೀ ನಟೀಗೆ ಬಹುಮಾನ ನಿನ್ನದು ನನಗೆ ಬೇಡ ಅಂತ ಹೇಳ್ತಾರೆ ಅಂತ ಅಂದುಕೊಂಡಿದ್ದೆವು..... ಅಂತ ಗೆಳೆಯರು ಮಾತು ಮುಗಿಸಿದರು.

ಹೋಗಲೀ ಮಾರನೇ ವರ್ಷ ಕಿರೀ ನಟೀಗೆ ಬೇರೆ ನಾಟಕದಲ್ಲಿ ಬಹುಮಾನ ಸಿಕ್ಕಿತಾ? ಅಂತ ಕೇಳಿದೆ, ಕೆಟ್ಟ ಕುತೂಹಲ.

ಏನು ಹೇಳಲೀ ಸಾರ್? ನಾಟಕದ ಸ್ಪರ್ಧೆಯಾದ ಮೂರೇ ತಿಂಗಳಲ್ಲಿ ಯಾವುದೋ ಆಕ್ಸಿಡೆಂಟಿನಲ್ಲಿ ಈ ಹುಡುಗಿ ತೀರಿಕೊಂಡಿತ್ತು..... ಅಂದರು.

ಹುಡುಗೀಗೆ ತನ್ನ ಸಾವು ಮೊದಲೇ ತಿಳಿದಿತ್ತೇ ಅಂತ ಆಶ್ಚರ್ಯದ ಜತೆಗೆ ಹಿರೀ ನಟೀಗೇ ಬಹುಮಾನ ಹೋಗಲಿ ಅಂತ ಯಾವ ಸರಸ್ವತಿ ಒಳಗೆ ಕೂತು ನುಡಿಸಿದಳು ಅಂತ ಈಗಲೂ ಯೋಚಿಸುತ್ತಿದ್ದೇನೆ - ಅಂತ ಗೆಳೆಯರು ಮುಗಿಸಿದರು.

ವಿದ್ಯಮಾನಗಳು

- ಕು.ಕ.

ತೀರಾ ಈಚಿನವರೆಗೂ ವಾರಕ್ಕೋ ಎರಡು ವಾರಕ್ಕೋ ಒಂದು ಸಲ ಪತ್ರಿಕೆಗಳ ಯಾವುದೋ ಒಳಪುಟದಲ್ಲಿ ಬಿಹಾರದಲ್ಲಿ ದೋಣಿ ದುರಂತದಿಂದ 35 ಜನರ ದುರ್ಮರಣ ಅಥವ ಉತ್ತರಾಂಚಲದಲ್ಲಿ ವ್ಯಾನ್ ಖಾರಿಗೆ ಬಿದ್ದು 25 ಸಾವು ಎನ್ನುವಂತಹ ಸುದ್ದಿಗಳಿರುತ್ತಿದ್ದವು. ಅಂತಹ ಸುದ್ದಿಗಳನ್ನು ಓದಿ ಅಯ್ಯೋ ಪಾಪ ಎಂದು ಉದ್ಗರಿಸಿ ಎರಡು ಮೂರು ಗಂಟೆಗಳಲ್ಲಿ ಆ ವಿಷಯವನ್ನು ಮರೆಯುತ್ತಿದ್ದೆವು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಪತ್ರಿಕೆಯ ಮೊದಲ ಪುಟದಲ್ಲಿಯೋ ಅದೇ ವಾರಕ್ಕೋ ಎರಡು ವಾರಕ್ಕೋ ಒಂದು ಸಲ ಆ ಊರಿನಲ್ಲಿ ಏಳು ಸರಣಿ ಬಾಂಬುಗಳು ಸಿಡಿದು 40 ಸಾವು, ಈ ಊರಿನಲ್ಲಿ ಹತ್ತು ಬಾಂಬುಗಳು ಸ್ಫೋಟಿಸಿ 30 ಜನರ ಮರಣ ಎನ್ನುವಂತಹ ವರದಿಗಳು. ಇಂತಹ ದಾರುಣ ದುರಂತಗಳಾದ ಐದಾರು ದಿನಗಳತನಕ ಎನ್‌ಡಿಎ ನಾಯಕರುಗಳಿಂದ ಈ ಸರ್ಕಾರದ ಮೆದು ಧೋರಣೆಗಳಿಂದ ಭಯೋತ್ಪಾದಕರಿಗೆ ಬೆಂಬಲ ಸಿಗುತ್ತಿದೆ ಎನ್ನುವ ಆರೋಪಗಳು, ಪೋಟಾ ವಾಪಸ್ ತನ್ನಿ ಎನ್ನುವಂತಹ ಸಲಹೆಗೂ, ಯೂಪಿಎ ನಾಯಕರುಗಳಿಂದ ನಿಮ್ಮ ಕಾಲದಲ್ಲಿಯೂ ಇಂತಹ ದಾಳಿಗಳಾಗಲಿಲ್ಲವೇ ಎನ್ನುವ ಮೂದಲಿಕೆ, ನಾವು ಮಾನವ ಹಕ್ಕುಗಳನ್ನು ಗೌರವಿಸುವವರು ಎನ್ನುವ ವೋಟ್ ಬ್ಯಾಂಕ್ ರಕ್ಷಿಸುವ ಪ್ರತಿವಾದಗಳು. ಮುಂದೆ ನಾಲ್ಕು ದಿನಗಳ ಶಾಂತಿ. ಇನ್ನೊಂದು ಸರಣಿ ಸ್ಫೋಟ ಮತ್ತದೇ ಆಕ್ಷನ್ ರೀಪ್ಲೆ. ಬೇರೆ ದೇಶಗಳೂ ಭಯೋತ್ಪಾದಕರ ದಾಳಿಗೆ ತುತ್ತಾಗಿವೆ. ಆದರೆ ಆ ದೇಶಗಳಿಗೂ ನಮಗೂ ಒಂದು ವ್ಯತ್ಯಾಸ. ಅಮೆರಿಕಾದವರಿಗೆ ಒಂಬತ್ತು ಹನ್ನೊಂದರಂತೆ ಇಂಗ್ಲೆಂಡ್ ಫ್ರಾನ್ಸ್ ಅಂತಹ ದೇಶಗಳಿಗೆಲ್ಲಾ ಒಂದು, ಒಂದೇ ಒಂದು ಕರಾಳ ದಿನ. ಆದರೆ ಮಲ್ಟಿಕಲರ್ಡ್ ಭಾರತದ ಕ್ಯಾಲೆಂಡರ್ ತುಂಬಾ ಕರಾಳ ದಿನಗಳೇ!

★★★

ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಶಿವರಾಜ್ ಪಾಟೀಲ್ ಸಜ್ಜನ. ಯಾವುದೇ ವಿಷಯದ ಮೇಲೆ ಅಥವಾ ಯಾವುದೇ ವಿಷಯವಿಲ್ಲದೆ 2-3 ಗಂಟೆಗಳು ನಿರರ್ಗಳವಾಗಿ ಮಾತನಾಡ ಬಲ್ಲ ವಾಗ್ಮಿ ಉಡುಪು ತೊಡಪುಗಳಲ್ಲಿ ಆತ ಶಿಸ್ತುಗಾರ ಪುಟ್ಟಸ್ವಾಮಿ. ಎಲ್ಲರಿಗೂ ಗೊತ್ತಿರುವಂತೆ ಈ ಉನ್ನತ ಸ್ಥಾನಕ್ಕೆ ತಲಪಲು. ದೇಶದ ನಂಬರ್ ಟೂ ಎಂದು ಪರಿಗಣಿಸಲಾಗುವ ಗೃಹಮಂತ್ರಿಗಳ ಹುದ್ದೆಗೆ ತಲಪಲು ಅವರ ಮುಖ್ಯ ಕ್ವಾಲಿಫಿಕೇಷನ್ ಪಕ್ಷದ ಸೂಪರ್ ನಾಯಕಿಗೆ ಅವರ ನಿಷ್ಠೆ ಮತ್ತು ಆ ಮಹಾನಾಯಕಿಗೆ ಈ ನಿಷ್ಠೆಯ ಬಗ್ಗೆ ಇರುವ ಸುಪ್ರಸನ್ನತೆ. ಈ ಹುದ್ದೆಯಲ್ಲಿ ಅವರ ಸಾಧನೆ ಮಾತ್ರ ಶೂನ್ಯ. ವಿರೋಧ ಪಕ್ಷಗಳಷ್ಟೇ ಅಲ್ಲ ಮಿತ್ರ ಪಕ್ಷಗಳಲ್ಲಿ ಅವರ ಬಗ್ಗೆ ಕಟು ಟೀಕೆ. ಪಕ್ಷದ ಅಧ್ಯಕ್ಷಿಣಿಗೆ ಎರಡು ಮೂರು ವರ್ಷಗಳ ಹಿಂದೆಯೇ ಇದರ ಅರಿವು. ನಾಯಕಿಯಿಂದ if he is useless kick him upstairs ಎನ್ನುವ ಅನುಭವಿಗಳ ಸಲಹೆಯಂತೆ ಶಿವರಾಜ್ ಪಾಟೀಲ್ ಅವರನ್ನು

ರಾಷ್ಟ್ರಪತಿಗಳನ್ನಾಗಿ ಮಾಡಲು ಪ್ರಯತ್ನ ಕಮ್ಯೂನಿಷ್ಟರಿಂದ ಇದಕ್ಕೆ ಅಡ್ಡಗಾಲು. ಮೊನ್ನೆ ಮೊನ್ನೆ ದೆಹಲಿಯಲ್ಲಿ ಐದು ಬ್ಲಾಸ್ಟ್‌ಗಳಾದ ದಿನ ಪಾಪ ಶಿವರಾಜರ worst ದಿನ. ಪಾಪ ಅವರು ದಿರುಸಿನ ವಿಚಾರದಲ್ಲಿ Dress for the occassion ಎನ್ನುವ ಪಾಠ ಕಲಿತವರು. ಇಂತಹ etiquette ಶಿಕ್ಷಣ ಕೊಟ್ಟವರು ಕೆಲವು ಸಂದರ್ಭಗಳಿಗೆ ಯಾವುದೇ ಸೂಕ್ತ ಉಡುಪು ಇಲ್ಲ ಎಂದು ಹೇಳುವುದನ್ನು ಮರೆತಿರಬೇಕು. ದಹಲಿಯ ಆ ದಾರುಣ ದಿನದಂದು ಗೃಹಮಂತ್ರಿಗಳು ಮೂರು ಬಾರಿ ತಮ್ಮ ಡಿಸೈನರ್ ಸೂಟುಗಳನ್ನು ಬದಲಾಯಿಸಿದ್ದರಂತೆ. ಮಾಧ್ಯಮದವರಿಗೆ ತನ್ನ ಊರು ಸುಟ್ಟು ಭಸ್ಮವಾಗುತ್ತಿದ್ದಾಗ ಪಿಟೀಲು ನುಡಿಸುತ್ತಿದ್ದ ನೀರೋ ಕತೆ ಜ್ಞಾಪಕಕ್ಕೆ ಬಂದದ್ದು ಸಹಜ.

★★★

ಕಳೆದ ವರ್ಷದ ಈ ದಿನಗಳಲ್ಲಿ ಅಪರಂಜಿ ತನ್ನ ಬೆಳ್ಳಿ ಹಬ್ಬದ ಆಚರಣೆಯನ್ನು ಪ್ರಾರಂಭಿಸಿದ ಅಕ್ಟೋಬರ್ 2ರ ಸುಮಾರಿನಲ್ಲಿ ಕರ್ನಾಟಕ ಸುದ್ದಿಯಲ್ಲಿತ್ತು. ಆಗ –ಹೌದು ಕೊಟ್ಟ ಮಾತು ಉಳಿಸಿಕೊಳ್ಳುವುದಿಲ್ಲ ಏನು ಮಾಡ್ತೀ ಮಾಡ್ಕೋ ಹೋಗು–ಎನ್ನುವ ಪಾಳೇಗಾರಿಕೆಯ ಮಾತುಗಳು. ರಾಜ್ಯಪಾಲರಿಗೆ ರಾಷ್ಟ್ರಪತಿಗಳಿಗೆ ಕೊಟ್ಟ ಪ್ರಮಾಣಪತ್ರಗಳಿಗೆ ಕವಡೆ ಬೆಲೆಯನ್ನೂ ಕೊಡದ ನಮ್ಮವರೇ ಆದ ಮಾಜಿ ಪ್ರಮಂ ಮಾಜಿ ಮುಮಂ ವರ್ತನೆಯನ್ನು ನೋಡುತ್ತಾ ಇಡಿ ಕರ್ನಾಟಕ ನಾಚಿ ನಿಂತಿತ್ತು. ಈಗ ಒಂದು ವರ್ಷ ಉರುಳಿದೆ. ಕಾವೇರಿಯಷ್ಟೇ ಅಲ್ಲ ಚಿಕ್ಕಪುಟ್ಟ ನದಿ ಹಳ್ಳಕೊಳ್ಳಗಳಲೆಲ್ಲಾ ಸಾಕಷ್ಟು ನೀರು ಹರಿದಿದೆ. ಅಪರಂಜಿ ತನ್ನ ಬೆಳ್ಳಿ ಹಬ್ಬದ ಆಚರಣೆಗೆ ಮುಕ್ತಾಯ ಹಾಡುತ್ತಿದೆ. ಈಗ ಕರ್ನಾಟಕ ಮತ್ತೊಮ್ಮೆ ಭಾರತವಾಸಿಗಳ ಮುಂದೆ ಅಪರಾಧಿ ಸ್ಥಾನದಲ್ಲಿ ನಿಂತಿದೆ. ಹೋದ ವರ್ಷ ಎಲ್ಲರ ಮುಂದೆ ಅತ್ತು ಸಹಾನುಭೂತಿ ಗಳಿಸುತ್ತಿದ್ದ ಬಿಎಸ್‌ವೈ ಈಗ ಖಳನಾಯಕನ ಪಾತ್ರದಲ್ಲಿ. ತಮ್ಮದಲ್ಲದ ಇನ್ನೊಂದು ಧರ್ಮದವರ ಪ್ರಾರ್ಥನಾ ಸ್ಥಳವನ್ನು ನಾಶಮಾಡುವುದು ಹೀನಕಾರ್ಯ. ಇಂತಹ ಹೀನಕಾರ್ಯ ಮಾಡಿದವನು ನಾನೇ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವವರನ್ನು ನಾಲ್ಕು ಗೋಡೆಗಳ ನಡುವೆ ಜೈಲಿನಲ್ಲಿ ಅಥವಾ ಹುಚ್ಚಾಸ್ಪತ್ರೆಯ ವಾರ್ಡಿನಲ್ಲಿ ಇಡಬೇಕು. ನಮ್ಮ ಮುಮಂ ಮತ್ತು ಗೃಮಂಗಳಿಗೆ ಸಂಘ ಪರಿವಾರದ fringe minority ನಿಯಂತ್ರಿಸಲು ಆಗುತ್ತಿಲ್ಲವೇ.

ಒಂದೊಂದು ಪತ್ರಿಕೆಗೂ ಒಂದೊಂದು ಟೀವಿ ಚಾನಲ್ಲಿಗೂ ತನ್ನದೇ ಆದ ಅಜೆಂಡಾ ಇರುವ ಈ ದಿನಗಳಲ್ಲಿ ಈಗ ನಮ್ಮ ಕರ್ನಾಟಕದಲ್ಲಿ ನಿಜವಾಗಿಯೂ ಏನಾಗುತ್ತಿದೆ ಎನ್ನುವುದನ್ನು ಇದನ್ನು ಅರ್ಥಮಾಡಿಕೊಳ್ಳುವುದು ಸುಲಭವಲ್ಲ. ತಮ್ಮ ಕುರ್ಚಿಯನ್ನು ಭದ್ರಮಾಡಿಕೊಳ್ಳುವ ಸಂಭ್ರಮದಲ್ಲಿ ಬಿಎಸ್‌ವೈ ಆಡಳಿತವನ್ನು ಕಟ್ಟಾ ಬಲಪಂಥೀಯರಿಗೆ ಒಪ್ಪಿಸಿದ್ದಾರೆಯೇ? ಅಥವಾ ಈ ಗಲಭೆ ನೋಟೀಸ್ ಎಲ್ಲಾ ಕಾಂಗ್ರೆಸ್ಸಿಗರ ಕುತಂತ್ರವೇ? ಅಥವಾ ಮುಂದೆ ಬರುವ ಚುನಾವಣೆಯಲ್ಲಿ ಜೆಡಿಎಸ್ ಒಲಿಸಿಕೊಳ್ಳುವ ಹುನ್ನಾರವೇ?

ತುಂತುರು

- ದೇವರು ಸರ್ವಾಂತರ್ಯಾಮಿ ಎಂದುಕೊಂಡಿದ್ದೆ. ಅಲ್ಲ, ಮೊಬೈಲ್ ಸರ್ವಾಂತರ್ಯಾಮಿ.
- Don't worry about the world coming to an end today. It's already tomorrow in Australia.
- ಕೋರ್ಟಿನಲ್ಲಿ ಯಾವುದು ಗೆಲ್ಲುವುದೋ ಅದೇ ನ್ಯಾಯ.
- ವಿದ್ಯುತ್ ಚಾಲಿತ ಸ್ಕೂಟರ್‌ನ ಹೆಚ್ಚುಗಾರಿಕೆ: I don't smoke; I don't drink; I don't shout.
- ಮರೆವು ಜಾಸ್ತಿ ಎಂದು ನೆನಪಿನಲ್ಲಿ ಹೇಗೆ ಇಟ್ಟುಕೊಳ್ಳುವುದು?
- This government is mine ಎಂದು ಗಣಿ ದೊರೆಗಳು ಹೇಳಿಕೊಂಡು ಓಡಾಡುತ್ತಿದ್ದಾರಂತೆ.
- Calm ಸೂತ್ರ ಓದಿದ್ದೀರಾ?
- ನಿಮ್ಮ ಉಡುಪನ್ನಷ್ಟೇ ಹೊಗಳುವ ಮಂದಿಯನ್ನು ಗಂಭೀರವಾಗಿ ಪರಿಗಣಿಸದಿರಿ. ಏಕೆಂದರೆ ಅವರು ನಿಮ್ಮ ಅಂತರಂಗವನ್ನು ತಿಳಿದಿರುವುದಿಲ್ಲ.
- ದಾದಾಗಿರಿ ಎಂದರೆ ಗೊತ್ತು. ದೀದೀಗಿರಿ ಎಂದರೆ? ಅದೇ ಮಮತಾ ಬ್ಯಾನರ್ಜಿ ಚಳವಳಿ.
- Life has no plot. Why must films?
- ಬೆಂಗಳೂರಿನ ನೈಟ್ ಲೈಫ್ ಬಗ್ಗೆ ರಾಮ ಗೋಪಾಲ ವರ್ಮ ತಯಾರಿಸಲಿರುವ ಚಿತ್ರದ ಟೈಟಲ್: ಡಾನ್ಸ್ ಮನಾ ಹೈ.
- ಕ್ಲಿನಿಕ್‌ನಲ್ಲಿ ಕೇಳಿ ಬಂದದ್ದು: ನಿಮಗೆ ಮಾತನಾಡೋದಿಕ್ಕೆ ಆಗ್ತಾ ಇಲ್ಲ ಎಂದು ಗೊತ್ತಾಯಿತು. ಎಂದಿನಿಂದ ಈ ತೊಂದರೆ?
- ಮತ್ತೆ ಬರುತಾವ ಕಾಲ; ಮತ್ತೆ ಬರುವನು ಚಂದಿರ..... ಆದರೆ ಒಳ್ಳೆ ಸೀರಿಯಲ್‌ಗಳು ಎಂದು ಬರುತಾವ?
- Religion is for people who are scared to go to hell. Spirituality is for people who have already been there.
- ಲೋಕಾಯುಕ್ತರ ಬಲೆಗೆ ಬಿದ್ದ ಒಬ್ಬ ಭ್ರಷ್ಟ ಅಧಿಕಾರಿಯನ್ನು ಮಂತ್ರಿ ತರಾಟೆಗೆ ತೆಗೆದುಕೊಂಡಿದ್ದು ಹೀಗೆ: ನಾಚಿಕೆ ಆಗಲ್ವೇ ನಿನಗೆ ನಿನ್ನ ಗಳಿಕೆಗೆ ಮೀರಿದ ಆಸ್ತಿಯನ್ನು ಹೀಗೆ ಪ್ರದರ್ಶಿಸಿದ್ದೀಯಲ್ಲ. ಒಬ್ಬ ಆರ್ಡಿನರಿ ಸಹಾಯಕ ಕಾರ್ಯಪಾಲಕ ಇಂಜನೀಯರ್ ಆಗಿ ನನ್ನ ಅರಮನೆಗಿಂತ ದೊಡ್ಡ ಮನೆ ಕಟ್ಟಿಕೊಂಡಿದ್ದೀಯ...

- ದಂಸಲ

ಕಾಫೀ ಹೌಸ್

ಇಂದು ಅವನಿಗಾಗಿದ್ದು ನಾಳೆ ನನಗಾಗಬಹುದು ಅನ್ನೋ ಭಾವನೆ ಬಹಳ ಚಿಕ್ಕಂದಿನಿಂದಲೇ ಅನೇಕರಲ್ಲಿ ಬೇರೂರಿರುತ್ತೆ. ಇವತ್ತು ಮೇಷ್ಟ್ರು ಅವನನ್ನು ಬೆಂಚಿನ ಮೇಲೆ ನಿಲ್ಲಿಸಿದರು ನಾಳೆ ನನ್ನನ್ನು ನಿಲ್ಲಿಸಬಹುದು ಅನ್ನೋ ಹೆದರಿಕೆ ಅವನಲ್ಲಿ ಮೂಡಿರುತ್ತೆ. ಹೀಗಾಗಿ ಸುಮ್ಮ ಸುಮ್ಮನೆ ತಪ್ಪು ಮಾಡಿ, ತಪ್ಪು ಮಾತಾಡಿ ಸಿಕ್ಕಿಹಾಕಿಕೊಳ್ಳುತ್ತಾನೆ. ಹಾಗೆ ನೋಡಿದರೆ ಅವನಿಗೆ ಸಿಕ್ಕಿಹಾಕಿಕೊಳ್ಳುವವರೆಗೂ ನೆಮ್ಮದಿಯಿರುವುದಿಲ್ಲ. ಮುಂದೆ ಕೆಲಸಕ್ಕೆ ಸೇರಿದ ಮೇಲೂ ಒಂದು ಚಿಕ್ಕ ತಪ್ಪಿಗೆ ಸಹೋದ್ಯೋಗಿಯನ್ನು ಬಾಸ್ ಬೆಂಡೆತ್ತುತ್ತಿರುವುದನ್ನು ಗಮನಿಸಿರುವ ಅವನು ನಾಳೆ ಅಪ್ಪಿ ತಪ್ಪಿ ನನ್ನ ತಪ್ಪು ಬಾಸ್‌ಗೆ ಗೊತ್ತಾಗಿಬಿಟ್ಟರೆ ನನ್ನನ್ನು ಅವರು ಸುಮ್ಮನೆ ಬಿಡುವುದಿಲ್ಲ ಅಂತ ಹೆದರಿ ಹೆದರಿ ಸಾಯುತ್ತಿರುತ್ತಾನೆ. ಹಾಗೆ ಸಾಯುತ್ತಿರುವವರಿಗೆ ಏನೂ ಕಮ್ಮಿ ಇಲ್ಲ ಅಂತ ಯೋಚಿಸಿದಾಗ ತಟ್ಟನೆ ಹೊಳೆದೇ ಬಿಟ್ಟಿತು. ನಮ್ಮ ಲೋಕಾಯುಕ್ತರು ಅನೇಕ ಹಿರಿಯ ಅಧಿಕಾರಿಗಳನ್ನು ಹಿಡಿದಿದ್ದಾರೆ (ಅವರಿಗೆ ಏನೂ ಶಿಕ್ಷೆ ಆಗುವುದಿಲ್ಲ ಅನ್ನೋದು ಬೇರೆ ಮಾತು) ಆದರೆ ಹೀಗೆ ರೈಡ್ ಮಾಡಿಸಿಕೊಂಡಿರುವ ಅಧಿಕಾರಿಗಳದೇ ಒಂದು ರೀತಿಯ ಮನೋಭಾವ ಆದರೆ ಅವರಂತೆಯೇ ತಿಂದೂ ತಪ್ಪಿಸಿಕೊಂಡು ಓಡಾಡುತ್ತಿರುವವರ ಮನೋಭಾವ ಹೇಗಿರಬಹುದು ಅಂತ ಯೋಚಿಸುವಾಗ ಕೆಲವರು ಅದು ನನ್ನವರೆಗೂ ಬರಲಿ ನೋಡೋಣ ಅಂತಲೂ, ಇನ್ನು ಕೆಲವರು ಸಾರ್ ಒಂದು ವೇಳೆ ರೈಡ್ ಆದರೆ ಏನು ಮಾಡಲಿ ಅಂತ ಮೇಲಿನವರಿಗೆ ಕಾಣಿಕೆ ಕೊಟ್ಟು ಸಲಹೆ ಕೇಳುತ್ತಲೂ, ಇಟ್ಟಿರುವುದನ್ನು ಎಲ್ಲೆಲ್ಲಿ ಬಚ್ಚಿಟ್ಟರೆ ಸೇಫ್ ಅಂತ ಓಡಾಡುತ್ತಲೂ, ಸಿಕ್ಕ ಸಿಕ್ಕ ದೇವರುಗಳಿಗೆ ಹರಕೆ ಹೊತ್ತು ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸುತ್ತಲೂ, ಇರಬಹುದೇನೋ.

- ಬೇಲೂರು ರಾಮಮೂರ್ತಿ

ಕಳ್ಳನ ಮನಸ್ಸು ಹುಳ್ಳುಹುಳ್ಳಗೆ ಅಂತ ಒಂದು ಗಾದೆ ಇದೆಯಂತೆ. ಮನಸ್ಸು ಹುಳ್ಳುಹುಳ್ಳಗೆ ಮಾಡಿಕೊಳ್ಳದೇ ಇರುವುದಕ್ಕೆ ಒಂದು ಒಳ್ಳೇ ಉಪಾಯ ಇದೆ-ಮನಸ್ಸು ಹುಳಿಯಾಗುವಂತಹ ಕೆಲಸದಿಂದ ದೂರ ಇರುವುದು. ಒಂದು ಅನುಭವದ ಪ್ರಸಂಗ ನಿಮಗೆ ಹೇಳಬೇಕು. ನಾನು ಕೆಲಸಕ್ಕೆ ಸೇರಿದ ಹೊಸದರಲ್ಲಿ ನನಗೆ ತರಬೇತಿ ನೀಡಿದ ಹಿರಿಯರೊಬ್ಬರು ಒಂದು ಮಾತು ಹೇಳಿದ್ದರು. ನಿಮ್ಮ ಕೆಲಸಕ್ಕೆ ಸಂಸ್ಥೆ ಸಂಬಳ ಅಂತ ಕೊಡುತ್ತೆ. ನಿಮ್ಮ ಮೇಲೆ ಸಂಪೂರ್ಣ ನಂಬಿಕೆ ಇಟ್ಟು ಅದೆಷ್ಟೋ ಸಾವಿರ ಅಭ್ಯರ್ಥಿಗಳ ನಡುವೆ ನಿಮ್ಮನ್ನ ಆಯ್ಕೆ ಮಾಡಿಕೊಂಡಿದೆ. ಅದರ ನಂಬಿಕೆ ನೀವು ಉಳಿಸಿಕೊಂಡು ಬೆಳೆಸಬೇಕು. ಯಾವುದೇ ಕಾರಣಕ್ಕೂ ಆಮಿಷಗಳಿಗೆ ಒಳಗಾಗಬೇಡಿ, ಕಳ್ಳತನಕ್ಕೆ ಹೋಗಬೇಡಿ-ಒಂದು ಪೆನ್ಸಿಲ್ಲೂ ನಿಮ್ಮದಲ್ಲ ಅಂದರೆ ಅದನ್ನ ಜೇಬಿನಲ್ಲಿಡಬೇಡಿ, ಜೇಬಿನಲ್ಲಿಟ್ಟರೆ ಮನೆಗೆ ಒಯ್ಯಬೇಕು ಅನಿಸುತ್ತೆ.... ಈ ರೀತಿ.

ಅಂದಿನಿಂದ ಇಂದಿನವರೆಗೂ ಹಾಗೇ ನಡೆದು ಬಂದಿದೀನಿ. ಸಣ್ಣಪುಟ್ಟ ಹಾಗೂ ದೊಡ್ಡ ದೊಡ್ಡ ಹಗರಣಗಳಲ್ಲಿ ಸಿಕ್ಕಿಕೊಳ್ಳುವಂಥಹ ಕಾರ್ಯ ಎಸಗಿರುವ ಪುಣ್ಯಾತ್ಮರು ನನಗೆ ಗೊತ್ತು. ಪ್ರತಿಯೊಂದರಲ್ಲೂ ಅವರಿಗೆ ಭಯ ಏನಾಗುತ್ತೋ ಅನ್ನುವ ಭೀತಿ ಕಾಡುತ್ತಾ ಇರುತ್ತೆ. ಲಂಚ

ಹೊಡೆಯುವವರಲ್ಲಿ ಈ ಭಯದಿಂದ ಶಾಶ್ವತವಾಗಿ ಅವರು ಮಾನಸಿಕ ನೆಮ್ಮದಿ ಕಳೆದುಕೊಳ್ಳೋದು ನೋಡಿದೀನಿ.ತಮ್ಮನ್ನೇ ಮರೆಯಲು ಹೆಂಡಕ್ಕೆ ಶರಣಾಗುವುದೂ ಇದೇ ಕಾರಣಕ್ಕೆ. ಒಂದೇ ಒಂದು ಪುಟ್ಟ ಕೆಲಸದಿಂದ ಅವರು ನೆಮ್ಮದಿ ಕಂಡುಕೊಳ್ಳಬಹುದು - ಅದೆಂದರೆ ನನ್ನದಲ್ಲದಕ್ಕೆ ಬಾಯ್ಬಿಡೆ ಅಂತ ಹಠ ಹಿಡಿಯೋದು! ಆದರೆ ನಮ್ಮ ವ್ಯವಸ್ಥೆಯಲ್ಲಿ ಎಷ್ಟು ಜನರಿಗೆ ಈ ರೀತಿ ಹಠ ಹಿಡಿಯಲು ಮಾನಸಿಕವಾಗಿ ಸಾಧ್ಯ?

ಒಂದು ಚಿಕ್ಕ ಪ್ರಯೋಗ ಮಾಡಬಹುದು ಅನಿಸುತ್ತೆ-ಮೊದಮೊದಲು ಎಲ್ಲಾ ಸಲಹೆಗಳೂ ತಮಾಷೆಯವು ಅಂತ ಅನಿಸಿದರೂ ಪ್ರಯೋಗಿಸಿದಾಗ ನಿರೀಕ್ಷಿತ ಫಲವನ್ನು ಅವು ಕೊಟ್ಟವೆ. ಸಣ್ಣ ಪ್ರಯೋಗ ಇದು- ಸರ್ಕಾರೀ ಕೆಲಸಕ್ಕೆ ಸೇರಿದ ಯಾವುದೇ ವ್ಯಕ್ತಿಯನ್ನ ಮೊದಲ ಮೂರು ತಿಂಗಳಿನಲ್ಲಿ ಲಂಚದ ಆರೋಪದ ಮೇಲೆ-ಬರೀ ಆರೋಪ- ಆರು ತಿಂಗಳು ಸೇವೆಯಿಂದ ಕಿತ್ತು ಹಾಕಿ, ನೌಕರಿ ಇಲ್ಲದೇ ಇರುವ ಮತ್ತು ಸಾಮಾಜಿಕ ಬಹಿಷ್ಕಾರಗಳ ಅರಿವು ಅವನಿಗೆ ಆಗುವಂತೆ ಮಾಡಿ. ಸೇವೆಯಲ್ಲಿ ಇರುವ ತನಕ ಲಂಚ ಹೊಡೆಯಲು ಮನಸ್ಸು ಮಾಡ್ತಾರೆಯೇ ಅಂತ ದೀವಟಿಗೆ ಹಿಡಕೊಂಡು ಹುಡುಕಬೇಕು- ಅಂತ ಕಾಲ ಬಂದೇ ಬರುತ್ತೆ.

- ಎಚ್.ಗೋಪಾಲಕೃಷ್ಣ

'ದುಡ್ಡು ತೆಗೆದುಕೊಂಡು ನಿಯತ್ತಿನಿಂದ ನಾವು ಕೆಲಸ ಮಾಡಿಕೊಂಡು ಹಾಯಾಗಿದ್ದೆವು. ಈಗ ಅದಕ್ಕೂ ಕೊಕ್ಕೆ ಹಾಕೋದಿಕ್ಕೆ ಹೊರಟಿದ್ದಾರೆ ಈ ಲೋಕಾಯುಕ್ತರು' ಎಂದು ಸತ್ಯಮೇವಜಯತೆ ಬಾರ್‌ನಲ್ಲಿ ಒಬ್ಬ ಜೂನಿಯರ್ ಭ್ರಷ್ಟ ಅಧಿಕಾರಿ ಸೀನಿಯರ್ ಭ್ರ.ಅ. ಮುಂದೆ ತನ್ನ ಅಳಲನ್ನು ಬಿಯರ್ ಜತೆ ಹೊಯ್ದುಕೊಳ್ಳುತ್ತಿದ್ದ. 'ಕೆಲಸ ಮಾಡೋದಿಕ್ಕೆ ಈಗೊಂದು ತರಹ ಟೆನ್ಷನ್ ಆಗೋಗಿದೆ. ಆಫೀಸಿನಲ್ಲಿ ದುಡ್ಡು ತೆಗೆದುಕೊಳ್ಳೋದಿಕ್ಕೆ ಹೋದರೆ ರೆಡ್ ಹ್ಯಾಂಡೆಡ್ ಆಗಿ ಸಿಕ್ಕೋತೀನೇನೋ ಎಂಬ ಭಯ. ಅರ್ಲಿ ಮಾರ್ನಿಂಗ್ ಮನೇ ಬಾಗಿಲು ತಟ್ಟಿದರೆ ರೈಡ್ ಪಾರ್ಟಿ ಬಂದಿರಬಹುದೆ? ಎಂಬ ಅಳುಕು. ಏನು ಮಾಡೋದು?' ಎಂದು ಸೀ.ಭ್ರ.ಅ. ರಮ್ ಜತೇಲಿ ತಮ್ಮ ದುಮ್ಮಾನನ ಹೇಳಿಕೊಂಡರು. 'ಅಲ್ಲಾ ಸಾರ್, ಹೀಗೇ ಪರಿಸ್ಥಿತಿ ಮುಂದುವರೆದು ನಾವು ಯಾರೂ ದುಡ್ಡು ಮುಟ್ಟದೇನೇ ಹೋದರೆ ಜನಗಳ ಕೆಲಸ ಹೇಗೆ ಆಗುತ್ತೆ ಅನ್ನೋದರ ಬಗ್ಗೆ ಸರ್ಕಾರ ಆಲೋಚಿಸಿದಂತೆ ಕಾಣೋದಿಲ್ಲ' ಎಂದು ಜೂ.ಭ್ರ.ಅ. ಯೋಚಿಸಿದರು. 'ಜನಗಳ ಕೆಲಸ ಇರಲೀರಿ ನಮ್ಮ ಕೆಲಸಾನೂ ನಿಲ್ಲೋದಿಲ್ವೆ? ಫಾರ್ಮ್‌ಹೌಸ್, ಕಮರ್ಷಿಯಲ್ ಕಾಂಪ್ಲೆಕ್ಸ್, ದ್ರಾಕ್ಷಿ ತೋಟ ಎಲ್ಲಾ ಇನ್‌ಕಂಪ್ಲೀಟ್ ಆದರೆ ಅವುಗಳ ಗತಿ?' ಸೀನಿಯರ್ ತಮ್ಮ ಭಯವನ್ನು ಹೊರಗೆಡವಿದರು. 'ವೆಂಕಟಾಚಲಯ್ಯ ಹೋದ ಮೇಲೆ ಏನೂ ಪ್ರಾಬ್ಲಂ ಇರೋದಿಲ್ಲ ನಂ ಪಾಡಿಗೆ ನಾವು ಇರಬಹುದು ಅಂತ ಅಂದುಕೊಂಡು ಇದ್ದೆವು. ಆದರೆ ಈ ಸಂತೋಷಪ್ಪ ನಮ್ಮ ಸಂತೋಷಾನೆಲ್ಲ ಕಿತ್ತುಕೊಳ್ತಾ ಅವ್ನೆ. ಮಾಂಸದ ಅಂಗಡಿ ಮುಂದೆ ಕುರಿ ಕಟ್ಟಿರ್ತಾರೆ ನೋಡಿ ಹಾಗಾಗಿದೆ ನಮ್ಮ ಸ್ಥಿತಿ. ಯಾವತ್ತು ಸಿಕ್ಕೋತೀವೋ ಏನೋ ಎಂದು ಇಬ್ಬರೂ ಪರದಾಡಿಕೊಂಡು ಅದನ್ನು ಮರೆಯಲು ಬೇರರ್ ಎಂದು ಕೂಗಿದರು.

- ಆನಂದ

ಕಳ್ಳನ್ ಮನಸು ಹುಳ್ಳುಳ್ಗೇಂತ ಗಾದೆಯಿದ್ರೂ ಕೂಡಾವೇ ನಮ್ಜನಕ್ಕದೇನೂ ಅಷ್ಟೈ ಆಗಲ್ಲ ಬಿಡಿ. ನಮ್ಜನರ್ಗನ್ನಲ್ಲಿ (ಜನಾಂದ್ರೆ ಜನವಲ್ಲ, ಆ ಕುರಿಗಳನ್ನಾಳೋ ಕುರುಬ್ರು) ಅವರ್ಮಾಡ್ತಿರೋದು ತಪ್ಪೂಂತ ಬಂದ್ರಲ್ವೇ ಮನಸ್ಸುಳ್ಳಾಗೋದು! ನಮ್ಮುಖಿಂಡ್ರ ಮನಸ್ಸುಗ್ಳೇನಿದ್ರೂ ಖಾರ್ಬ್ಯಾರ್ವಾಗ್ಬೋದಷ್ಟೇಯ, ಹುಳ್ಳುಳ್ಳಾಗೋ ಬಾಬ್ತೇ ಇಲ್ಲ ಅವ್ರಲ್ಲಿ! ಎಲ್ಲೋ ಅಲ್ಲೊಬ್ರು, ಇಲ್ಲೊಬ್ರು ಬಿಟ್ರೆ ಇಡೀ ವ್ಯವಸ್ಥೆಯೇ ಅವ್ಯವಸ್ಥೆ ಆಗಿರೋವಾಗ ಹೆದರ್ಕೊಂಡೋವ್ನೇ ಹುಚ್ಚ! ಸಿಕ್ಕಿದ್ಜನಕ್ಕೆ ಶಿಕ್ಷೆ ಆಗ್ಬೇಕಾದ್ರೂ ಅವರೆದುರ್ಪಾರ್ಟಿಯವ್ರು ಸೂಕ್ತವಾದ್ಕೈಗಳ್ನ ಬೆಚ್ಚಗ್ಮಾಡಿದ್ರೆ ಮಾತ್ರ ಸಾಧ್ಯವಾದ್ರಿಂದ್ಲೂ, ಬೆಚ್ಗಾಗೋ ಕೈಗ್ಳಿರೋವರ್ಗೂ ತಾನೂ ಒಂದ್ಕೈ ನೋಡೇಬಿಡ್ಬಹುದೂಂತ ಕಳ್ಳನ್ಗೂ ತಿಳ್ದಿರೋವರ್ಗೂನೂ ಈ ಹುಳಿ ಬಾಬತ್ತೇನಿದ್ರೂ ಹೆಂಡ, ದ್ರಾಕ್ಷಿ,ಹುಣಿಸೆ ಇಂಥಾದ್ರಲ್ಲೇ ಇರತ್ಯೇ ವಿನಹ ಕಳ್ಳನ್ಮನಸ್ನಲ್ಲಿ ತಲ್ಲ.

ಅಧಿಕಾರಿಗಳ್ಬಾಬ್ತು, ಮಂತ್ರಿಗಳ್ಬಾಬ್ತು ಹಾಗಿರ್ಲಿ, ನಮ್ಕೋರ್ಟುಗ್ಳಲ್ಲಾಗೋ ನಿಧಾನದ್ರೋಷ್ಟಿಂದ ಇತರೇ ಅಪ್ರಾಧಗ್ಳೂ ಹೆಚ್ತಿವೆ. ಇವತ್ಕೊಲೆ ಮಾಡ್ದವ್ನ್ಗೆ ಸಾಯೋಕಾಲಕ್ಕೇಣ್ ಶಿಕ್ಷೆಯಾಗತ್ತೆ, ಅಲ್ಲೀವರ್ಗೂ ಬೇಲ್ಮೇಲಾಚೆ ಇರ್ಬೋದೂಂದ್ರೆ ಕೊಲೆಗಾರನ್ಗೆ ಭಯ್ವೇಯಿರಲ್ಲ. ಕಳ್ರುಕಾಕ್ರುಗಳೂ ಆದೇ ರೀತಿ ನಿರ್ಭಯವಾಗಿರೋಕ್ಕೆ ಕಾನೂನು ಅಡ್ಜರ್ನ್‌ಮೆಂಟ್ಜಾಲ್ದಲ್ ಸಿಕ್ಹಾಕ್ಕೊಳ್ಳೋದೇ ಕಾರ್ಣ. ಯಾರಾದ್ರೂ ತಿಳ್ದವ್ರು, ತಾಕತ್ತಿರೋವ್ರು ಕೊಂಚ ಈ ಕಾನೂನಿನ್ನಿಡ್ತಾನ ಬಿಗಿ ಮಾಡ್ತೀರಾ, ಪ್ಲೀಸ್.......

- ಎನ್. ರಾಮನಾಥ್

ಆಸ್ಪತ್ರೆಯಲ್ಲಿ

- ಓಂಪ್ರಕಾಶ್

ಮೊನ್ನೆ ಆಸ್ಪತ್ರೆಯಲ್ಲಿ ಕಾರ್ ನಿಲ್ಲಿಸಿ ವಾರ್ಡ್‌ಗೆ ನಡೆದೆ. ನಾನು ಸಾಧಾರಣವಾಗಿ ಬಿಳಿಯ ಕೋಟು ಧರಿಸುವುದಿಲ್ಲ. White coat ನೋಡಿದ ತಕ್ಷಣ BP ಹೆಚ್ಚಾಗುತ್ತೆ (ರೋಗಿಗಳಿಗೆ) ಅಂತ ಹಲವರು ತಜ್ಞರು ಹೇಳಿದ್ದಾರೆ. ದ್ವಾರಪಾಲಕ ನನ್ನ ಮುನ್ನಡೆಯನ್ನು ತಡೆದ. Pass ಎಲ್ಲಿ ಅಂದ. ನಾನು ಯಾವ ಪಾಸು ಅಂತ ಹುಬ್ಬೇರಿಸಿದೆ. ಆತನಿಗೆ ರೇಗಿತು. ಏನ್ ಸಾರ್, ಇಷ್ಟು ವಯಸ್ಸಾಗಿ ಹುಡುಗಾಟ ಮಾಡ್ತೀರಾ. Pass ಇಲ್ಲದೆ ನುಗ್ತಾ ಇದೀರ ಅಂದ. ನನ್ನ ದೀನ ಮುಖ ನೋಡಿ ಅವನಿಗೂ ಸ್ವಲ್ಪ ಕರುಣಾಸಾಗರ ಉಕ್ಕಿತು. ಹೋಗ್ಲಿ ಯಾರು ನಿಮ್ಮ ಪೇಷೆಂಟು, ಯಾವ ವಾರ್ಡ್‌ನಲ್ಲಿದಾರೆ ಅಂದ. ನಾನು ಮುಗ್ಧತೆಯಿಂದ ಎಲ್ಲ ಮೆಡಿಕಲ್ ಕೇಸುಗಳನ್ನೂ ನೋಡಬೇಕಪ್ಪ ಅಂದೆ. ಅವನ ಕರುಣಾರಸ ಬತ್ತಿ ರೌದ್ರ ರಸ ಹರಿಯಿತು. ಅದರಿಂದ ಆಗಬಹುದಾಗಿದ್ದ ಅನಾಹುತ ತಪ್ಪಿಸಲೋ ಎಂಬಂತೆ ನನ್ನ ಸಹೋದ್ಯೋಗಿ ಬಂದರು. ಅವರು ನನ್ನ ಕಡೆ ನೋಡಿ ನುಸು ನಕ್ಕು Good Morning Sir ಅಂದಾಗ ಆ ಸೆಕ್ಯೂರಿಟಿ ಭೂಪನಿಗೆ ಜ್ಞಾನೋದಯವಾಗಿ ಶಾಂತರಸ ಹೊಮ್ಮಿತು. ರೋಗಿಗಳ ಬಗ್ಗೆ ಮಾತಾಡುತ್ತಾ ವಾರ್ಡಿನೊಳಗೆ ನಡೆದೆವು.

❖

ನ್ಯಾನೋ?..... ನೋನೋ

- ಆರೂರು ಲಕ್ಷ್ಮಣ್ ಶೇಟ್

''ನಮಸ್ಕಾರ ಸಾ!.....''

ತಲೆ ಎತ್ತಿ ನೋಡಿದೆ. ಅನಂತು ಧುತ್ತೆಂದು ಪ್ರತ್ಯಕ್ಷನಾಗಿದ್ದ.

''ಇದೇನ್ಸಾ ಬ್ಯಾಂಡೇಜು?... ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ಹೋಗಿದ್ರಾಸಾ?.... ಹಳ್ಳಿ ಹಕ್ಕಿ ತಲೆಗೆ ಕುಕ್ಕಿತಾ ಸಾ...?''

''ತಮಾಷೆ ಮಾಡ್ಬೇಡ್ವೋ.... ಸ್ಕೂಟರ್ ಸ್ಕಿಡ್ ಆಗಿ ಕೈಗೆ ಬ್ಯಾಂಡೇಜು ಬಿದ್ದಿದೆ.... ಮೈನರ್ ಆಕ್ಸಿಡೆಂಟ್, ಅಷ್ಟೇ.''

''ಸ್ಕೂಟರ್ ಕುಸಿತಾನಾ ಸಾರ್?.... ಸೆನ್ಸೆಕ್ಸ್ ಕುಸಿತ, ಸೂಚ್ಯಂಕ ಕುಸಿತಕ್ಕಿಂತ ಇದು ಡೇಂಜರ್ ಸಾರ್...''

''ಅದೆಲ್ಲ ಷೇರುಪೇಟೆ ವ್ಯವಹಾರ ಅನಂತೂ... ಕರಡಿ ಕುಣಿತ, ಗೂಳಿ ಕಾಳಗ... ನಮ್ಮಂಥಾ ಬಡಪಾಯಿಗಳಿಗಲ್ಲ'' ಎಂದೆ.

''ಕರೆಕ್ಟ್ ಸಾ!.... ಆದ್ರೆ... ನಮ್ಮಂಥಾ ಮಧ್ಯಮವರ್ಗದವರಿಗಾಗಿ ರತನ್ ಟಾಟಾರ ನ್ಯಾನೋ ಬರುತ್ತಲ್ಲಸಾ... ಸ್ಕೂಟರ್ ಸ್ಕ್ರ್ಯಾಪ್‌ಗೆ ಹಾಕಿ ನ್ಯಾನೋ ಖರೀದಿಸೋದು ಸೇಫಲ್ವಾ ಸಾರ್?''

''ಅದೆಲ್ಲಾ ರೋಡಿಗಿಳಿದ ಮೇಲಿನ ವಿಚಾರ ಅನಂತೂ... ಬುಕ್ಕಿಂಗ್ ಹ್ಯಾಗೂ ಲೇಟಿದೆಯಲ್ಲ... ಲೋನ್ ಬೇರೆ ಮಾಡ್ಬೇಕು.''

''ಅದನ್ನೂ ಅವ್ರೇ ಅರೇಂಜ್ ಮಾಡೋಲ್ವಾ ಸಾ?''

''ಡ್ರೈವರ್, ಪೆಟ್ರೋಲ್ ಎಲ್ಲಾ ಅವ್ರೇ ಕೊಡ್ತಾರೇನೋ ಭೂಪ?... ಪಾಪ!... ಜನಸಾಮಾನ್ಯರಿಗೆ ಉಪಕಾರ ಆಗ್ಲಿ ಅಂತ ಏನೋ ಮಾಡಿದ್ರೆ ನೀನು ಬಕಾಸುರನ ಬುದ್ಧಿ ತೋರಿಸ್ತೀಯಲ್ಲೋ ಅನಂತೂ.''

ಚುಚ್ಚಿದೆ.

''ರೋಡ್ ಟ್ಯಾಕ್ಸ್, ಡ್ರೈವಿಂಗ್ ಲೈಸೆನ್ಸ್, ವಿಮೆ, ಅಂದ, ಚೆಂದ ಅಂತ ಮತ್ತೆ ಐವತ್ತು ಸಾವಿರ ಖರ್ಚಾಗುತ್ತೆ ಸಾ.''

ಅನಂತು ಹಲುಬತೊಡಗಿದ.

''ಆದ್ರೂ.... ಮಿನಿ ಕಾರು ಮನೆ ಎದ್ರು ನಿಂತಿದ್ರೆ ಗತ್ತು, ಗಮ್ಮತ್ತು ಜೋರು.''

''ಆಪತ್ತು ಕೂಡ ಕಾದಿದೆ ಸಾ... ರಸ್ತೆ ತುಂಬಾ ಕಾರುಗಳದ್ದೇ ಕಾರುಬಾರು... ಮುಖಾಮುಖಿ... ಡಿಕ್ಕಿ... ಚುಂಬನ... ಆಕ್ರಂದನ...''

ಅನಂತುವಿನ ಅಪಲಾಪ ಶುರು.

"ಅಂದ್ಹಾಗೆ... ನಿನ್ನ ಕಾರು ಖರೀದಿಯ ಮಾಸ್ಟರ್ ಪ್ಲಾನ್ ಎಲ್ಲಿಗೆ ಬಂತೋ?"

"ಸ್ಯಾನೋ?... ಸೋನೋ!... ನನ್ನ ಪ್ಲಾನ್ ಬೇರೆಯೇ ಇದೆ ಸಾ....."

ನಾನು ಬೆಚ್ಚಿಬಿದ್ದೆ. ಈ ಬೃಹಸ್ಪತಿಯ ಬಂಬಾಟ್ ಪ್ಲಾನ್ ಏನಿರಬೌದು?

"ಏನಪಾ ಅದು ನಿನ್ನ ಪ್ಲಾನ್?"

"ಮಿನಿ ಪ್ಲೇನ್ ಖರೀದಿ ಮಾಡೋ ಪ್ಲಾನ್ ಸಾರ್... ಟಾಟಾ ಮಿನಿ ಕಾರ್ ತಂದ್ಮೇಲೆ ಮಲ್ಯ ಮಿನಿ ಕಿಂಗ್‌ಫಿಷರ್ ತಂದೇ ತರ್ತಾರೆ ಸಾ..."

"ಆಂ....!?"

"ಇದೆಲ್ಲಾ ಪ್ರೆಸ್ಟೀಜ್ ಪ್ರಶ್ನೆ ಸಾ.... ಮಿನಿ ಪ್ಲೇನ್‌ನಲ್ಲಿ ಜುಂ ಅಂತ ಬಾನಾಡಿ ಹಾಗೆ ಹಾರಾಡೋ ಮಜಾನೇ ಬೇರೆ ಸಾ..."

"ಹಪ್ಪ!... ಅನಂತ ಆಕಾಶದ ತುಂಬೆಲ್ಲಾ ಆರಾಮಾಗಿ ಅಲೆದಾಡೋ ಆಶೆಯೇನೋ ಅನಂತೂ....?"

ಛೇಡಿಸಿದೆ.

"ತಮಾಷೆ ಮಾಡ್ಬೇಡಿ ಸಾ... ಟ್ರಾಫಿಕ್ ಜಾಮ್ ಇಲ್ಲ, ಪಾರ್ಕಿಂಗ್ ಪ್ರಾಬ್ಲೆಂ ಇಲ್ಲ, ರೆಡ್ ಸಿಗ್ನಲ್, ಒನ್‌ವೇ, ಟೋಲ್ ನಾಕಾ, ಟರ್ನಿಂಗ್, ಜಂಪ್ಸ್, ಹಂಪ್ಸ್... ಏನೂ ಇಲ್ಲ..."

ಅನಂತು ಕುಣಿಯತೊಡಗಿದ.

"ಅನಂತೂ... ನೀನಂದ್ರೆ ನನ್ಗೆ ತುಂಬಾ ಅಭಿಮಾನ... ನಿನ್ನ ವಿಮಾನಯಾನದ ಕನಸು ನನಸಾಗಲಿ... ಹಾಗೇ, ಮಂಗಳ ಗ್ರಹಕ್ಕೂ ವಿಮಾನ ಹಾರಿಸಿ, ಮಂಗಳದ ಅಂಗಳದಲ್ಲಿ ಮೊನ್ನೆ ಕಾಣಿಸಿದ ಮಹಿಳೆಯನ್ನು ಮಾತಾಡಿಸಿ ಬಾ... ಗುಡ್ ಲಕ್!" ಎನ್ನುತ್ತಾ ಜಾಗ ಖಾಲಿ ಮಾಡಿದೆ.

❖

ಒಬ್ಬ ಡಾಕ್ಟರ ಮನೇಲಿ ನಲ್ಲಿ ಸೋರಲಾರಂಭಿಸಿತು. ಅವರು ಒಬ್ಬ ನಲ್ಲಿ ರಿಪೇರಿ ಮಾಡುವವನನ್ನು ಕರೆದು ಎಲ್ಲಾ ನಲ್ಲಿಗಳನ್ನೂ ರಿಪೇರಿ ಮಾಡಲು ಹೇಳಿದರು. ಅವನು ತುಂಬಾ ಸಮಯ ತೆಗೆದುಕೊಂಡು ಎಲ್ಲಾ ನಲ್ಲಿಗಳನ್ನೂ ರಿಪೇರಿ ಮಾಡಿ ಮುನ್ನೂರು ರೂಪಾಯಿ ಕೊಡಿ ಅಂದ. ಡಾಕ್ಟರು ಗಾಭರಿಯಾಗಿ ಏನೂ, ಮುನ್ನೂರು ರೂಪಾಯೇ, ನಾನು ಡಾಕ್ಟರಾಗಿ ಅಷ್ಟು ಹಣವನ್ನು ನನ್ನ ರೋಗಿಗಳಿಂದ ತಗೋಳಲ್ಲ ನೀನು ನೋಡಿದರೆ ಮುನ್ನೂರು ರೂಪಾಯಿ ಕೇಳ್ತಾ ಇದೀಯ ಅಂದರು. ಅದಕ್ಕೆ ನಲ್ಲಿ ರಿಪೇರಿ ಮಾಡುವವನು ಹೇಳಿದ ನಾನು ಡಾಕ್ಟರ್ ಆಗಿದ್ದಾಗ ನಾನೂ ಮುನ್ನೂರು ರೂಪಾಯಿ ತಗೋತಾ ಇರಲಿಲ್ಲ.

ಪುಣ್ಯಕೋಟಿಯೇ ಮಾತಿಗೆ ತಪ್ಪಿದಾಗ

- ಎಚ್. ಶಾಂತರಾಜ್ ಐತಾಳ್

ನೀವು ಯಾರದೋ ವಿವಾಹ ಸಮಾರಂಭಕ್ಕೆ ಹೊರಟಿರುತ್ತೀರಿ. ಪರ್‌ಫ್ಯೂಮ್ ಸಿಂಪಡಿಸಿಕೊಂಡು ಸಣ್ಣನೆ ಸಿಳ್ಳೆ ಹೊಡೆಯುತ್ತಿರುವ ನಿಮ್ಮ ಚಲನವಲನಗಳಿಂದಲೇ ಸುಳುಹು ಸಿಕ್ಕ ನಿಮ್ಮ ಮಡದಿ ಇಂತಹ ಕಡೆಗೆಲ್ಲ ನಿಮ್ಮೊಬ್ಬರನ್ನೇ ಕಳುಹಿಸುವುದು ಕ್ಷೇಮವಲ್ಲ ಎಂದು ತೀರ್ಮಾನಿಸಿಯಾಗಿರುತ್ತದೆ. 'ಒಂದೇ ಮಿನಿಟು ಮಾರಾಯ್ರೆ - ನಾನೂ ಬರ್ತೇನೆ ನಿಮ್ಮೊಟ್ಟಿಗೆ. ಅದೇನು ಒಬ್ರೇ ಹೋಗಿ ಜರತಾರಿ ಸೀರೆಗಳಿಗೆ ಲೈನ್ ಹೊಡಿಬೇಕಂತ ಇದ್ದೀರಾ?' ಈ ಮನವಿ ಆರೋಪಗಳ ಜುಗಲ್‌ಬಂದಿ ಕೇಳುತ್ತಾ ನಿಮ್ಮ ಸಿಳ್ಳೆ ಡಲ್ಲಾಗುತ್ತದೆ; ಮೈ ಸಣ್ಣಗೆ ಬೆವರುತ್ತದೆ. ಆ ಒಂದು ನಿಮಿಷ ಎಷ್ಟು ದೀರ್ಘವಾಗಿರುತ್ತದೆ ಅಂದರೆ ಕ್ಲೀನ್ ಶೇವ್ ಮಾಡಿದ ನಿಮ್ಮ ಮುಖದ ಮೇಲೆ ಮತ್ತೆ ಗಡ್ಡ ಕಾಣಿಸಿಕೊಳ್ಳುತ್ತದೆ.

ಹೋಟೆಲಿನಲ್ಲಿ ನಿಮ್ಮ ಪಾಲಿಗೆ ಬಂದ ಕಾಫಿಗೆ ಸಕ್ಕರೇನೇ ಹಾಕಿರುವುದಿಲ್ಲ. 'ತಂದೆ ಸಾರ್, ಒಂದ್ನಿಮಿಷ' ಅಂತ ಹೇಳಿ ಸಪ್ಲೈಯರ್ ಹೋಗಿರ್ತಾನೆ. ಕಾಫಿ ರುಚಿ ಹೇಗೂ ಸಪ್ಪೆ ಬಿಸಿಯಲ್ಲಾದರು ಸಪ್ಪೆಯಾಗುವುದನ್ನು ತಪ್ಪಿಸಲು ಟೈಂ ಪಾಸ್‌ಗಾಗಿ ಒಂದೊಂದು ಚಮಚದಷ್ಟು ಕಾಫಿಯನ್ನು ಎಷ್ಟೇ ನಿಧಾನವಾಗಿ ಕುಡಿದರೂ, ಮತ್ತೆ ಮಾಣಿಯ ದರ್ಶನವಾಗುವುದು ಪಕ್ಕದ ಟೇಬಲ್ಲಿನ ಹೊಸ ಗಿರಾಕಿ ಎದುರು ನೀರಿನ ಲೋಟ ಕುಕ್ಕಿ, 'ಏನ್ಕೊಡ್ಲಿ?' ಅಂತ ಕೇಳುವಾಗಲೇ. ಅಷ್ಟರಲ್ಲಿ ನಿಮ್ಮ ಕಾಫಿ ಖಾಲಿಯಾಗಿ ಅರ್ಧ ಗಂಟೆ ಕಳೆದಿರುತ್ತದೆ.

ಸಿಟಿ ಬಸ್ಸಿನಲ್ಲಿ ಕೂತು ನಾಲ್ಕು ರೂಪಾಯಿ ಟಿಕೆಟಿಗೆ ಐದು ರೂಪಾಯಿ ನಾಣ್ಯ ಕೊಟ್ಟಿರ್ತೀರಿ. ನೀವು ಮುಖ ಸಿಂಡರಿಸಿಕೊಂಡೇ ಇರುವುದನ್ನು ನೋಡಿ, ಟಿಕೆಟನ್ನಂತೂ ಹರಿದು ನೀಡಿರುತ್ತಾನೆ ಕಂಡಕ್ಟರ್ ಮಹಾಶಯ. ಇನ್ನು ಬಾಕಿ ಒಂದ್ರುಪಾಯಿ? ಕೇಳಿನೋಡಿ! ''ಕೊಟ್ಟೆ ಒಂದ್ನಿಮಿಷ!'' ಎಂದು ಹೇಳಿದ ಆಸಾಮಿ ಮತ್ತೆ ನಾಪತ್ತೆ. ಮುಂದುವರಿದವರನ್ನು ಹಿಂದಕ್ಕೂ, ಹಿಂದುಳಿದವರನ್ನು ಮುಂದಕ್ಕೂ ತಳ್ಳುತ್ತಾ, 'ಇನ್ಯಾರ್ರೀ' ಎನ್ನುತ್ತಾ ಸ್ವಲ್ಪ ಅಡ್ಜೆಸ್ಟ್ ಮಾಡಿಕೊಳ್ಳುವ ಬಗ್ಗೆ ಆತ ನೀಡುವ ಪ್ರವಚನ ಮಾತ್ರ ಕೇಳಿಸುತ್ತದೆ ನಿಮಗೆ ಮತ್ತೆ ನೀವು ಆತನನ್ನು ಒಣಕೆಮ್ಮು 'ಹಲೋ', 'ಸ್ವಾಮಿ', 'ನನ್ನ ಚಿಲ್ರೆ' ಇತ್ಯಾದಿಗಳ ಮೂಲಕ ಆಕರ್ಷಿಸಲು ಯತ್ನಿಸಿದರೆ ''ಒಂದ್ನಿಮಿಷ ತಡ್ಕೊಳ್ಳಿ ಮಾರಾಯ್ರೆ ನಾನೇನು ನಿಮ್ಮ ಒಂದ್ರುಪಾಯಿ ಗಂಟು ಹಿಡ್ಕೊಂಡು ಓಡಿ ಹೋಗ್ತೇನಾ?' ಎಂದು ನಿಮ್ಮ ತಾರೀಫು ಮಾಡಿ 'ತನ್ನಿ ನಿಮ್ಮ ಟಿಕೆಟ್' ಅಂತಾನೆ. 'ಒಳ್ಳೆ ಫಜೀತಿ. ಎಲ್ಲಿಂದ ಬರ್ತಾರೊ ಈ ಒಂದ್ರುಪಾಯಿ ದೊರೆಗಳು' ಎನ್ನುತ್ತಾ ಟಿಕೆಟ್ ನಿಮ್ಮಿಂದ ಕಿತ್ಕೊಂಡು ಅದರ ಹಿಂದೆ ಅಂಕೆಯಲ್ಲಿ ಒಂದು ಬರೆದು ಅದರ ಸುತ್ತ ಸೊನ್ನೆ ಸುತ್ತುತ್ತಾನೆ. ಅದೃಷ್ಟ ಚೆನ್ನಾಗಿದ್ದರೆ ಬಸ್ಸಿನಿಂದ ಇಳಿಯುವಾಗ

ನಿಮಗೆ ಆ 'ಒಂದು' ಸಿಕ್ಕೀತು. ಆ ದಿನದ ನಿಮ್ಮ ಭವಿಷ್ಯದಲ್ಲಿ 'ಪ್ರಯಾಣದಲ್ಲಿ ಕಿರಿಕಿರಿ; ಎದುರಾಳಿಗೆ ಧನಲಾಭ' ಎಂದೇನಾದರೂ ಇದ್ದರೆ, ಆ ಒಂದ್ನಿಮಿಷ ಗಂಟೆಯಾದೀತು. ನಿಮ್ಮ ಒಂದು ರೂಪಾಯಿ ಸೊನ್ನೆಯಾದೀತು.

ವೈದ್ಯರೊಬ್ಬರು ತಮ್ಮ ಕ್ಲಿನಿಕ್‌ನಲ್ಲಿ ರೋಗಿಗಳ ತಪಾಸಣೆ ಮಾಡುತ್ತಿರುವಾಗ ಮನೆಯಿಂದ ಫೋನ್ ಕರೆ ಬರುತ್ತದೆ. ಔಷಧ ತಯಾರಕರು ವಿಶೇಷ ಗಿಫ್ಟ್ ನೀಡೋದಕ್ಕೆ ತಾವೇ ಬಂದಿದ್ದಾರೆ ಎಂತಲೋ; ಪುಟಾಣಿ ಮಗರಾಯ ಏನೋ ಹೊಸ ಕಸರತ್ತು ಮಾಡ್ತಾ ಇದ್ದಾನೆ ಅಂತಲೋ ಹೇಳಿ "ಅಯ್ಯೋ, ನೀವೇ ಒಮ್ಮೆ ಅರ್ಜೆಂಟಾಗಿ ಬಂದು ನೋಡಿ ಹೋಗಿ ಮಾರಾಯ್ರೆ! ಎಂಬ ಅಂತಿಮ ತೀರ್ಪನ್ನೂ ಮನೆಯಾಕೆ ನೀಡಿರುತ್ತಾರೆ. "ತಡಿ ಮಾರಾಯ್ತಿ ಇಬ್ಬರು ಪೇಷಂಟ್ಸ್ ಇದ್ದಾರೆ. ಅವರನ್ನು ಒಂದ್ನಿಮಿಷದಲ್ಲಿ ಮುಗಿಸಿ ಬಂದ್ಬಿಡ್ತೇನೆ ಆಯ್ತಾ" ಅಂತಾರೆ ಡಾಕ್ಟ್ರು. ರೋಗಿಗಳಿಬ್ಬರನ್ನೂ ಒಂದೇ ನಿಮಿಷದಲ್ಲಿ ಮುಗಿಸಿ ಬಂದ್ಬಿಡ್ತೇನೆ ಆಯ್ತಾ ಅಂತಾರೆ ಡಾಕ್ಟ್ರು. ರೋಗಿಗಳಿಬ್ಬರನ್ನೂ ಒಂದೇ ನಿಮಿಷದಲ್ಲಿ ಮುಗಿಸುವುದೇನೂ ಡಾಕ್ಟರಿಗೆ ಕಷ್ಟವಾಗಲಾರದು. ಮತ್ತೆ ಅದೇ ನಿಮಿಷದಲ್ಲಿ ಮನೆಯನ್ನು ತಲುಪಬೇಕಾದರೆ ಅವರ ಒಂದೊಂದು ಸೆಕೆಂಡಿಗೆ ಎಷ್ಟು ತಾಸಿರಬಹುದು?

ರಾಜಕಾರಣಿಗಳು ವೇದಿಕೆ ಏರಿ, ತಮಗೆ ನೀಡಿದ ಐದು ನಿಮಿಷದ ಅವಧಿ ಮೀರಿ, ಮತ್ತೂ ಅರ್ಧಗಂಟೆ ಯಾವುದೇ ಅಲ್ಪವಿರಾಮ, ಅರ್ಧ ವಿರಾಮಗಳಿಗೆ ಬಗ್ಗದೆ, ಸಿಳ್ಳೆ, ಕೇಕೆ ಧ್ವನಿಗಳಿಗೆ ಜಗ್ಗದೆ, ಒಂದೇ ಡ್ರಿಲ್ ಬಿಟ್‌ನಿಂದ ಬೋರ್ ಕೊರೀತಾರೆ; ಪೂರ್ಣ ವಿರಾಮವನ್ನೇ ಮರೀತಾರೆ. ಆಗ ಅವರಿಗೆ ಸಂಘಟಕರು ಚೀಟಿ ಕಳಿಸ್ತಾರೆ ಸಾಕು ಕೊರೆದದ್ದು; ನೀರು ಬರುವ ಲಕ್ಷಣ ಇಲ್ಲ ಎಂಬರ್ಥದಲ್ಲಿ, ಅದಕ್ಕೆ ಅವರು ಹೇಳೋದೇನು? – "ಆಯ್ತು – ಇನ್ನು ಒಂದೇ ನಿಮಿಷ ಮುಗಿಸ್ತೇನೆ" ಅಂತ ಆದರೆ ಈ ಒಂದು ನಿಮಿಷ ಒಂದು ಗಂಟೆಯ ಮಟ್ಟಿಗಾದರೂ ವಿಸ್ತರಿಸದಿದ್ದರೆ, ಮೈಕ್ ಎದುರಿಗೆ ನಿಂತ ಭೂಪ ರಾಜಕಾರಣಿ ಅಲ್ಲವೆಂದೇ ಹೇಳಬಹುದು.

ನಿಮಿಷ ಗಂಟೆಯಾಗುವುದು; ಕ್ಷಣ ಯುಗವಾಗುವುದು – ಇಂತಹ ಪ್ರವೃತ್ತಿ ಕನ್ನಡಿಗರಲ್ಲೇ ಹೆಚ್ಚುತ್ತಿರುವುದೋ ಎಂದು ಸಂಶೋಧಕರು ಅಧ್ಯಯನ ನಡೆಸಿದಾಗ ಮೂಲತಃ ನಾವು ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಓದಿದ ಪಾಠವೇ ಇದಕ್ಕೆ ಕಾರಣ ಎಂಬ ಸತ್ಯಾಂಶ ಹೊರಬಿದ್ದಿದೆ. ಪುಣ್ಯಕೋಟಿ ಎಂಬ ಸತ್ಯಹರಿಶ್ಚಂದ್ರನ ವಂಶಸ್ಥ ಗೋವಿನಿಂದಲೇ 'ಕ್ಷಮಿಸಿ; ಒಂದ್ನಿಮಿಷ'ದ ಪರಂಪರೆ ಆರಂಭವಾಗಿರಬೇಕು. 'ಕೊಂದು ತಿನ್ನುವೆನು' ಎಂದ ಹುಲಿರಾಯನ ಬಳಿ ಹೋಗಿ "ಎಕ್ಸ್ ಕ್ಯೂಸ್‌ಮಿ, ಒಂದು ನಿಮಿಷದಿ ಕಂದನಿಗೆ ಮೊಲೆಯ ಕೊಟ್ಟು ಬಂದು ಸೇರುವೆನಿಲ್ಲಿಗೆ" ಎಂದು ವಾಗ್ದಾನ ಮಾಡಿ ಹೋದ ಈ ಸತ್ಯಂಭಟ್ಟೆ ವಾಪಾಸು ಬಂದದ್ದು ಅರ್ಧದಿನ ಕಳೆದ ಮೇಲೆಯೇ ಅಂತೆ. ಏನೋ ಆ ಹುಲಿಯಣ್ಣ ಪಾಪದವ! ಇಲ್ಲವಾದರೆ ನಿಮಿಷ ಕಳೆದ ಕೂಡಲೇ ತನ್ನ ವಾಚನ್ನು ದಿಟ್ಟಿಸುತ್ತಾ ಶತಪಥ ತಿರುಗಬೇಕಿತ್ತು ಆತ. ಆದರೂ, ಸಮಯ ಪರಿಪಾಲನೆಗೆ ಏನೇನೂ ಆದ್ಯತೆ ನೀಡಿದವರ ಮಧ್ಯೆ ತಾನಿರಬೇಕಾಯಿತಲ್ಲ ಎಂಬ ಪಶ್ಚಾತ್ತಾಪದಿಂದ ತನ್ನ ಜೀವವನ್ನೇ ತೊರೆದು ಅಮರನಾದ

ಅರ್ಬುದವನೆಂಬ ವ್ಯಾಘ್ರ. ಸತ್ಯ ಹೀಗಿದ್ದರೂ ಪುಣ್ಯಕೋಟಿಯ 'ಒಂದ್ನಿಮಿಷ' ಸಮಯ ಪ್ರಜ್ಞೆಯ ಬಗ್ಗೆ ಯಾರೂ ಟೀಕಿಸಿಲ್ಲ.

ಈ ರೀತಿ ಪುಣ್ಯಕೋಟಿ ಮೇಲ್ಪಂಕ್ತಿ ಹಾಕಿಕೊಟ್ಟದ್ದಕ್ಕೇ ಇರಬೇಕು ನಮ್ಮ ಜನನಾಯಕರು ಹೇಳುತ್ತಾರೆ "ನಾವೇನು ಕೊಟ್ಟಮಾತಿಗೆ ತಪ್ಪುವವರಲ್ಲ; ನಿಮ್ಮ ಪುಣ್ಯಕೋಟಿ ಏನ್ಮಾಡಿತು? ಒಂದ್ನಿಮಿಷ ಅಂತ ಹಸೀ ಸುಳ್ಳು ಹೇಳಿ ಅರ್ಧ ದಿನ ಕಳೆದ ಮೇಲೆ ಹುಲಿರಾಯನಿಗೆ ಸರೆಂಡರ್ ಆಗಲಿಲ್ವಾ? ನಮ್ಮದೇನು ಮಹಾ! ರಿಸಾರ್ಟ್‌ಗಳಲ್ಲಿ ಒಬ್ಬರಿಗೊಬ್ಬರು ಸಮಾಧಾನ ಹೇಳುತ್ತಾ, ಸಂಖ್ಯೆ ರೂಪಿಸುತ್ತಾ, ಕಾಲ ಕಳೆದದ್ದೇ ಗೊತ್ತಾಗಲಿಲ್ಲ. ಇಪ್ಪತ್ತು ತಿಂಗಳು ಹೋಗಿ ಇಪ್ಪತ್ತೊಂದಾಯಿತು. ಅಷ್ಟೇ ತಾನೆ?" ಎಂದು.

ಪುಣ್ಯಕೋಟಿ ಎಲ್ಲಾದರೂ ಸಿಕ್ಕರೆ ಹೇಳಬೇಕು "ಅಂದು ನೀನು ಒಂದ್ನಿಮಿಷ ಅಂತ ಹುಲಿರಾಯನಿಗೆ ಸಬೂಬು ಹೇಳಿ ಹೋದವಳು ಅರ್ಧದಿನ ಆತನನ್ನು ಕಾಯಿಸಿದೆಯಲ್ಲಾ; ಈಗಲಾದರೂ ಸಾರ್ವಜನಿಕವಾಗಿ ಕ್ಷಮೆಯಾಚಿಸು ಮಹಾತಾಯಿ! ಈಗಾಗಲೇ ನೀನು ಲೇಟ್ ಮಾಡಿದ್ದನ್ನೇ ಎಲ್ರೂ ಕೋಟ್ ಮಾಡ್ತಿದ್ದಾರೆ. ರಾಜಕಾರಣಿಗಳಂತೂ ನಿನ್ನನ್ನೇ ಆದರ್ಶವಾಗಿಟ್ಟುಕೊಂಡು ಬುರುಡೆ ಬಿಡ್ತಾ ಇದ್ದಾರೆ' ಅಂತ. ಅಂದಹಾಗೆ ಆಕೆಗೊಂದು ಎಸ್.ಎಂ.ಎಸ್. ಕಳಿಸಿದ್ರೆ ಹೇಗೆ? ಆಕೆಯ ಫೋನ್‌ನಂಬರ್ ಹುಡುಕ್ತೇನೆ ಒಂದ್ನಿಮಿಷ!

❖

ನಿಮ್ಮ ಮಾತು

ಅಹಲ್ಯ ಚಿಂತಾಮಣಿಯವರ ಪಂಚಕನ್ಯಾ ಸ್ಮರೇನಿತ್ಯಂ ಹಾಗೂ ಕಾಫಿ ಕುರಿತಾದ ಲೇಖನ ಚನ್ನಾಗಿ ಮೂಡಿ ಬಂದಿದೆ. ಭದ್ರಣ್ಣನವರ ನಿದ್ದೆ ಕುರಿತಾದ ಲೇಖನ ಮುದ ತಂದಿತು. ಬೇಲೂರು ರಾಮಮೂರ್ತಿಯವರ ಮೂಡಲ ಪಯಣ ಮುಗಿದೇ ಹೋಯಿತಲ್ಲ ಅನಿಸಿತು. ಪುಸ್ತಕ ಬರುತ್ತಿರುವುದು ಸಂತೋಷ

* **ಡಾ. ಬಿ. ಪ್ರಾಣೇಶರಾವ್,** ಬೆಂಗಳೂರು

ಅಪರಂಜಿ ಸೆಪ್ಟೆಂಬರ್ ಸಂಚಿಕೆಯಲ್ಲಿ ಮೂಡಿದ ಮೂಡಲ ಪಯಣ (ಬೇಲೂರು ರಾಮಮೂರ್ತಿ) ಹಾಗೂ ಕೆ.ಜಿ. ಭದ್ರಣ್ಣನವರ ನಿದ್ರೆಯ ಅವಾಂತರಗಳು ಚನ್ನಾಗಿ ಮೂಡಿಬಂದಿದೆ.

* **ಸತೀಶ್ ಎಸ್. ಕಾಖಂಡಕಿ,** ತೇರದಾಳ

ಇತ್ತೀಚೆಗೆ ಅಪರಂಜಿ ಪತ್ರಿಕೆಯನ್ನು ನೋಡಿ ಕೊರವಂಜಿ ಅಭಿಮಾನಿಯಾಗಿದ್ದ ನನಗೆ ತುಂಬಾ ಸಂತೋಷವಾಯಿತು. ಪತ್ರಿಕೆಗೆ ಸದಸ್ಯಳಾಗುವ ಬಗೆಗೆ ತಿಳಸಿ.

* **ಎಂ.ಎಸ್. ಇಂದಿರ,** ಬೆಂಗಳೂರು

ಟ್ವೆಂಟಿ ಟ್ವೆಂಟಿ

- ಕಮಲಾ ಸಿಡೇನೂರ

ವರ್ಲ್ಡ್‌ಕಪ್ 'ಟ್ವೆಂಟಿ ಟ್ವೆಂಟಿ'ಯಲ್ಲಿ ಜಯಭೇರಿ ಬಾರಿಸಿದ ಅಂದರೆ ಚಾಂಪಿಯನ್ ಆದ ಭಾರತ ಒಂದು ಹೊಸ ಕ್ರಾಂತಿಯನ್ನೇ ಕಂಡಿತು. ಅದಕ್ಕೆ ನೀವು ಕ್ರೀಡಾಕ್ರಾಂತಿ ಅನ್ನಬಹುದು. ಇಲ್ಲವೇ ಸಾಮಾಜಿಕ ಕ್ರಾಂತಿ ಎಂದೂ ಅನ್ನಬಹುದು. ಸಾಮಾಜಿಕ ಕ್ರಾಂತಿ ಯಾಕೆ? ಎಂದು ನೀವು ಕೇಳಬಹುದು. ತನ್ನ ಅಂಗಿಯನ್ನೇ ಕಳಚಿ (ಅಂಗಿ ಮಾತ್ರ) ಚಿಕ್ಕ ಬಾಲಕನಿಗೆ ತೊಡಿಸಿದ ಧೋನಿಯ ಅನುಕರಣೆ ನಮ್ಮ ಯುವಕರು ಅಂದರೆ ಜನತೆ ತಾವೂ ಅಂಗಿಯನ್ನು ಕಳಚಿ ಇತರ ಮಕ್ಕಳಿಗೆ (ಬಡ ಮಕ್ಕಳಿಗೆ ಮಾಡಿದರೆ) ತೊಡಿಸಲು ಪ್ರಾರಂಭಿಸಿರಬಹುದು. ಸಲ್ಮಾನಖಾನನನ್ನು ಹಿಂದೆ ಹಾಕಿದ 'ಧೋನಿ' ಬರಿಮೈಯಲ್ಲಿ ಸಾವಿರಾರು ಜನರ ಮುಂದೆ ತನ್ನ ವಿಶಾಲ ಹೃದಯ ತೆರೆಯಲಿಲ್ಲವೇ? ಮರುದಿನ 'ಧೋನಿ' ಪರಿವಾರದ ಮೇಲೆ ಸರಕಾರ ಹಾಗೂ ಜನತೆ ಸುರಿಸಿದ ಹಣದ ಮಳೆಯ ಬಗ್ಗೆ ಓದಿದ, ಟೀವಿಯಲ್ಲಿ ನೋಡಿದ ಭಾರತದ ಸಾಮಾನ್ಯನು ದೇವರಿಗೆ ತಾನು ಬೇಡುತ್ತಿದ್ದ ಹಿಂದಿನ ಎಲ್ಲ ವರಗಳನ್ನೂ Cancel ಮಾಡಿಸಿ ಕ್ರಿಕೆಟಿಗನಾಗುವ ವರ ಕೇಳಿರಬಹುದು. (ಮುಂದಿನ ಜನ್ಮದಲ್ಲಿಯಾದರೂ ಮಾಡಲೆಂದು)

ಮೊನ್ನೆ ನಾನು ಎಂದಿನಂತೆ ಬೆಳಿಗ್ಗೆ 7 ಗಂಟೆಗೆ ಚಹಾ ಕುಡಿದು ಸುದ್ದಿ ಪತ್ರಿಕೆಯಲ್ಲಿ ಕ್ರಿಕೆಟ್‌ನ ಅಂದಿನ ಸಮಾಚಾರ ಓದುತ್ತಿದ್ದೆ. ಆಗ ನಮ್ಮ ಪಕ್ಕದ ಮನೆಯಲ್ಲಿರುವ ಶ್ರೀಧರ ಮೂರ್ತಿಗಳು ತಮ್ಮ ಎರಡೂ ಗಂಡುಮಕ್ಕಳಿಗೆ ಬೇಕಾಬಿಟ್ಟಿ ಹೊಡೆಯುತ್ತಿದ್ದುದು ಹಾಗೂ ಅವು ಜೋರಾಗಿ ಅಳುತ್ತಿರುವುದು ಕೇಳಿಬಂತು. ನಾನು ಉತ್ತಮ ನೆರೆಹೊರೆಯವನಂತೆ (ಕಿತಾಪತಿ ಮಾಡುವ) ವಿಚಾರಿಸಿದಾಗ ಅವರು ನನ್ನ ಮೇಲೂ ಕೋಪಗೊಂಡಂತೆ ದೊಡ್ಡ ದನಿಯಲ್ಲಿ ಹೇಳಿದರು - 'ಇಬ್ಬರೂ ಈ ಬಡ್ಡಿ ಮಕ್ಕಳಿಗೆ ಒಂದು ವಾರದಿಂದ ಹೇಳುತ್ತಿದ್ದೇನೆ. ನೀವು ಇನ್ನು ಮೇಲೆ ಅಭ್ಯಾಸ ಮಾಡುವುದು ಸಾಕು, ಹೋಗಿ ಕ್ರಿಕೆಟ್ ಆಡಿ, ಪ್ರಾಕ್ಟೀಸ್ ಮಾಡಿ ಎಂದು. ಅವರು ಕೇಳುತ್ತಿಲ್ಲ. Homework ಇದೆ ಎಂದು ಬೆಳಿಗ್ಗೆಯೇ ಕುಳಿತಿದ್ದಾರೆ ಹೀಗಾದರೆ ಹೇಗೆ ಸ್ವಾಮಿ! ಈ ಮಕ್ಕಳು ಧೋನಿ ಟೀಮ್‌ನ ಸದಸ್ಯರನ್ನು ಸರಿಗಟ್ಟುವುದು ಹೇಗೆ? ಕೊನೆಯವರೆಗೂ ಬಡತನದಲ್ಲಿಯೇ ಇರಬೇಕೆ? ನೀವೇ ಹೇಳಿ ಮಹಾರಾಯರೇ! ಕ್ರಿಕೆಟ್ಟೇ ಇಂದಿನ ಜಗತ್ತು. ಐಶ್ವರ್ಯ, ಸ್ವರ್ಗ ಹಾಗೂ ಜೀವನದ ಗುರಿ.'

ಮೂರ್ತಿಗಳ ಧ್ವನಿ ಕೇಳಿ ಮತ್ತೊಬ್ಬ ಪಕ್ಕದ ಸ್ನೇಹಿತ ತನ್ನ ಆಫೀಸಿನ ಸಹೋದ್ಯೋಗಿಯ ಮಗನ ಸುದ್ದಿ ಹೇಳಿದ. ಆ ಹುಡುಗ ಪಿಯುಸಿಯಲ್ಲಿ ಓದುತ್ತಿದ್ದಾನಂತೆ. ಬೆಳಿಗ್ಗೆಯಿಂದ ರಾತ್ರಿಯವರೆಗೆ IT, IIT, USA ಎಂದು ಮಹತ್ವಾಕಾಂಕ್ಷೆಯಿಟ್ಟು ಕ್ಲಾಸುಗಳಿಗೆ ಹೋಗುತ್ತಿದ್ದ. ಧೋನಿ ಟೀಮಿನ ಯಶಸ್ಸಿನ ನಂತರ ಒಮ್ಮೆಲೆ 'ಟ್ವೆಂಟಿ ಟ್ವೆಂಟಿ' ಎಂದು ಬಡಬಡಿಸುತ್ತ ತಿರುಗಾಡುತ್ತಿದ್ದಾನಂತೆ. ಸಾವಿರಾರು ರೂಪಾಯಿಗಳನ್ನು ತೆತ್ತು ಕ್ಲಾಸುಗಳಿಗೆ ಸೇರಿಸಿದ ಅವನ ತಂದೆಯೇ ಮಗನಿಂದ ಮಂಕಾಗಿದ್ದಾರೆ.

ಅಷ್ಟರಲ್ಲಿ ಅಲ್ಲಿಯೇ ಇದ್ದ ಇನ್ನೊಬ್ಬರು ಧ್ವನಿಗೂಡಿಸಿದರು, 'ಇದೇನು ಬಿಡಿ ಮಹಾರಾಯರೇ! ನನ್ನ ಮಗಳು ನೋಡಲು ತುಂಬಾ ಚೆನ್ನಾಗಿದ್ದಾಳೆ. ಇಂಜಿನಿಯರಳಾಗಿ IT ಕಂಪನಿಯ ಕೆಲಸ. ಇದುವರೆಗೂ ಅಮೇರಿಕೆಯಲ್ಲಿ ನೆಲೆಸಿದ IT ವರ ಬೇಕೆಂದು ದುಂಬಾಲು ಬಿದ್ದಿದ್ದಳು. ಟ್ವೆಂಟಿ ಟ್ವೆಂಟಿ ಪ್ರಭಾವದಿಂದ ಕ್ರಿಕೆಟ್ ವರ ಬೇಕೆಂದು ಹೇಳಿದ್ದಾಳೆ. ಕೊನೆಗೆ BCCI ಪ್ರಕಟಿಸಿದ A,B,C,D ಯಾವುದೇ groupನ ವರನನ್ನು ನೋಡಲು ಹೇಳಿದ್ದಾಳೆ. ಅವಳು ಗಳಿಸಿದ ಲಕ್ಷಾಂತರ ರೂಪಾಯಿ ಹಾಗೂ ಡಾಲರ್ ಹಣ ಅವನಿಗೆ ಕೊಡುತ್ತಾಳಂತೆ.'

ಮೊನ್ನೆ ಮೊನ್ನೆ ನಮ್ಮೂರ College ಪಕ್ಕದಲ್ಲಿ ಒಂದು ದೊಡ್ಡ ಬೋರ್ಡ್ ನೋಡಿದೆ. ಅದರ ಮೇಲೆ '20-20' ಬರೆದಿತ್ತು. ಕುತೂಹಲದಿಂದ ವಿಚಾರಿಸಿದಾಗ ಅದು ಹೊಸದಾಗಿ ಹುಟ್ಟಿದ ಕ್ರಿಕೆಟ್ ಕಾಲೇಜು. ಅಲ್ಲಿ ಪಾಸಾದವರಿಗೆ D ಶ್ರೇಣಿಯು ಗ್ಯಾರಂಟಿ. ಅದಕ್ಕಾಗಿ Fee ಎಷ್ಟು ಗೊತ್ತಾ? ವರ್ಷಕ್ಕೆ 5 ಲಕ್ಷ, ಅಲ್ಲಿನ classನ ಸಮಯ ಬೆಳಿಗ್ಗೆ 6 ರಿಂದ 11 ಹಾಗೂ ಮಧ್ಯಾಹ್ನ 3 ರಿಂದ 7ರ ವರೆಗೆ. ಇನ್ನೆರಡು ಲಕ್ಷ ಕೊಟ್ಟರೆ ರಾತ್ರಿ ಬೆಳಕಿನಲ್ಲಿ ಆಡುವುದನ್ನು ರಾತ್ರಿಯ 10 ಗಂಟೆಯವರೆಗೆ Practice ಮ್ಯಾಚುಗಳಲ್ಲಿ ಇರುವಂತೆ ಟಿಫಿನ್, ಲಂಚ್ ಎಲ್ಲ ಸರಬರಾಜು.

ಇನ್ನು ಮುಂದೆ ಶಾಲೆ-ಕಾಲೇಜುಗಳಲ್ಲಿ ಕ್ರಿಕೆಟ್ ಕೇವಲ ಸಾಯಂಕಾಲ ಆಟವಾಡುವ ವೇಳೆಯಾಗದೇ ಅವರ ಅಭ್ಯಾಸ ಕ್ರಮದಲ್ಲಿಯೂ ಒಳಗೊಂಡು ಪೂರ್ಣಾವಧಿ ತರಬೇತಿಯಾಗಬಹುದು. ಅವರ ವಾರ್ಷಿಕ ಅಂಕಪಟ್ಟಿಯಲ್ಲಿ ಗಣಿತ, ವಿಜ್ಞಾನ ವಿಷಯಗಳೊಂದಿಗೆ Cricket ಕಾಲಮ್ ಆಗಬಹುದು. ಅದರಲ್ಲಿ ಉಪಕಾಲಮ್‌ಗಳಾಗಿ ರನ್, ವಿಕೆಟ್, ಕ್ಯಾಚಿಸ್ ಮುಂತಾದ. ಟರ್ಮಿನಲ್, ಪ್ರಿಲಿಮಿನರಿ, ವಾರ್ಷಿಕ ಪರೀಕ್ಷೆಗಳಂತೆ ಟ್ವೆಂಟಿ ಟ್ವೆಂಟಿ, 50 ಓವರ್‌ಗಳ ಒನ್ ಡೇ ಅಥವಾ 3, 5 ದಿನಗಳ ಮ್ಯಾಚ್‌ಗಳಲ್ಲಿಯ ಸಾಮರ್ಥ್ಯದ ಬಗ್ಗೆ ಉಲ್ಲೇಖ ಇರಬಹುದು.

ಕ್ರಿಕೆಟ್ ಚೆನ್ನಾಗಿ ಆಡುವವರಿಗೆ ಫೀ ರಿಯಾಯಿತಿ ಶಿಷ್ಯವೃತ್ತಿ ಹಾಗೂ ರಿಯಾಯಿತಿಗಳು ಬರಬಹುದು. ಅಂತರಶಾಲಾ, ಅಂತರಕಾಲೇಜ್, ಜಿಲ್ಲಾ ಹಾಗೂ ರಾಜ್ಯಮಟ್ಟದ ಪಂದ್ಯಾಟಗಳಲ್ಲಿ ಸಾಮಾನ್ಯ ಪರೀಕ್ಷೆಗಳಿಂದ ರಿಯಾಯಿತಿ ಇಂಜಿನಿಯರಿಂಗ್ ಮೆಡಿಕಲ್ ಮುಂತಾದ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆಗಳಿಲ್ಲದೇ ಸೇರುವ ಘೋಷಣೆ ಬರಬಹುದು.

ಏನೇ ಆದರೂ IT, BT ನಂತರ ಬರುವುದು CT (Cricket Technology). ಈ ಶತಮಾನ Cricket ಶತಮಾನವಾಗಿ ಮಾರ್ಪಡಬಹುದಾಗಿದೆ. ಸಂಶೋಧನಾಲಯಗಳು, ಪ್ರಯೋಗಾಲಯಗಳು ತಾಂತ್ರಿಕ ಕ್ಷೇತ್ರಗಳು ಕ್ರಿಕೆಟ್‌ನಲ್ಲಿ ಪ್ರಾರಂಭವಾಗುತ್ತವೆ. Cricket Medicine, Therapy, Food Technology, Literature, Entrance Test, Colleges, Indian Cricket University ಮುಂತಾದವು ಚಾಲನೆಯಲ್ಲಿ ಬರಬಹುದಾಗಿದೆ.

ಶಾಲೆ-ಕಾಲೇಜ್ ಪಠ್ಯಪುಸ್ತಕಗಳಲ್ಲಿ ಕ್ರಿಕೆಟ್‌ನ ಇತಿಹಾಸ, ಆಟಗಾರರ ಜೀವನ ಚರಿತ್ರೆ ಮತ್ತು ಘಟನೆಗಳನ್ನು ಹೆಚ್ಚಾಗಿ ಕಾಣಬಹುದು. 'ಚಕ್ ದೇ' ತರಹ ಕ್ರಿಕೆಟ್ ಮೇಲಿನ

ಸಿನೆಮಾಗಳು, ಕ್ರಿಕೆಟ್ ಓನ್ಲೈಯಲ್ಲಿನ serial ಗಳು, ಆಟಗಾರರ ಪ್ರೇಮ ಪ್ರಕರಣಗಳು ಹಾಗೂ ಪ್ರೇಮಗೀತೆಗಳು, ಶೌರ್ಯ, ಸಾಹಸ ಮುಂತಾದವುಗಳು ಹೆಚ್ಚು ಮಹತ್ವ ಕೊಟ್ಟು ಮೂಡಿಬರಬಹುದು.

ಆಟಗಾರರ ದೇವಾಲಯಗಳೂ ಬರಬಹುದು. ನಮ್ಮಲ್ಲಿಯ ರಾಮ, ಕೃಷ್ಣ ಮುಂತಾದ ಪೌರಾಣಿಕ ಕಥೆಗಳು ಬದಲಾವಣೆಯಾಗಿ ಮೂಡಿಬರಬಹುದು ಆದರೆ ಉದಾಹರಣಾರ್ಥವಾಗಿ ಕೃಷ್ಣ ಕಂಸನನ್ನು ಕೊಂದನು ಎಂದು ತೋರಿಸದೇ ಅವನನ್ನು ಅನೇಕ ಸಲ ಸೊನ್ನಕ್ಕೆ out ಮಾಡಿದನೆಂಬ ಕಥೆಗಳು ಬರಬಹುದು. ಮಹಾಭಾರತದ ಯುದ್ಧದ ಕಥೆ World Cup ಯುದ್ಧವಾಗಿ ಅರ್ಜುನನೆಂಬ ಆಟಗಾರ ಶ್ರೇಷ್ಠ ಪಂದ್ಯಪುರುಷನಾದದ್ದು. ಅದಕ್ಕಾಗಿ ಶ್ರೀ ಕೃಷ್ಣ ಕೋಚ್ ಆಗಿದ್ದನೆಂದು ತಿಳಿಸಬಹುದು.

ಕ್ರಿಕೆಟ್ ಎಂಥ ಆಟವಯ್ಯಾ?
ಕ್ರಿಕೆಟ್‌ನ ಗುಲಾಮನಾಗುವ ತನಕ ದೊರೆಯದಣ್ಣಾ ಮುಕುತಿ
ಶ್ರೀ ಪುರಂದರ ವಿಠಲ

ಉಡುಗೊರೆ ರಾಮಾಯಣ

ಆಗಿನ ಕಾಲದಲ್ಲಿ ಯಾರಾದರೂ ವಿದೇಶಕ್ಕೆ ಹೋದರೆ ಅದನ್ನು ತಗೊಂಡು ಬನ್ನಿ ಇದನ್ನು ತಗೊಂಡು ಬನ್ನಿ ಅಂತ ದುಂಬಾಲು ಬೀಳುವವರೇ ಹೆಚ್ಚು. ಅದರಲ್ಲಿಯೂ ಹೆಣ್ಣು ಮಕ್ಕಳು ಆಸೆಪಟ್ಟು ಏನೇನೋ ಕೇಳುತ್ತಿದ್ದರು. ಅವರು ವಿದೇಶಕ್ಕೆ ಹೋಗಿ ಹಿಂದಿರುಗುವಾಗ ಹೆಚ್ಚಿಗೆ ಏನೂ ತರಲಾಗಿರಲಿಲ್ಲ. ಅದಕ್ಕೆ ಕಾರಣ ಅವರಲ್ಲಿ ಹೆಚ್ಚು ಸಮಯ ಇರಲಿಲ್ಲ ಜೊತೆಗೆ ಪೌಂಡು ಖರ್ಚುಮಾಡೋದು ತುಂಬಾ ದುಬಾರಿ ಅನಿಸಿತ್ತು. ಅವರು ಮೊದಲು ಬೊಂಬಾಯಿಗೆ ಬಂದು ಇಳಿದರಲ್ಲ ಅಲ್ಲಿ ಮಗಳ ಮನೇಲಿ ಠಿಕಾಣಿ. ಮಾರನೇ ದಿನ ಬೊಂಬಾಯಿಯಲ್ಲಿ ಕೆಲವು ಪದಾರ್ಥಗಳನ್ನು ಕೊಂಡು ಇಂಗ್ಲೆಂಡಿನ ಅಂಗಡಿಯಲ್ಲಿ ಅಲ್ಲಿನ ಸೇಲ್ಸ್ ಗರ್ಲ್‌ಗೆ ಪೂಸಿ ಹೊಡೆದು ಇಸ್ಕೊಂಡು ಬಂದಿದ್ದ ಖಾಲೀ ಕವರುಗಳಿಗೆ ಈ ಪದಾರ್ಥಗಳನ್ನು ಸೇರಿಸಿ ನೀಟಾಗಿ ಪ್ಯಾಕ್ ಮಾಡಿ ಅವುಗಳನ್ನು ಇಂಗ್ಲೆಂಡಿನಿಂದ ತಂದಿದ್ದು ಅನ್ನೋ ಹಾಗೇ ಮಾಡಿ ಊರಿಗೆ ಬಂದ ಮೇಲೆ ಅದನ್ನು ಅವರ ನೆಂಟರಿಷ್ಟರಿಗೆ ಕೊಟ್ಟು ಷಹಭಾಸ್‌ಗಿರಿ ಪಡೆದುಕೊಂಡರಂತೆ.

(ರಾ.ಶಿ.ಯವರ ಪಡುವಣ ಯಾತ್ರೆಯಿಂದ)

ಬೇಂದ್ರೆ ಹಾಸ್ಯ ವಿಹಾರ

- ವಸಂತ ಅ. ಕುಲಕರ್ಣಿ

ಸಾಧನಕೇರಿಯ ಒಂದು ಸಂಜೆ, ಗಾಢವಾದ ಕತ್ತಲೆ ಕವಿದ ಸಮಯ. ಬೇಂದ್ರೆಯವರೊಡನೆ ವಾಯುವಿಹಾರ. ಒಬ್ಬ ಚಕ್ಕಡಿ ಹೊಡೆದುಕೊಂಡು ಬರುತ್ತಿದ್ದ 'ಅಪ್ಪಾರಿ ಹೋಳಾಗ್ರಿ ಅಂದꞌ' ಅಂದರೆ ದಾರಿ ಬಿಡಿ ಎಂದು ಅರ್ಥ. ನಾನು ಕೇಳಿ 'ಹೊಳಾಗ್ರಿ ಅಂದ್ರ ಏನು' 'ನಿನಗꞌ ಗೊತ್ತಿಲ್ಲೇನು ಅದರ ಒಳಾರ್ಥ?'

''ಒಂದು ಮಾವಿನಕಾಯಿ ತೆಗೊ ಅದನ್ನ ಹೆಚ್ಚು, ಎರಡು ಹೋಳಗಳ ಬ್ಯಾರೇ ಬ್ಯಾರೇ ಆಗತಾವ, ನಾವು ಭೂಮಿ ತಾಯಿ ಮಕ್ಕಳು. ನಾವಿಬ್ಬರು ಒಂದೇ ಕಾಯಿ (ತಾಯಿ) ಎರಡು ಹೋಳುಗಳು ಪಕ್ಕಕ್ಕೆ ಹೋಳಸರಿದಾಂಗ ಸರಿ'' ಎಂಥ ಅದ್ಭುತ ವಿಶ್ಲೇಷಣೆ!

''ಈ ಕತ್ತಲೆಯಲ್ಲಿ ಹುಳ ಹುಪ್ಪಡಿ ಇರತಾವ ನಿಮಗೆ ಅಂಜಿಕೆ ಬರುದಿಲ್ಲೇನು'', 'ಅಂಜಿಕꞌ ಯಾತಕ ಅಂಜಿಕಿ, ಮನುಷ್ಯನೇ ಇಲ್ಲ ಅಂದರꞌ ಅಂಜಿಕಿ ಯಾಕ ಬರ್‍ತದꞌ, ಮನುಷ್ಯ ಅಂದರ ಅಂಜಿಕꞌ, ಅವರ ವಿಚಾರ ಅಂದ್ರ ಅಂಜಕಿ ಅವನ ಪ್ರಯೋಗ ಅಂದ್ರ ಅಂಜಿಕಿ'. ಮನುಷ್ಯ ಮನುಷ್ಯನ ಸಂಬಂಧ ಉಳಿಯೋದಿಲ್ಲಾ. ಭಯದ ವಾತಾವರಣದಾಗ ಬದುಕಬೇಕಾಗಿದೆ. 'ಬಾಂಬ' ಹಾಕ್ತಾರ ಮನುಷ್ಯ ಮನುಷ್ಯನ ನಂಬಿಕೆ ಹೋಗಿ ಬಿಟ್ಟದꞌ

★★★

ಒಮ್ಮೆ ಬೇಂದ್ರೆವರನ್ನು ಭೇಟಿಯಾಗಲು ಹೋದಾಗ ಅಂದೇ ಪೇಪರಿನಲ್ಲಿ ಕೇಂದ್ರ ನಾಟಕ ಅಕಾಡೆಮಿಯು ಗೌರವ ಫೆಲೋಶಿಪ್ ನೀಡಿದ ಸುದ್ದಿ ಪ್ರಕಟವಾಗಿತ್ತು. ಸಂತೋಷಗೊಂಡು ನಾವು ಅಭಿನಂದಿಸಿದೆವು, – ಬೇಂದ್ರೆ ಅವರು ನಮ್ಮಡಗೆ ದಿಟ್ಟಿಸಿ ನೋಡಿ – ನೋಡ್ರಪಾ! ಪೇಪರದೊಳಗ ಬಂದ ಸುದ್ದಿ ನೀವು ನಂಬತಿರಿ ಅಂದಾಂಗಾತು... ನನಗಂತೂ ಏನು ಬಂದಿಲ್ಲಾ, ಫೆಲೊ ಅಂತꞌ ಫುಲಿಶ್ ಫೆಲೊ– ಅಥವಾ ಬೆಫೆಲೊ ಎಂದು ನಗೆಯಾಡಿದರು.

ಬೇಂದ್ರೆಯವರಿಗೆ 1966 ರಲ್ಲಿ ಮೈಸೂರ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತ್ತು. ಆದರಂತೆ ಬನಾರಸ್ ಹಿಂದೂ ವಿ.ವಿ. ಗೌರವ ಡಾಕ್ಟರೇಟ್ ನೀಡಿತ್ತು. ಆದರೆ ಅವರ ಮನೆಯ ಕೂಗಳತೆಯಲ್ಲಿದ್ದ ಕರ್ನಾಟಕ ಯುನಿವರ್ಸಿಟಿಯ ಸಿಂಡಿಕೇಟದಲ್ಲಿ ಡಾಕ್ಟರೇಟ ನೀಡುವ ವಿವಾದಾತ್ಮಕವಾಯಿತು. ಅದು ದ.ರಾ. ಬೇಂದ್ರೆಯವರ ಮನನೊಂದಲು ಕಾರಣವಾಯಿತು. ಅವರಿಗೆ ಡಾಕ್ಟರೇಟ್ ಬಂದರೂ ಒಂದೇ ಬಾರದಿದ್ದರೂ ಒಂದೇ, ಅದನ್ನು ಅಪೇಕ್ಷಿಸಿದವರೂ ಅಲ್ಲ, ಆದರೆ ವಿವಾದ ಅವರ ತಳಮಳಕ್ಕೆ ಕಾರಣವಾಗಿತ್ತು. ಕೊನೆಗೆ ಕರ್ನಾಟಕ ವಿ.ವಿ. ಡಾಕ್ಟರೇಟ್ ಕೊಡುವ ಬಗ್ಗೆ ನಿರ್ಧರಿಸಿತು. ಘಟಿಕೋತ್ಸವಕ್ಕೆ ನಾನು ಹೋಗಿದ್ದೆ.

ಅಂದು ಬೇಂದ್ರೆಯವರು ವ್ಯಕ್ತ ಮಾಡಿದ್ದು ಡಾಕ್ಟರೇಟ್ ಪ್ರದಾನ ಮಾಡಿದ ನಂತರ ''ಕುಲಪತಿ ಸಾಹೇಬರೇ, ಯಾರೇನು ಡಾಕ್ಟರೇಟ ಕೊಡುವ ಅಗತ್ಯವೂ ಇಲ್ಲ, ಕಾರಣವೂ ಇಲ್ಲ, ಯಾಕಂತಂದ್ರ – ಆ ಗೌರವ ಪದವಿ ನಮ್ಮ ಅವ್ವ, ಅಪ್ಪ ಹುಟ್ಟಿದಾಗ ನಿಡ್ಯಾರ ದ.ರಾ. ಬೇಂದ್ರೆ ಅಂದರ ಡಿ.ಆರ್. ಬೇಂದ್ರೆ. ಅದೇ ನನಗೆ ನೀಡಿದ ಅತ್ಯುಚ್ಚ ತಾಯಿ ತಂದೆ ನೀಡಿದ್ದು' ಹೀಗೆ ಬೇಂದ್ರೆ ಹಾಸ್ಯ ಎಷ್ಟು ಕಟು ಸತ್ಯ ಅಲ್ಲವೇ?

★★★

ಬೇಂದ್ರೆಯವರನ್ನು ಒಬ್ಬರು ಒಂದು ದಿನ ಕೇಳಿದರು. "ಕನ್ನಡದ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಬೇಂದ್ರೆ 'ಇಷ್ಟ ಕವನಾ ಬರದೇನಿ ಓದಿಲ್ಲೇನು. ನಮ್ಮ ಶರೀರದ ಕಣಕಣದಾಗ ಕನ್ನಡ ಅದS ನಮ್ಮ ಶರೀರದ ಅನೇಕ ಅಂಗಾಂಗಗಳು 'ಕ' ದಿಂದಲೇ ಪ್ರಾರಂಭವಾಗುವವು.'

"ಕಣ್ಣು, ಕಿವಿ, ಕೂದಲು, ಇದು ಕತ್ತ, ಕಂಠ, ಕಪಾಳ, ಕೆನ್ನೆ ವಸ್ತುಗಳನ್ನು ತೋರಿಸುತ್ತ ಇದು ಕನ್ನಡಕ, ಕೋಲು, ಕಾಲ್ಮರಿ, (ಕಾಲಲ್ಲಿ ಹಾಕಿಕೊಂಡದ್ದು) ಧರಿಸಿದ್ದು ಕೋಟು...

ಒಬ್ಬರು ಕುಚೇಷ್ಟೆಯಿಂದ 'ಆದರS ಇದು ಅಂಗಿ ಅಲ್ರಿ' 'ಅಲ್ಲ– ಅದು ಕುರ್ತಾ' ಬೇಂದ್ರೆ ಹೇಳಿದ್ದು ಆಶ್ಚರ್ಯವಾಯಿತು. ಇದಕ್ಕಿಂತ ಹೆಚ್ಚಿಗೆ ಏನು ಬೇಕು? ಕನ್ನಡಾಭಿಮಾನದ ಬಗ್ಗೆ? ಅಪ್ಪಟ ಕನ್ನಡ ಅಭಿಮಾನಿ! ಆದರೆ ಮಾತೃಭಾಷೆ ಮರಾಠಿ – ಮನೆಯಲ್ಲಿ ಮರಾಠಿ ಭಾಷೆ!

★★★

ಅಥಣಿ ತಾಲ್ಲೂಕ ಸ್ಥಳ. ಅಲ್ಲಿಯೇ ನನ್ನ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವಾಯಿತು. ನನ್ನ ತಂದೆ ಸ್ವಾತಂತ್ರ್ಯಯೋಧರು ಹಾಗೂ ವಕೀಲರು ಅಲ್ಲಿಯೇ ಪ್ರಸಿದ್ಧ ನ್ಯಾಯವಾದಿಗಳಾಗಿದ್ದರು.

ಬೇಂದ್ರೆಯವರು ಒಂದು ಸಾಹಿತ್ಯಕ ಕಾರ್ಯಕ್ರಮಕ್ಕಾಗಿ ಆಗಮಿಸಿದ್ದರು. ಲಚ್ಚಪ್ಪ ಮಾಸ್ತರರು ಕನ್ನಡ ಪ್ರಿಯರು, ಕಾರ್ಯಕ್ರಮ ಸಂಘಟಿಸಿದ್ದರು. ಅವರು ಹೇಳುತ್ತಿದ್ದರು. ಕಾರ್ಯದರ್ಶಿ ಅಂದರೆ 'ಥ್ಯಾಂಕ್ ಲೆಸ್ ಜಾಬ್'. ಪುಟಬಾಲ ಇದ್ದಾಂಗ ಎಲ್ಲರೂ ಒದೆಯುವವರೆ. ಅಥಣಿಯಲ್ಲಿ ಸಾಹಿತ್ಯ ಸಾಂಸ್ಕೃತಿಕ ಪ್ರೇಮ ಅಪಾರವಾದುದು. ಶ್ರೋತೃಗಳಿಗೆ ಕಡಿಮೆಯಿರಲಿಲ್ಲ. ಹಣಕ್ಕೂ ಕೊರತೆಯಿರಲಿಲ್ಲ. ಆದರೆ ಅಥಣಿಯಲ್ಲಿ ಸರಿಯಾದ ವೇಳೆಗೆ ಹೂಮಾಲೆ ದೊರೆಯುತ್ತಿರಲಿಲ್ಲ. ಸಾಂಗಲಿಯಿಂದ ಅಥವಾ ವಿಜಾಪುರದಿಂದ ತರಿಸುತ್ತಿದ್ದರು. ಆ ಕಾರ್ಯಕ್ರಮಕ್ಕೂ ಸಾಂಗಲಿಗೆ ಹೂಮಾಲೆ ತರಲು ಒಬ್ಬ ಕಾರ್ಯಕರ್ತನನ್ನು ಕಳಿಸಿದ್ದರು. ಆದರೆ ಹೋದವ ಕಾರ್ಯಕ್ರಮದ ವೇಳೆಯಾದರು ಬರಲಿಲ್ಲ, ದೊಡ್ಡ ಆತಂಕ ಎದುರಾಯಿತು. ಬೇಂದ್ರೆಯವರ ಹರಟೆ ಬಂದವರೊಡನೆ ಸಾಗಿತ್ತು. ಕೊನೆಗೆ ಹೂಮಾಲಿ ತೆಗೆದುಕೊಂಡು ಬಂದ. ಆರು ಮಾಲೆಗಳನ್ನು ತಂದಿದ್ದ. ಕಾರ್ಯಕ್ರಮ ಪ್ರಾರಂಭವಾಯಿತು. ಮಾಲಾರ್ಪಣೆ ಶುರುವಾಯಿತು. ಅಷ್ಟರಲ್ಲಿ ಊರಿನ ಗಣ್ಯರು ಕೆಲ ರಾಜಕೀಯ ಪುಢಾರಿಗಳು ಬಂದು ತಾವು ಮಾಲಾರ್ಪಣೆ ಮಾಡುವುದಾಗಿ ಪಟ್ಟು ಹಿಡಿದರು. ಮಾಲೆಗಳು ಹೆಚ್ಚಿಗೆ ಇರಲಿಲ್ಲ. ಸಂಘಟಕರು ಹಾಕಿದ ಮಾಲೆಗಳನ್ನು ಸಮಾರಂಭದ ಟೇಬಲಿನಿಂದ ಪುನಃ ಒಳಗೆ ತರಿಸಿ ಮಾಲಾರ್ಪಣೆ ಕಾರ್ಯಕ್ರಮ ಮುಂದುವರೆಸಿದರು. ಇದನ್ನೆಲ್ಲ ಬೇಂದ್ರೆಯವರು ಸೂಕ್ಷ್ಮವಾಗಿ ಗಮನಿಸುತ್ತಿದ್ದರು.

ಬೇಂದ್ರೆ ತಮ್ಮ ಉಪನ್ಯಾಸ ಪ್ರಾಂಭಿಸುತ್ತಿದ್ದಂತೆ – "ನೋಡಿ ಕಾಶಿಗೆ ಹೋದವರು ವಿಶ್ವೇಶ್ವರನನ್ನ ನೋಡಿರಬಹುದು, ಅವಗS ಹಾಕಿದ ಮಾಲೆಗಳು ಪುನಃ ಹೊರಗೆ ಹೋಗಿ ಮತ್ತೆ ಭಕ್ತರ ಕೈಯಲ್ಲಿ ಬರತಾSವ ಅದೇ ಮಾಲಿ ಪುನಃ ಪಡಿತಾನS. ಆ ವಿಶ್ವೇಶ್ವರನ ನಂತರ ಆ ಭಾಗ್ಯ ಇವತ್ತ ಬೇಂದ್ರೆಗೆ ಬಂದSದ' ನಗೆಗಡಲು ತೇಲಿತು. ಹಾಸ್ಯ ಚಟಾಕಿ ಹಾರಿಸುತ್ತ ಹೇಳಿದರು.

★★★

ಎನ್ಕೆ ಕಾಕಾ ಈ ವಿಡಂಬನೆಯನ್ನು ಬಹಳ ಚೆನ್ನಾಗಿ ಹೇಳತಿದ್ರು. ಬೇಂದ್ರೆಯವರ ಮನೆ

'ಶ್ರೀಮಾತಾ' ಹೋಗುವ ದಾರಿ – ಸಾಧನಕೇರಿ ಕ್ರಾಸಿಗೆ ಒಂದು ಮೆಂಟಲ್ ಹಾಸ್ಪಿಟಲ್ ಅದ. ಆ ಕ್ರಾಸಿಗೆ 'ಹುಚ್ಚರ ಕೂಟ' ಎಂದು ಹಾಸ್ಯ ಮಾಡುತ್ತಿದ್ದರು. ಸಾಧನಕೇರಿ 'ಕವಿಗಳ ಕೂಟ' ಆ ಹುಚ್ಚರ ಕೂಟದಾಗ ಪಾಸ ಆದಾವ ಕವಿಗಳ ಕೂಟಕ್ಕೆ ಸೇರುತ್ತಿದ್ದs.

ಬೇಂದ್ರೆಯವರ ಹತ್ತಿರ ಒಬ್ಬ (ಮುದ್ದಾಮ) ಉದ್ದಾಮ ಕವಿಗಳು ತಮ್ಮ ಕವಿತಾ ವಾಚನ ಮಾಡಹತ್ತಿದರು. ಬೇಂದ್ರೆಯವರು ಕೇಳಿ ಸುಮ್ಮನಾದರೆ, ಕವಿ ಮಹಾಶಯ ಅಭಿಪ್ರಾಯ ಕೇಳಿದ ಬೇಂದ್ರೆ ಹೇಳಿದ್ರು.

''ಹೀಂಗs ನೀ ಕವಿತಾ ಬರಕೋಂತ ಹೋಗು – ನಿನ್ನ ಗದ್ಯ ಸುಧಾರಣಾ ಆಗತದ' ಬಂದವ ತನ್ನ ಕವಿತೆಯನ್ನ ಜೇಬಿಗೆ ಮರಳಿಸಿದ.

★★★

ಬೇಂದ್ರೆಯವರನ್ನು ಭೇಡಿಸಲು ಒಬ್ಬರು ಕೇಳಿದರು ''ಸರ್ ಯಾವ ಕವಿತಾ ಹೆಚ್ಚು ಪ್ರೀತಿಯದು'' ಯಾವದು ಎಲ್ಲಾನು ಪ್ರೀತಿ ಕವಿತಾಗಳೋ ತಾಯಿಗೆ ಎಲ್ಲಾ ಮಕ್ಕಳು ಪ್ರೀತಿಯವೇ – 'ಹಂಗಾರs ನಾ ಯಾ ಕವಿತಾ ಓದಲಿ' 'ನಿನಗ ಪಸಂದ ಬಂದದ್ದು ಓದು' ಬೇಂದ್ರೆ ಮುಂದುವರೆಸಿದರು, ''ಒಂದು ಮಾತು ಹೇಳತೀನಿ, ಒಂದು ಬೆಲ್ಲದ ಗೊಂಬಿ ಕಟ್ಟೇದ, ಅದನ್ನ ನೆಕ್ಕ ಅಂತs ಹೇಳತೇನೆ, ನೀ ಕೇಳತಿ – ಎಲ್ಲಿ ನೆಕ್ಕಲಿ, ತುಟಿ ನೆಕ್ಕಲೋ, ಗಲ್ಲಾ ನೆಕ್ಕಲೋ, ಅಥವಾ ತಿಗಾ ನೆಕ್ಕಲೋ – ಆದರs ಅದು ಬೆಲ್ಲದ ಗೊಂಬಿ ಆಂತs ಗೊತ್ತಿಲ್ಲಾ, ಎಲ್ಲಿ ನೆಕ್ಕಿದರೂ ಅದು ರುಚಿ ಹತ್ತದ, ಗೊಂಬಿ ಮ್ಯಾಲ ಮುಗಿ ಬೀಳು – ನೀ ಧನ್ಯನಾಗತಿ'.

ಕವನಗಳ ಅಪಾರ ಶಕ್ತಿ ಸರಳ – ಸಹಜ – ನಿರಾಡಂಬರವಾಗಿ ಅರ್ಥಗಳು ನೀಡುತ್ತವೆ.

★★★

ಹುಬ್ಬಳ್ಳಿ ಕೆ.ಎಂ.ಸಿ. ಕರ್ನಾಟಕ ಸಂಘದ ಒಂದು ಕಾರ್ಯಕ್ರಮ. ಕಾರ್ಯದರ್ಶಿ ನೂರೆಂಟು ಜನರ ಮರ್ಜಿ ಕಾಯಬೇಕಾಗ್ತದ. ಅದರಲ್ಲೂ ಕೆಲವರು ಸ್ಟೇಜ ಮೇಲೆ ಬರಬೇಕು – ಫೋಟದಾಗ ಮೂಡಬೇಕು, ಮರುದಿನ ಪೇಪರದಾಗ ಹೆಸರು ಬರಬೇಕೆಂಬ ಹಪಾಹಪಿಯುಳ್ಳವರು ಇರತಾರ. ಅಂತಹ ಒಂದು ಘಟನೆಯಿದು, ತುಂಬ ಹೆಸರುವಾಸಿಯಾದ ಡಾಕ್ಟರರೊಬ್ಬಕ್ಕೆ ತುಂಬ ಹಣ ಕೊಡುತ್ತಿದ್ದ. ಆದರೆ ಅತಿಥಿಗಳ ಪರಿಚಯ ತಾನೇ ಮಾಡುವುದಾಗಿ ಪೀಡಿಸುತ್ತಿದ್ದ. ಇಂತಹ ಒಂದು ಪ್ರಸಂಗದಲ್ಲಿ ಡಾಕ್ಟರೊಬ್ಬ – ಬೇಂದ್ರೆಯವರನ್ನು ಪರಿಚಯಿಸುತ್ತ 'ಮುಖಸ್ತುತಿ' ತಾರಕಕ್ಕೇರಿತು. ಆತ ಹೇಳಿದ 'ಬೇಂದ್ರೆಯವರೆಂದರೆ ನೊಬೆಲ್ ವಿಜೇತ ಕವಿ ರವೀಂದ್ರನಾಥ ಟ್ಯಾಗೋರಕ್ಕಿಂತ ಒಂದು ಕೈ ಮ್ಯಾಲೆ' ಅಂದ.

ಅದು ಬೇಂದ್ರೆಯವರಿಗೆ ಹಿಡಿಸಲಿಲ್ಲ. ಕರೆದು ನನ್ನನ್ನು ಕೇಳಿದರು ಇವನ್ಯಾರು? ಎಲ್ಲಿಂದ ಹಿಡಕೊಂಡು ಬಂದಿದಿ – ಇವನ ಪರಿಚಯ ಹೇಳಿದೆ.

ಕಾರ್ಯಕ್ರಮದ ನಂತರ ಪ್ರಿನ್ಸಿಪಾಲರು ಎಲ್ಲ ಸ್ಟಾಫ್‌ದೊಡನೆ ಚಹಾಕೂಟ ಏರ್ಪಡಿಸಿದ್ದರು. ಹಾಗೂ ಸರ್ವ ಸಿಬ್ಬಂದಿಯನ್ನು ಪರಿಚಯಿಸುವವರಿದ್ದರು.

ಅಲ್ಲಿ ಈ ಪರಿಚಯ ಮಾಡಿದ ಡಾಕ್ಟರ ಬೇಂದ್ರೆಯವರ ಕಣ್ಣಿಗೆ ಬಿದ್ದ ಕರೆದು ಕೇಳಿಯೇ ಬಿಟ್ಟರು. ''ಅಲ್ರಿ ಡಾಕ್ಟರ ಸಾಹೇಬರೇ ನಾನು ರವೀಂದ್ರನಾಥ ಟ್ಯಾಗೋರಕ್ಕಿಂತ ಒಂದು ಕೈ ಮ್ಯಾಲೆ ಅಂದ್ರಿ ಅನ್ನುದು ಅಂದ್ರಿ ಇನ್ನೂ ಮೂರು ನಾಲ್ಕು ಕೈ ಮ್ಯಾಲೆ ಯಾಕ ಅನ್ನಬಾರದು...'' ಪರಿಚಯ ಮಾಡಿದವನ ಮೋರೆ ಇಂಗು ತಿಂದ ಮಂಗನಂತಾಯಿತು.

❖

ಕೊರವಂಜಿ ಅಪರಂಜಿ ಟ್ರಸ್ಟ್

ಆಯೋಜಿಸಿರುವ

ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆ 2008

ನಾಡಿನ ಪ್ರಖ್ಯಾತ ನಗೆಬರಹಗಾರ ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್

ಆಯೋಜಿಸಿದೆ. ಸ್ಪರ್ಧೆಯ ನಿಯಮಗಳು ಹೀಗಿವೆ.

1. ಒಬ್ಬರು ಒಂದು ಲೇಖನವನ್ನು ಮಾತ್ರ ಕಳುಹಿಸಬೇಕು
2. ಲೇಖನ ಫುಲ್‌ಸ್ಕೇಪ್ ಹಾಳೆಯಲ್ಲಿ 4ರಿಂದ 6 ಪುಟಗಳಿರಬೇಕು.
3. ಉತ್ತಮವಾದ ನಗೆಲೇಖನಕ್ಕೆ ಪ್ರಥಮ (ರೂ.1000/-), ದ್ವಿತೀಯ(ರೂ. 750/-) ಹಾಗೂ ಮೂರನೇ (ರೂ. 500/-) ಬಹುಮಾನಗಳಿರುತ್ತವೆ.
4. ಬಹುಮಾನಿತ ಲೇಖನಗಳನ್ನು ಅಪರಂಜಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.
5. ತೀರ್ಪುಗಾರರ ಮೆಚ್ಚುಗೆ ಪಡೆದ ನಗೆ ಲೇಖನಗಳನ್ನು ಅಪರಂಜಿಯಲ್ಲಿ ಕ್ರಮೇಣ ಬಳಸಿಕೊಳ್ಳಲಾಗುವುದು.
6. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ, ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಲೇಖನಗಳನ್ನು ವಾಪಸ್ ಕಳುಹಿಸಲಾಗುವುದಿಲ್ಲ.
7. ಲೇಖನಗಳನ್ನು : ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ' ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿ.ಟಿ.ಎಂ ಬಡಾವಣೆ 1ನೇ ಹಂತ, ಬೆಂಗಳೂರು – 560 068 ಈ ವಿಳಾಸಕ್ಕೆ ಕಳುಹಿಸಬೇಕು.
8. ಲೇಖನಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 31.10.2008.

ಅರ್ಹತೆ

- ಸಿ.ಆರ್. ಸತ್ಯ

ನಮ್ಮ ಬಡಾವಣೆಯಲ್ಲಿರುವ ಚೋಳನಾಯಕನ ಹಳ್ಳಿ ವಿಶ್ವವಿದ್ಯಾನಿಲಯ ಕಳೆದವಾರ ನನಗೆ ಗೌರವ ಡಾಕ್ಟರೇಟ್ ಪದವಿಯನ್ನು ಕೊಟ್ಟು ಗೌರವಿಸಿದ್ದು ನಿಮಗೆಲ್ಲರಿಗೂ ವಾರ್ತಾಪತ್ರಿಕೆಗಳ ಮೂಲಕ ತಿಳಿದಿರಬೇಕು. ಆದರೆ, ಅದಾದ ನಂತರ, ಅದೇ ಪತ್ರಿಕೆಗಳಲ್ಲಿ - ಡಾಕ್ಟರೇಟ್ ಪದವಿಗೆ ನಾನು ಅರ್ಹನೇ? ಈ ವಿಶ್ವವಿದ್ಯಾನಿಲಯಕ್ಕೆ ಬೇರೆ ಯಾರೂ ಸಿಗಲಿಲ್ಲವೆ? - ಎಂಬ ತಾತ್ಸಾರದ, ವ್ಯಂಗ್ಯ ಅಭಿಪ್ರಾಯಗಳನ್ನ ಬಹಿರಂಗವಾಗೇ ಕೇಳಿದ್ದಾರೆ. ಇದು ನನ್ನ ಮನಸ್ಸಿಗೆ ಅಪಾರ ನೋವುಂಟುಮಾಡಿದೆ. ಏನು ಮಾಡುವುದು ಎಂದು ತಿಳಿಯದೇ ನನ್ನ ಒಬ್ಬ ಹೆಂಡತಿಯ ಮೊರೆ ಹೋದೆ. ಆಕೆ Practical lady "ರ್ರೀ, ಆ ವಿಶ್ವವಿದ್ಯಾನಿಲಯ ನಿಮಗೆ ಅವತ್ತು ಕೊಟ್ಟ ಬಿನ್ನವತ್ತಳೆಯ ಪ್ರತಿಯನ್ನು ಎಲ್ಲರಿಗೂ ಬಹಿರಂಗ ಪಡಿಸಿ. ಅದರಲ್ಲಿ ನಿಮ್ಮ ಯೋಗ್ಯತೆಗಳ ಪಟ್ಟಿಯಿದೆಯಲ್ಲಾ.." ಅಂತ ಸೂಚಿಸಿದಳು. ಹಾಗಾಗಿ ಆ ಬಿನ್ನವತ್ತಳೆಯ ಪ್ರತಿಯನ್ನು ಕೆಳಗೆ, ನಿಮ್ಮೆಲ್ಲರ ಗಮನಕ್ಕೆ ತರುತ್ತಿದ್ದೇನೆ:

ಚೋಳನಾಯಕನಹಳ್ಳಿ ವಿಶ್ವವಿದ್ಯಾನಿಲಯ
ತಾತ್ಕಾಲಿಕ ವಿಳಾಸ: ಅಂಬಾ ಡೈರಿ (ಮಹಡಿ ಮೇಲೆ)
ಚೋಳನಾಯಕನ ಹಳ್ಳಿ ಪೋಸ್ಟ್, ಬೆಂಗಳೂರು ಉತ್ತರ.

ಈ ಬಿನ್ನವತ್ತಳೆಯ ಮೂಲಕ, ನಮ್ಮ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಕಂಟ್ರಾಕ್ಟರ್ ಚೆನ್ನಯ್ಯನವರ ಘನ ಅಧ್ಯಕ್ಷತೆಯಲ್ಲಿ, ಇಂದು ನಮ್ಮ ವಿದ್ಯಾನಿಲಯದ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ, ನಮ್ಮ ಬಡಾವಣೆಯ ಪ್ರಮುಖವಾಸಿ, ಹಿರಿಯ ಉದ್ಯಮಿ (ಹಾಲು ವ್ಯಾಪಾರ), ನಮ್ಮ ಕಟ್ಟಡದ ಮಾಲೀಕರೂ, ನಮ್ಮೆಲ್ಲರ ಹಿತೈಷಿಗಳೂ ಆದ

ಶ್ರೀ ಸಿ.ಆರ್. ಸತ್ಯ

ಅವರಿಗೆ ಈ ಶುಭದಿನದಂದು ಗೌರವ ಡಾಕ್ಟರೇಟ್ ಪದವಿಯನ್ನು ಸಲ್ಲಿಸುತ್ತಿದ್ದೇವೆ. ಹೇಳಿದ ತಕ್ಷಣ, ಕಣ್ಣು ಮಿಟುಕಿಸುವುದರಲ್ಲಿ, ಶ್ರೀ ಸತ್ಯರವರು ಇದಕ್ಕೆ ಒಪ್ಪಿಗೆ ಕೊಟ್ಟಿದ್ದು ನಮಗೆ ಅಪಾರ ಸಂತೋಷವನ್ನೂ, ಹೆಮ್ಮೆಯನ್ನೂ ಕೊಟ್ಟಿದೆ.

ಶ್ರೀ ಸತ್ಯರವರು ನಮ್ಮ ವಿಶ್ವವಿದ್ಯಾನಿಲಯದ ಹುಟ್ಟು ಹಾಗೂ ಬೆಳವಣಿಗೆಯಲ್ಲಿ ದೊಡ್ಡ ಪಾತ್ರ ವಹಿಸಿದ್ದಾರೆ. ಅದನ್ನು ಇಲ್ಲಿ ಸ್ಮರಿಸುವುದು ನಮ್ಮ ಕರ್ತವ್ಯ. ನಮ್ಮ ಕುಲಪತಿಗಳಾದ ಕಂಟ್ರಾಕ್ಟರ್ ಚೆನ್ನಮ್ಮನವರು ಚೋಳನಾಯಕನಹಳ್ಳಿಯಲ್ಲಿ ಒಂದು ವಿಶಿಷ್ಟ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಬಹು ಸಮಯದಿಂದ ಕಾದಿದ್ದು ಹಣವಿಲ್ಲದೆ, ಸ್ಥಳವಿಲ್ಲದೇ ಒದ್ದಾಡುತ್ತಿದ್ದಾಗ, ಶ್ರೀ ಸತ್ಯರವರು ಯಾವ ರೀತಿಯ ಹಿಂದೇಟೂ ಹಾಕದೆ, ತಮ್ಮ ಮನೆಯ ಮೇಲಿನ ಮಹಡಿಯನ್ನು (ಎರಡು ರೂಮುಗಳು, ಒಂದು ಹಾಲು, ಒಂದು ಬಾತ್‌ರೂಮ್) ತೀರಾ ಕಮ್ಮಿ ಬಾಡಿಗೆಗೆ (ಹತ್ತು ಸಾವಿರ ಚಿಲ್ಲರೆ) ಕೊಟ್ಟು ವಿದ್ಯಾರ್ಜನೆಗೆ ನಾಂದಿ ಹಾಡಿದರು.

ಉದ್ಘಾಟನೆಯ ದಿನ ತಮ್ಮ ಹಾಲಿನ ಡೈರಿಯಿಂದಲೇ ಕಾಫೀ ಸೇವನೆಗೆ ಅಪ್ಪಟ ಹಾಲನ್ನು ಅತಿ ಕಡಿಮೆ ದರದಲ್ಲಿ ಸರಬರಾಜು ಮಾಡಿದ್ದಲ್ಲದೇ, ಕುಡಿಯುವ ನೀರನ್ನು ಪುಕ್ಕಟೆಯಾಗಿ ಕೊಟ್ಟು ಸಮಾರಂಭಕ್ಕೆ ಕಳೆಕೊಟ್ಟರು.

ನಂತರ, ಅವರು ನಮ್ಮ ವಿಶ್ವವಿದ್ಯಾನಿಲಯದ ಏಳಿಗೆಗಾಗಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಮಾಡಿದ ಸಹಾಯಗಳು ಒಂದಲ್ಲ, ಎರಡಲ್ಲ. ಬಾಡಿಗೆಗೆ ಕೊಟ್ಟ ಹೊಸತರಲ್ಲಿ ಮಹಡಿಗೆ ಮೆಟ್ಟಿಲುಗಳೇ ಇಲ್ಲದೆ ನಮ್ಮಂತಹ ವಯಸ್ಸಾದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಏಣಿಯ ಮೇಲೆ ಏರುತ್ತಿದ್ದುದುಂಟು. ಆದರೆ ಇವರ ಕೃಪೆಯಿಂದಾಗಿ ಸಿಮೆಂಟ್‌ನಲ್ಲಿ ಮೆಟ್ಟಿಲುಗಳಾದವು. ಅವರಿಗೂ ಕೆ.ಇ.ಬಿ.ಗೂ ಇದ್ದ ಯಾವುದೋ ಒಳ ಜಗಳದಿಂದಾಗಿ ನಮ್ಮ ಮಹಡಿಗೆ ಅನೇಕ ದಿನಗಳು ವಿದ್ಯುತ್ ಪೂರೈಕೆ ಇಲ್ಲದಿದ್ದು, ತಮ್ಮದೇ ಖರ್ಚಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ಎರಡು ಡಜನ್‌ಗೂ ಹೆಚ್ಚು ಕ್ಯಾಂಡಲ್‌ಗಳನ್ನು ದಾನ ಮಾಡಿದ್ದಾರೆ. ಈ ಕ್ಯಾಂಡಲ್‌ಗಳ ಮಿಣುಕು ದೀಪಗಳಲ್ಲಿ, ನಮ್ಮ ವಿದ್ಯಾರ್ಥಿಗಳು ಓದುತ್ತಿದ್ದರೆ, ಬಾಲ್ಯರೂಪದ ಸರ್ ಎಂ. ವಿಶ್ವೇಶ್ವರಯ್ಯನವರೇ ನಮ್ಮ ಮುಂದಿದ್ದಾರೇನೋ ಎಂಬ ಭಾವನೆ ನಮ್ಮಲ್ಲಿ ಉಕ್ಕುತ್ತೆ.

ಶ್ರೀ ಸತ್ಯರವರಿಗೆ ರಂಗಗೀತೆಗಳೆಂದರೆ ಪಂಚಪ್ರಾಣ. ಅವನ್ನು ಅವರು ಅಭ್ಯಸಿಸುವ ಸಮಯಕ್ಕೂ, ಮಹಡಿಯ ಮೇಲೆ ನಮ್ಮ ರಾಸಾಯನಿಕ ಶಾಸ್ತ್ರದ ಪಾಠ ಹೇಳುವ ಸಮಯಕ್ಕೂ ಹೇಗೋ ಹೊಂದಾಣಿಕೆ ಆಗಿ, ನಮ್ಮ ಹುಡುಗರಿಗೆ ತುಂಬಾ ಮುಜುಗರವಾಗುತ್ತಿತ್ತು. ಈ ಆತಂಕವನ್ನು ಅವರ ಮುಂದೆ ಇಟ್ಟಾಗ, ಬಹಳ ದೊಡ್ಡ ಮನಸ್ಸಿನಿಂದ ರಂಗಗೀತೆಗಳ ಬದಲು ಕರ್ನಾಟಕ ಸಂಗೀತಕ್ಕೆ ಇಳಿದಿದ್ದಾರೆ. ಸಧ್ಯಕ್ಕೆ ಸ್ವರಪ್ರಸ್ತಾಪನೆಯನ್ನು ಮಾಡುತ್ತಿರಿ, ಹುಡುಗರಿಗೆ ಬೇಸಿಗೆ ರಜಾ ಬಂದ ನಂತರ ರಾಗಾಲಾಪನೆ ಮಾಡಿದರಾಯಿತು ಎಂದು ಕೊಟ್ಟ ನಮ್ಮ ಸಲಹೆಗೆ, ಯಾವ ಶರತ್ತುಗಳನ್ನೂ ಹಾಕದೆ, ಒಪ್ಪಿಕೊಂಡ ಮಹಾನುಭಾವರು ಶ್ರೀ ಸತ್ಯರವರು.

ಹಾಲಿನ ಡೈರಿ ಇಟ್ಟಿರುವ ಶ್ರೀ ಸತ್ಯರವರಿಗೆ ಹಾಲಿನಂತೆಯೇ ಮೃದು ಮನಸ್ಸು. ಇವರ ಒಂದೆರಡು ಹಸುಗಳು ಎಮ್ಮೆಗಳು ಒಮ್ಮೊಮ್ಮೆ ನಮ್ಮ ಮಹಡಿಯ ಮೆಟ್ಟಿಲುಗಳ ಮುಂದೆ ಮಲಗಿದ್ದು, ಗಂಟೆಗಟ್ಟಲೆ ಏಳದಿದ್ದಾಗ, ನಾವು ಕೆಳಗಿನಿಂದ ಮೇಲಕ್ಕಾಗಲೀ ಮೇಲಿನಿಂದ ಕೆಳಕ್ಕಾಗಲೀ ಹೋಗಲಸಾಧ್ಯವಾಗುತ್ತಿತ್ತು. ಅಂತಹ ಸಮಯದಲ್ಲಿ, ಖುದ್ದಾಗಿ ತಾವೇ ತಮ್ಮ ಸಂಗೀತ ಅಭ್ಯಾಸವನ್ನು ತಡೆಗಟ್ಟಿ, ಎಮ್ಮೆ ಹಸುಗಳನ್ನು ಎಬ್ಬಿಸಿ, ಪಕ್ಕಕ್ಕೆ ಕಟ್ಟಿ ನಮಗೆ ದಾರಿ ಮಾಡಿಕೊಡುವುದನ್ನು ನಾವು ಎಂದೆಂದೂ ಸ್ಮರಿಸಬೇಕು.

ಸ್ವತಃ ಶ್ರೀ ಸತ್ಯರವರು ಸ್ಕೂಲು ಶಾಲೆಗಳಿಗೆ ಹೋಗಿಲ್ಲದಿದ್ದರೂ, ಅವರು ಇಂದು ಒಬ್ಬ 'ವಿದ್ಯಾದಾನಿ' ಎಂದೆನಿಸಿಕೊಂಡಿದ್ದಾರೆ. ನಮ್ಮ ವಿಶ್ವವಿದ್ಯಾನಿಲಯಕ್ಕೆ ಐದುನೂರು ರೂಪಾಯಿಯ ದತ್ತಿಯನ್ನು ಕೊಟ್ಟು ಅದರಿಂದ ಬರುವ ಬಡ್ಡಿಯಲ್ಲಿ ಅತ್ಯುತ್ತಮವಾಗಿ ರಂಗಗೀತೆಯನ್ನು ಹಾಡುವ ವಿದ್ಯಾರ್ಥಿಗೆ ವಾರ್ಷಿಕ ಬಹುಮಾನ ಕೊಡಲು ಆದೇಶ ನೀಡಿದ್ದಾರೆ. ಪರಿಸರ ಪ್ರೇಮಿಯಾದ ಅವರು, ತಮ್ಮ 30 x 40 ಅಡಿ ಸೈಟಿನಲ್ಲೇ (ಡೈರಿ,

ವಿಶ್ವವಿದ್ಯಾನಿಲಯದ ಜಾಗ ಬಿಟ್ಟು) ಉಳಿದ ಜಾಗದಲ್ಲಿ ಕೊತ್ತಂಬರಿ ಸೊಪ್ಪು ದಂಟಿನ ಸೊಪ್ಪನ್ನು ಬೆಳೆಸಿ ಪೋಷಿಸಿದ್ದಾರೆ. ಈ ಹಸಿರು ವಾತಾವರಣದಲ್ಲಿ ನಮ್ಮ ಕನ್ನಡ ಎಂ.ಎ. ವಿದ್ಯಾರ್ಥಿಗಳು ಪುನರ ಜ್ಞಾನ ಪಡೆದು ಪ್ರಕೃತಿ ಕವಿಗಳಾಗಿಯೋ ಪ್ರೇಮ ಕವಿಗಳಾಗಿಯೋ ಪರಿವರ್ತನರಾಗುತ್ತಾರೆ ಎಂಬುದೇ ನಮ್ಮ ಕನ್ನಡ ಇಲಾಖೆಯ ಆಸೆ.

ಯಾವುದೋ ಚಿಕ್ಕ ಕಾರಣದಿಂದಾಗಿ, ಇತ್ತೀಚೆಗೆ ಶ್ರೀ ಸತ್ಯರವರು ಮೂರು ತಿಂಗಳು ಜೈಲು ವಾಸಿಯಾಗಿದ್ದಾಗ್ಯೂ, ಅವರ ಮನೆಯವರು ಅದೇ ಕರುಣೆ ಮಮತೆಯಿಂದ ನಮ್ಮ ವಿಶ್ವವಿದ್ಯಾನಿಲಯಕ್ಕೆ ಎರಡು ಆಧಾರ ಕಂಬಗಳ ಹಾಗೆ ನಿಂತಿದ್ದರು (ಅವರಿಗೆ ಇಬ್ಬರು ಹೆಂಡತಿಯರು)

ಹೀಗೆ, ನಮ್ಮ ಸಂಸ್ಥೆಯ ಹುಟ್ಟು ಬೆಳವಣಿಗೆಯಲ್ಲಿ ಪಾಲಾಗಿ, ನಮ್ಮ ವಾಸದ ಮಾಲೀಕರಾಗಿ, ವಿದ್ಯಾದಾನಿಗಳಾಗಿ, ನಾವು ನೆಲೆಸಿರುವ ಕಟ್ಟಡಕ್ಕೆ ನೀರು, ಗಾಳಿ, ಬೆಳಕನ್ನು ನೀಡುವ ವರುಣ-ವಾಯು-ಸೂರ್ಯನಾಗಿರುವ ನಮ್ಮವರೇ ಆದ ಶ್ರೀ ಸತ್ಯರವರಿಗೆ, ನಮ್ಮ ವಿಶ್ವವಿದ್ಯಾಲಯ ಸೆನೆಟ್‌ನ ಪೂರ್ವ ಪೂರ್ಣ ಸಮ್ಮತಿಯೊಂದಿಗೆ, ನಿಮ್ಮೆಲ್ಲರ ಪರವಾಗಿ ಈ ಗೌರವ ಡಾಕ್ಟರೇಟ್ ಪದವಿಯನ್ನು ಅರ್ಪಿಸುತ್ತಿದ್ದೇನೆ. ಜೈ ಕರ್ನಾಟಕ ಮಾತೆ!

ಅಕ್ಷರಸ್ವಾಮಿ ಹಲಗುಂದಿ

ಉಪ ಕುಲಪತಿ

ಇನ್ನು ಇದಕ್ಕಿಂತ ಹೆಚ್ಚಾಗಿ ತನ್ನ ಅರ್ಹತೆ ಬಗ್ಗೆ ನನಗೆ ಸಾಬೀತು ಮಾಡಲು ಸಾಧ್ಯ?

❖

ಯಾರು ಮೊದಲು

ಒಬ್ಬ ಬಾಸು ತನ್ನ ಇಬ್ಬರು ಸಹೋದ್ಯೋಗಿಗಳೊಂದಿಗೆ ಹೊರಗಡೆ ಊಟಕ್ಕೆ ಹೋದರು. ಆಗ ಒಂದು ಅಶರೀರವಾಣಿ ಕೇಳಿಬಂತು. ನೀವು ಏನು ಬೇಕಾದರೂ ವರ ಕೇಳಿ ನಾನು ಕೊಡುತ್ತೇನೆ. ಪರೀಕ್ಷೆ ಮಾಡಿಯೇ ಬಿಡೋಣ ಅಂತ ಒಬ್ಬ ಸಹೋದ್ಯೋಗಿ ತಕ್ಷಣ ಕೇಳಿದ. ನಾನು ಸಿಂಗಾಪೂರ್‌ನಲ್ಲಿ ಶ್ರೀಮಂತನಾಗಿ ಜೀವನ ಮಾಡಬೇಕು. ತಕ್ಷಣ ಅವನು ಸಿಂಗಾಪೂರ್‌ನಲ್ಲಿದ್ದ. ಇನ್ನೊಬ್ಬ ಕೇಳಿದ. ನಾನು ಅಮೆರಿಕಾದಲ್ಲಿ ತುಂಬಾ ಸಾಹುಕಾರನಾಗಿ ಜೀವನ ಸಾಗಿಸುತ್ತಿರಬೇಕು. ಅವನೂ ಹೊರಟುಹೋದ. ಈಗ ಬಾಸ್ ಸರದಿ. ಅವನು ಕೇಳಿದ. ಆ ಇಬ್ಬರೂ ಬಡ್ಡಿಮಕ್ಕಳು ಊಟ ಮಾಡಿಕೊಂಡು ಇನ್ನರ್ಧ ಗಂಟೇಲಿ ವಾಪಸ್ ಆಫೀಸಿಗೆ ಬಂದು ಕೆಲಸ ಮಾಡ್ತಿರಬೇಕು.

ನೀತಿ : ಯಾವಾಗಲೂ ಬಾಸ್‌ಗೆ ಮೊದಲು ಮಾತಾಡಲು ಅವಕಾಶ ಕೊಡಬೇಕು.

Mailing Date
5th of every month
Mailed at Rajajinagar PO

CPMG/KA/BGW-544/2006-2008
RNI-KAR-KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR